www.pra

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2024–25ನೇ ಸಾಲಿನ ಬಜೆಟ್

ಹೊಸ ಆದಾಯದತ್ತ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಕ್ಷೇತ್ರಗಳ ಅಭಿವೃದ್ಧಿ ಯೋಜನೆಗಳನ್ನು 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯ ಹೆಸರಿನಲ್ಲಿ ಒಟ್ಟುಗೂಡಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2024–25ನೇ ಸಾಲಿನ ಬಜೆಟ್ ಮಂಡಿಸಲಾಗಿದೆ.

ಆಡಳಿತಗಾರ ರಾಕೇಶ್ ಸಿಂಗ್ ಅನುಮೋದನೆ ನೀಡಿದ ಬಜೆಟ್ ಅನ್ನು, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರ ಸಮ್ಮುಖದಲ್ಲಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಎಚ್. ಕಲಕೇರಿ ಅವರು ಪುರಭವನದಲ್ಲಿ ಗುರುವಾರ ಮಂಡಿಸಿದರು.

ಆಸ್ತಿ ತೆರಿಗೆ, ಪ್ರೀಮಿಯಂ ಎಫ್ಎಆರ್, ಜಾಹೀರಾತು ನೀತಿಗಳಿಂದ ಹೆಚ್ಚುವರಿ ಆದಾಯ ಕ್ರೋಡೀಕರಿಸಲು ನಿರ್ಧರಿಸಲಾಗಿದ್ದು, ಮಾರ್ಗಸೂಚಿ ದರದಂತೆ ಆಸ್ತಿ ತೆರಿಗೆ ವ್ಯವಸ್ಥೆಯನ್ನು 2024ರ ಏಪ್ರಿಲ್ 1ರಿಂದಲೇ ಜಾರಿಗೆ ತರಲಾಗುತ್ತದೆ.

ಕಂದಾಯ ಇಲಾಖೆಯ ಭೂಮಾಪನಾ ಇಲಾಖೆಯಡಿಯ ನಗರ ಭೂಮಾಪನ ಇಲಾಖೆಯು ಡ್ರೋನ್ ಆಧಾರಿತ ನಗರ ಸರ್ವೆ ಮೂಲಕ ಆಸ್ತಿಗಳ ಡಿಜಿಟಲೀಕರಣ ಮತ್ತು ವಿವರಗಳನ್ನು ರಚಿಸಿದೆ. 163 ವಾರ್ಡ್‌ಗಳಲ್ಲಿ ಈ ವಿವರ ಲಭ್ಯವಿದ್ದು, ಇವುಗಳ ಆಧಾರದಲ್ಲಿ ಆಸ್ತಿಗಳ ತೆರಿಗೆಯನ್ನು ಲೆಕ್ಕ ಹಾಕಲಾಗುತ್ತದೆ.

2023–24ನೇ ಸಾಲಿಗಿಂತ ₹486 ಕೋಟಿಯಷ್ಟು ಮಾತ್ರ ಹೆಚ್ಚಿನ ಬಜೆಟ್ ಅನ್ನು 2024–25ನೇ ಸಾಲಿಗೆ ಮಂಡಿಸಲಾಗಿದೆ. ಒಟ್ಟು ₹ 12,371.63 ಕೋಟಿ ಗಾತ್ರದ ಆಯವ್ಯಯದಿಂದ ₹2.17 ಕೋಟಿ ಉಳಿತಾಯವನ್ನು ನಿರೀಕ್ಷಿಸಲಾಗಿದೆ.

ನಗರಕ್ಕೆ ಮೂಲಸೌಕರ್ಯ, ಸಂಚಾರ, ಪರಿಸರ ಸುಸ್ಥಿರತೆಯನ್ನು ಒದಗಿಸಲು ಪಾಲಿಕೆಗೆ ಸವಾಲುಗಳಿದ್ದು, ಬೆಳೆಯುತ್ತಿರುವ ಜನಸಂಖ್ಯೆಗೆ ವಿಶೇಷ ಸವಲತ್ತುಗಳೊಂದಿಗೆ ಜೀವನ ಗುಣಮಟ್ಟ ಹೆಚ್ಚಿಸುವ ಗುರುತರ ಜವಾಬ್ದಾರಿ ಪಾಲಿಕೆಯ ಮೇಲಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರಿಗೆ ಕೊಡುಗೆ: ಲಿಂಗತ್ವ ಅಲ್ಪಸಂಖ್ಯಾತರ ಅನುಕೂಲಕ್ಕಾಗಿ ರಾತ್ರಿ ನಿರಾಶ್ರಿತರ ತಂಗುದಾಣ ನಿರ್ಮಿಸಲು ಮತ್ತು ಈಗಿರುವ 48 ರಾತ್ರಿ ನಿರಾಶ್ರಿತರ ತಂಗುದಾಣಗಳ ನಿರ್ವಹಣೆಗೆ ₹ 4 ಕೋಟಿ ಮೀಸಲಿರಿಸಲಾಗಿದೆ.

ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ವಿದ್ಯುತ್‌ಚಾಲಿತ ಆಟೊ/ಗೂಡ್ಸ್ ವಾಹನ ಖರೀದಿಗಾಗಿ ಇ–ಸಾರಥಿ ಯೋಜನೆಯಡಿ ₹ 5 ಕೋಟಿ ಒದಗಿಸಲಾಗಿದೆ.

ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಲು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ಹಾಗೂ ಆರ್ಥಿಕವಾಗಿ ಹಿಂದುಳಿದ ಇತರೆ ವರ್ಗಗಳಿಗೆ ಸಹಾಯ ಹಸ್ತವಾಗಿ ಯೋಜನಾ ವೆಚ್ಚದ ಶೇ 50 ಅಥವಾ ಗರಿಷ್ಠ ₹ 1.5 ಲಕ್ಷ ಸಹಾಯಧನ ನೀಡಲು ₹ 10 ಕೋಟಿ ಮೀಸಲಿಡಲಾಗಿದೆ.

₹6000 ಕೋಟಿ - ಕಂದಾಯ

ವಾಣಿಜ್ಯ ಆಸ್ತಿಗಳನ್ನು ಗುತ್ತಿಗೆ ಆಧಾರದಲ್ಲಿ ನೀಡಲು ನೀತಿ ರಚಿಸಲಾಗುತ್ತಿದೆ. ಇದರಿಂದ ಆಸ್ತಿಗಳ ರಕ್ಷಣೆಯಿಂದ ಉತ್ತಮ ಆದಾಯ ಗಳಿಸಲು ಚಿಂತಿಸಲಾಗಿದೆ. ಟಿಡಿಆರ್ ರಚನೆ ಮತ್ತು ವಿತರಣೆಯನ್ನು ಸಂಪೂರ್ಣ ಆನ್‌ಲೈನ್‌ನಲ್ಲಿ ನಿರ್ವಹಣೆ ಮಾಡಲಾಗುತ್ತದೆ. ಖರೀದಿ ಮತ್ತು ಮಾರಾಟವೂ ಆನ್‌ಲೈನ್‌ನಲ್ಲೇ ನಡೆಯುವುದರಿಂದ ಪಾರದರ್ಶಕವಾಗಿ ಹೆಚ್ಚಿನ ಆದಾಯ ಬರುತ್ತದೆ. ಮಾರ್ಗಸೂಚಿ ದರ ಆಸ್ತಿ ತೆರಿಗೆ ಜಾರಿಯೂ ಸೇರಿದಂತೆ ಕಂದಾಯ ವಿಭಾಗದಿಂದ ₹6 ಸಾವಿರ ಕೋಟಿ ಆದಾಯ ನಿರೀಕ್ಷಿಸಲಾಗಿದೆ.

₹500 ಕೋಟಿ - ಜಾಹೀರಾತು ನೀತಿ

ಪಾಲಿಕೆಯ ಜಾಹೀರಾತು ನಿಯಮಗಳು 2024ರ ಮೂಲಕ ಹೊಸ ನೀತಿ ರಚಿಸಿ, ಪಾರದರ್ಶಕ ಮತ್ತು ನಿಯಂತ್ರಿತ ವ್ಯವಸ್ಥೆಯಲ್ಲಿ ಜಾಹೀರಾತಿಗೆ ಅನುಮತಿ ನೀಡಲು ನಿರ್ಧರಿಸಲಾಗಿದೆ. ನವದೆಹಲಿ ಮುನ್ಸಿಪಲ್ ಕಾರ್ಪೊರೇಷನ್ ಜಾಹೀರಾತು ನೀತಿಯಂತೆ ಪಾಲಿಕೆ ನೀತಿ ರೂಪಿಸಿ, ನಗರದ ಸೌಂದರ್ಯ ವೃದ್ಧಿಗೊಳಿಸಲಾಗುತ್ತದೆ ಹಾಗೂ ಸ್ಥಳ ವಿರೂಪಗೊಳಿಸುವುದನ್ನು ತಡೆಯಲಾಗುತ್ತದೆ. ಆನ್‌ಲೈನ್, ಮೊಬೈಲ್ ವ್ಯವಸ್ಥೆಯನ್ನು ಜಾರಿಗೆ ತಂದು, ಜಾಹೀರಾತಿನಿಂದ ವಾರ್ಷಿಕ ₹500 ಕೋಟಿ ಆದಾಯ ನಿರೀಕ್ಷಿಸಲಾಗಿದೆ.

₹1,709 ಕೋಟಿ - ನಗರ ಯೋಜನೆ

ಪ್ರೀಮಿಯಂ ಎಫ್‌ಎಆರ್ ಅನ್ನು ಆನ್‌ಲೈನ್ ಪಾರದರ್ಶಕ ವ್ಯವಸ್ಥೆಯಲ್ಲಿ ಜಾರಿಗೆ ತಂದು, ಬಿಬಿಎಂಪಿ ಇ–ಖಾತಾ ವ್ಯವಸ್ಥೆಯಲ್ಲಿ ಖರೀದಿಸಲು ಅನುವು ಮಾಡಲಾಗುತ್ತದೆ. ಮಾಹಿತಿ ತಂತ್ರಜ್ಞಾನದಲ್ಲಿ ಪ್ರೀಮಿಯಂ ಎಫ್‌ಎಆರ್ ಬಳಕೆಯನ್ನು ಲೆಕ್ಕ ಹಾಕಲಾಗುತ್ತದೆ. ಈ ಶುಲ್ಕದಿಂದ ₹1,000 ಕೋಟಿ ಸೇರಿ ಒಟ್ಟು ₹1,709 ಕೋಟಿಯನ್ನು ನಗರ ಯೋಜನೆಯಲ್ಲಿ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ಬ್ರ್ಯಾಂಡ್ ಬೆಂಗಳೂರುಗೆ ₹1,580 ಕೋಟಿ

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಲ್ಲೇ ಕೆಲವು ಯೋಜನೆಗಳನ್ನು ರೂಪಿಸಲಾಗಿದೆ. ಪ್ರೀಮಿಯಂ ಎಫ್‌ಎಆರ್ ಹಾಗೂ ಜಾಹೀರಾತು ನೀತಿಯಿಂದ ಬರುವ ಹೆಚ್ಚುವರಿ ಆದಾಯದಿಂದ ಈ ಯೋಜನೆಗಳ ಅನುಷ್ಠಾನ ಮಾಡಲಾಗುತ್ತದೆ. ಇದಕ್ಕಾಗಿ ಪ್ರತ್ಯೇಕ 'ಎಸ್ಕ್ರೊ' ಖಾತೆ ತೆರೆದು, ₹1,580 ಕೋಟಿಗಳನ್ನು ವರ್ಗಾಯಿಸಿ, ಆದ್ಯತೆ ಮೇರೆಗೆ ಹಣ ಪಾವತಿ ಮಾಡಲು ನಿರ್ಧರಿಸಲಾಗಿದೆ. ಈ ಯೋಜನೆಯಲ್ಲಿರುವ ಕಾಮಗಾರಿಗಳೆಂದರೆ:

₹880 ಕೋಟಿ: ಸುಗಮ ಸಂಚಾರ ಬೆಂಗಳೂರು

- ₹300 ಕೋಟಿ – ರಸ್ತೆ ವೈಟ್ ಟಾಪಿಂಗ್
- ₹100 ಕೋಟಿ – ರಾಜಕಾಲುವೆ ಬಫರ್ ವಲಯ ಅಭಿವೃದ್ಧಿ
- ₹50 ಕೋಟಿ – ಆರ್‌ಎಂಪಿಯಂತೆ ರಸ್ತೆ ವಿಸ್ತರಣೆ
- ₹50 ಕೋಟಿ – ಆರ್‌ಎಂಪಿಯಂತೆ ರಸ್ತೆ ನಿರ್ಮಾಣ
- ₹200 ಕೋಟಿ – ಸುರಂಗ ರಸ್ತೆ ಯೋಜನೆ ಡಿಪಿಆರ್
- ₹30 ಕೋಟಿ – ಪಾದರಾಯನಪುರ ರಸ್ತೆ ವಿಸ್ತರಣೆ
- ₹100 ಕೋಟಿ – ಸಂಯುಕ್ತ ಮೆಟ್ರೊ–ರಸ್ತೆ ಮೇಲ್ಸೇತುವೆ ಮಾರ್ಗ
- ₹50 ಕೋಟಿ – ಬನಶಂಕರಿ ವೃತ್ತದಲ್ಲಿ ವೃತ್ತಾಕಾರದ ಪಾದಚಾರಿ ಮೇಲ್ಸೇತುವೆ

₹225 ಕೋಟಿ– ಆಕರ್ಷಕ ಬೆಂಗಳೂರು

- ₹100 ಕೋಟಿ – ನಗರ ಪ್ರಮುಖ ತಾಣಗಳಲ್ಲಿ ಬಣ್ಣದ ದೀಪ
- ₹25 ಕೋಟಿ – ಜಂಕ್ಷನ್‌ಗಳ ಸೌಂದರ್ಯೀಕರಣ
- ₹50 ಕೋಟಿ – ಸ್ಕೈ–ಡೆಕ್ ನಿರ್ಮಾಣದ ಪ್ರಾರಂಭಿಕ ಯೋಜನಾ ವೆಚ್ಚ
- ₹50 ಕೋಟಿ – ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಧಿ

₹50 ಕೋಟಿ– ಟೆಕ್ ಬೆಂಗಳೂರು

₹50 ಕೋಟಿ– ಶಿಕ್ಷಣ ಬೆಂಗಳೂರು

ಶೈಕ್ಷಣಿಕ ಪ್ರಗತಿ ಕಾರ್ಯಕ್ರಮಗಳು, ಉನ್ನತ ಗುಣಮಟ್ಟದ ಶಿಕ್ಷಣ, ಸಮವಸ್ತ್ರ, ಮೂಲಸೌಕರ್ಯ ಅಭಿವೃದ್ಧಿ

₹150 ಕೋಟಿ– ಸ್ವಚ್ಛ ಬೆಂಗಳೂರು

- ₹100 ಕೋಟಿ – ತ್ಯಾಜ್ಯ ಸಂಸ್ಕರಣೆಗೆ ಜಮೀನು ಖರೀದಿ
- ₹10 ಕೋಟಿ – ಸಾರ್ವಜನಿಕ ಶೌಚಾಲಯ
- ₹10 ಕೋಟಿ – ಘನತ್ಯಾಜ್ಯ ನಿರ್ವಹಣೆ ಉಪಕರಣ
- ₹30 ಕೋಟಿ – ಗುಡಿಸುವ ಯಂತ್ರ

₹125 ಕೋಟಿ– ಆರೋಗ್ಯಕರ ಬೆಂಗಳೂರು

- ₹80 ಕೋಟಿ – ತುರ್ತು ಆರೋಗ್ಯ ಸೇವೆ, ಪ್ರಯೋಗಾಲಯ, ವಾರ್ ರೂಂ
- ₹10 ಕೋಟಿ – ಪಶು ಸಂಗೋಪನೆ- ಕಸಾಯಿಖಾನೆ ನಿರ್ಮಾಣ
- ₹15 ಕೋಟಿ – ಚಿತಾಗಾರ ಮತ್ತು ಸ್ಮಶಾನ ಅಭಿವೃದ್ಧಿ
- ₹20 ಕೋಟಿ – ಶಾಂತಿನಗರದಲ್ಲಿ ಆಸ್ಪತ್ರೆ ನಿರ್ಮಾಣ

₹100 ಕೋಟಿ– ಹಸಿರು ಬೆಂಗಳೂರು

- ₹10 ಕೋಟಿ – ವಿಪತ್ತು ನಿರ್ವಹಣೆ
- ₹35 ಕೋಟಿ – ಕೆರೆಗಳ ಅಭಿವೃದ್ಧಿ, ಗಡಿಗಳಿಗೆ ಬೇಲಿತಂತಿ
- ₹15 ಕೋಟಿ – ಎರಡು ಹೊಸ ಸಸ್ಯಕ್ಷೇತ್ರ, ಆರೈಕೆ ಕೇಂದ್ರ
- ₹35 ಕೋಟಿ – ಬಿಡಿಎ, ಕೆಐಎಡಿಬಿ ಬಡಾವಣೆಗಳಲ್ಲಿನ ಉದ್ಯಾನ ಅಭಿವೃದ್ಧಿ
- ₹5 ಕೋಟಿ – 10 ಕಲ್ಯಾಣಿಗಳ ಪುನರುಜ್ಜೀವನ

ಜನ ಕಲ್ಯಾಣಕ್ಕೆ ಆದ್ಯತೆ

ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ನೇರ ಪಾವತಿಯಡಿ ಕರ್ತವ್ಯ ನಿರ್ವಹಿಸಲು ನಿವೃತ್ತರಾಗುವ ಪೌರಕಾರ್ಮಿಕರಿಗೆ ಪಿಂಚಣಿ ಯೋಜನೆ ಜಾರಿಗೆ ತರಲು ₹ 137.50 ಕೋಟಿ ಮೀಸಲಿಡಲಾಗಿದೆ.

ಕಾರ್ಮಿಕ ಮಹಿಳೆಯರು ಮತ್ತು ಪೌರಕಾರ್ಮಿಕರಿಗೆ ವಿದ್ಯುತ್ ದ್ವಿಚಕ್ರ ವಾಹನಗಳನ್ನು ಒದಗಿಸಲು, ಅಂಗವಿಕಲರಿಗೆ ಹೆಚ್ಚುವರಿ ಚಕ್ರ ಅಳವಡಿಸಿರುವ ವಾಹನ ನೀಡಲು ಒಟ್ಟು ₹ 12 ಕೋಟಿ ಇಡಲಾಗಿದೆ.

ನೇರಪಾವತಿ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ₹ 5 ಲಕ್ಷ ಸಹಾಯಧನ ಒದಗಿಸಲಾಗುತ್ತಿದೆ. ಎಸ್‌ಸಿ, ಎಸ್‌ಟಿ, ಒಬಿಸಿ, ಅಂಗವಿಕಲರು ಸೇರಿದಂತೆ ಎಲ್ಲ ಬಡವರಿಗೆ ಆರ್ಥಿಕ ಸಹಾಯಕ್ಕಾಗಿ ಒಟ್ಟು ₹ 211 ಕೋಟಿ ಮೀಸಲಿಡಲಾಗಿದೆ.

ವಲಯಕ್ಕೆ ಒಂದರಂತೆ 8 ವೃದ್ಧಾಶ್ರಮ ತೆರೆಯುವ ಯೋಜನೆ ಇದೆ. ಸದ್ಯ ಬಾಡಿಗೆ ಜಾಗದಲ್ಲಿ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ 'ಶ್ರವಣ ವಸತಿ ವೃದ್ಧಾಶ್ರಮ' ತೆರೆಯಲು ₹ 4 ಕೋಟಿ ಇರಿಸಲಾಗಿದೆ.

ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಅಶಕ್ತ ಹಾಗೂ ದಮನಿತ ಸಮುದಾಯಗಳ ಕಾರ್ಯನಿರತ ಹೆಣ್ಣು-ಮಕ್ಕಳಿಗೆ ಸುರಕ್ಷಿತ ವಸತಿ ಒದಗಿಸಲು 8 ವಲಯಗಳಲ್ಲಿ 'ಸಾವಿತ್ರಿ ವಸತಿ ನಿಲಯ' ತೆರೆಯಲಾಗುವುದು. ಅದಕ್ಕೆ ₹ 4ಕೋಟಿ ಮೀಸಲಿರಿಸಲಾಗಿದೆ.

ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ಮತ್ತು ಹೊಸ ಪಟ್ಟಣ ಮಾರಾಟ ಸಮಿತಿ ರಚನೆಯನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ. ಮಾರಾಟ ವಲಯ, ನಿರ್ಬಂಧಿತ ವಲಯ ಪ್ರದೇಶ ಗುರುತಿಸಲಾಗುವುದು. ಪಾದಚಾರಿ ಮಾರ್ಗದಲ್ಲಿ ನಡೆದಾಡಲು ತೊಂದರೆಯಾಗದಂತೆ ಮಾರಾಟ ಚಟುವಟಿಕೆ ನಡೆಸಲು 5,000 ಜನರಿಗೆ ಸಬ್ಸಿಡಿ ಆಧಾರಿತ ಇ–ವೆಂಡಿಂಗ್ ರಿಕ್ಷಾ ಒದಗಿಸುವ ಯೋಜನೆ ಜಾರಿಗೆ ತರಲಾಗುತ್ತಿದೆ. ಇದಕ್ಕಾಗಿ ₹ 50 ಕೋಟಿ ಮೀಸಲಿಡಲಾಗಿದೆ. ಇದರಲ್ಲಿ ಮಹಿಳೆಯರಿಗೆ ಮತ್ತು ಲಿಂಗತ್ವ ಅಲ್ಪ ಸಂಖ್ಯಾತರಿಗೆ ₹ 1.50 ಲಕ್ಷ, ಇತರರಿಗೆ ₹ 1 ಲಕ್ಷ ಸಹಾಯಧನ ಸಿಗಲಿದೆ.

ಯಾಕಪ್ಪ ಬೇಕು ಇಂತಹ ಜೀವನ ಅನ್ನಿಸಿ ಬಿಟ್ಟಿತ್ತು.
ಅಮೃತ್ ನೋನಿ ಡಿ–ಪ್ಲಸ್
ತೆಗೆದುಕೊಂಡ ಮೇಲೆ ಆಶ್ಚರ್ಯ ಆಗೋ ಹಾಗೆ
ನನ್ನ ಶುಗರ್ ಲೆವೆಲ್ ನಾರ್ಮಲ್ ಆಯ್ತು.

AMRITH NONI

ಚಂದ್ರಶೇಖರಯ್ಯ, ವಯಸ್ಸು - 63
ನಿವೃತ್ತ ಎಫ್.ಡಿ.ಎ (ಆರೋಗ್ಯ ಇಲಾಖೆ),
ನಂದಿನಿ ಲೇಔಟ್, ಬೆಂಗಳೂರು.

ನನ್ನ ಶುಗರ್ ಲೆವೆಲ್ ಜಾಸ್ತಿ ಇತ್ತು. ಕೂರೋಕು, ಮಲಗೋಕು ಆಗ್ತಿರಲಿಲ್ಲ. ದೃಷ್ಟಿ ಮಸುಕಾಗಿ ಇರೋದು, ಬೆರಳು ಮಡಚೋಕೆ ಆಗ್ತಿರಲಿಲ್ಲ. ಮಂಡಿ ಚಿಪ್ಪು ನೋವು ಬರ್ತಿತ್ತು. ಕಾಲು ನೀಡ್ಕೊಳೋಕೆ ಆಗ್ತಿರಲಿಲ್ಲ, ಬಾದೆ ಪಡ್ತಾ ಇದ್ದೆ. ಮಾಂಸಖಂಡಗಳೆಲ್ಲ ಸುರುಟಿಕೊಂಡ ಹಾಗೆ ಅನ್ನಿಸ್ತಿತ್ತು. ತುಂಬಾ ಸುಸ್ತಾಗೋದು. ನಂಗೆ ಯಾಕಪ್ಪ ಬೇಕು ಇಂತಹ ಜೀವನ ಅನ್ನಿಸಿ ಬಿಟ್ಟಿತ್ತು. ಅಮೃತ್ ನೋನಿ ಡಿ-ಪ್ಲಸ್ ತೆಗೆದುಕೊಂಡ ಮೇಲೆ ಆಶ್ಚರ್ಯ ಆಗೋ ಹಾಗೆ ನನ್ನ ಶುಗರ್ ಲೆವೆಲ್ ನಾರ್ಮಲ್ ಆಯ್ತು. ಈಗ ಬೆಳಗ್ಗೆ-ಸಂಜೆ ವಾಕಿಂಗ್ ಮಾಡ್ತೀನಿ, ಲವಲವಿಕೆಯಾಗಿ ಆರಾಮಾಗಿ ಕೆಲಸ ಮಾಡಿಕೊಂಡು ಮನೇಲಿ ಇದ್ದೀನಿ. ನನಗೆ ವಯಸ್ಸಾಗಿದೆ ಅಂತಾನೆ ಅನ್ನಿಸ್ತಿಲ್ಲ.

ಮಧುಮೇಹಿಗಳ ಮೇಲೆ ನಡೆಸಿದ ಕ್ಲಿನಿಕಲ್ ಟ್ರಯಲ್‌ನಲ್ಲಿ ಅಮೃತ್‌ನೋನಿ ಡಿ-ಪ್ಲಸ್ ಬಳಕೆಯಿಂದ ಉತ್ತಮ ಫಲಿತಾಂಶ ಸಿಗುವುದಾಗಿ ಸಾಬೀತಾಗಿದೆ.

ಅಮೃತ್‌ನೋನಿ ಡಿ–ಪ್ಲಸ್

Scan here to know How to use

For Doctor Consultation:
+91 95136 13362

ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ!

www.amrithnoni.com

ಗ್ರಾ.ಪಂ. ಮಾಜಿ ಅಧ್ಯಕ್ಷನಿಗೆ ದಂಡ

ದಾಬಸ್‌ಪೇಟೆ: ಪರಿಸರ ಅನುಮೋದನೆ ಪಡೆಯದ ಆರೋಪ– ಎನ್‌ಜಿಟಿ ಕ್ರಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೂ ಅರ್ಜಿ ಸಲ್ಲಿಸಿದ್ದರು
- ನಾಲ್ಕು ವಾರಗಳಲ್ಲಿ ದಂಡ ಪಾವತಿಸುವಂತೆ ಸೂಚನೆ
- ವೈಯಕ್ತಿಕ ದ್ವೇಷ ಇರುವಂತಿದೆ: ಪೀಠ ಅಭಿಪ್ರಾಯ

ನವದೆಹಲಿ: ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿರುವ 'ರಾಮ್ಕಿ ಎನ್ವಿರೊ ಎಂಜಿನಿಯರ್ಸ್' ಸಂಸ್ಥೆಯ ಅಪಾಯಕಾರಿ ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಪರಿಸರ ಅನುಮೋದನೆ ಪಡೆದಿಲ್ಲ ಎಂದು ಆರೋಪಿಸಿ ಅರ್ಜಿ ಸಲ್ಲಿಸಿದ್ದ ಸೋಮಪುರ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಟಿ.ಎಂ. ಉಮಾಶಂಕರ್ ಎಂಬುವವರಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ₹1 ಲಕ್ಷ ದಂಡ ವಿಧಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ಚೆನ್ನೈ ಪೀಠದ ನ್ಯಾಯಮೂರ್ತಿ ಪುಷ್ಪಾ ಸತ್ಯನಾರಾಯಣ ಹಾಗೂ ನ್ಯಾಯಾಂಗ ಸದಸ್ಯ ಡಾ. ಸತ್ಯಗೋಪಾಲ್ ಕೊರ್ಲಪಾಟಿ ಅವರನ್ನು ಒಳಗೊಂಡ ಪೀಠವು ಈ ಆದೇಶ ಹೊರಡಿಸಿದೆ. 'ಅರ್ಜಿದಾರರು ಹಾಗೂ ರಾಮ್ಕಿ ಸಂಸ್ಥೆಯ ಮಧ್ಯೆ ವೈಯಕ್ತಿಕ ದ್ವೇಷ ಇದ್ದಂತಿದೆ. ಘಟಕವನ್ನು ಸ್ಥಗಿತಗೊಳಿಸಬೇಕು ಎಂಬ ಏಕೈಕ ಉದ್ದೇಶದಿಂದ ಅರ್ಜಿದಾರರು ಹೈಕೋರ್ಟ್, ಸುಪ್ರೀಂ ಕೋರ್ಟ್ ಹಾಗೂ ಎನ್‌ಜಿಟಿಯ ಪ್ರಧಾನ ಪೀಠದ ಮೊರೆಹೋಗಿದ್ದರು. ಘಟಕವು ಪರಿಸರ ಅನುಮೋದನೆ ಪಡೆದಿರುವುದು ತಜ್ಞರ ಸಮಿತಿಯ ಪರಿಶೀಲನೆ ವೇಳೆ ಗೊತ್ತಾಗಿತ್ತು. ಅರ್ಜಿದಾರರು ಪೀಠಕ್ಕೆ ತಪ್ಪು ಮಾಹಿತಿಗಳನ್ನು ನೀಡಿದ್ದಾರೆ ಹಾಗೂ ಸಮಯ ವ್ಯರ್ಥ ಮಾಡಿದ್ದಾರೆ' ಎಂದು ಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಅರ್ಜಿದಾರರು ದಂಡವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ನಾಲ್ಕು ವಾರಗಳಲ್ಲಿ ಪಾವತಿಸಬೇಕು ಎಂದೂ ತಾಕೀತು ಮಾಡಿದೆ.

ಈ ಭೂಭರ್ತಿ ಘಟಕದ ಸಾಮರ್ಥ್ಯ 40 ಸಾವಿರ ಟಿಪಿಎ. ಆದರೆ, ಈ ಘಟಕಕ್ಕೆ ಪರಿಸರ ಅನುಮೋದನೆ ಪಡೆದಿಲ್ಲ ಎಂಬುದು ಅರ್ಜಿದಾರರ ಆರೋಪ. ಅರ್ಜಿದಾರರು 2007ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಘಟಕ ಕಾರ್ಯಾರಂಭ ಮಾಡಿದೆ ಎಂ ಕಾರಣ ನೀಡಿ ಅವರ ಅರ್ಜಿ ವಜಾ ಮಾಡಲಾಗಿತ್ತು. ಈ ಘಟಕದ ಪರಿಶೀಲನೆಗೆ ಎನ್‌ಜಿಟಿ ಪ್ರಧಾನ ಪೀಠವು 2019ರಲ್ಲಿ ತಜ್ಞರ ಸಮಿತಿ ರಚಿಸಿತ್ತು. ಈ ಘಟಕಕ್ಕೆ ಪರಿಸರ ಅನುಮೋದನೆ ಪಡೆಯಲಾಗಿದೆ ಎಂದು ತಜ್ಞರ ಸಮಿತಿ ವರದಿ ಸಲ್ಲಿಸಿತ್ತು. ಹೊಸದಾಗಿ ಪರಿಸರ ಅನುಮೋದನೆ ಪಡೆಯುವಂತೆ ಪ್ರಧಾನ ಪೀಠ ಸೂಚಿಸಿ ಅರ್ಜಿಯನ್ನು ವಿಲೇವಾರಿ ಮಾಡಿತ್ತು. ಆ ಬಳಿಕ ಸಂಸ್ಥೆಯವರು ಪರಿಸರ ಅನುಮೋದನೆಗೆ ಕೇಂದ್ರ ಪರಿಸರ ಸಚಿವಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಘಟಕದವರು ಈಗಾಗಲೇ ಪರಿಸರ ಅನುಮೋದನೆ ಪಡೆದಿದ್ದಾರೆ ಎಂದು ಸಚಿವಾಲಯವು ಸ್ಪಷ್ಟಪಡಿಸಿ ಅರ್ಜಿಯನ್ನು 'ಡಿ ಲಿಸ್ಟ್' ಪಟ್ಟಿಗೆ ಸೇರಿಸಿತ್ತು. ಪರಿಸರ ಅನುಮೋದನೆ ಇಲ್ಲದೆಯೇ ಈ ಘಟಕವು ಕಾರ್ಯಾಚರಣೆ ನಡೆಸುತ್ತಿದೆ ಎಂದು ಆರೋಪಿಸಿ ಅರ್ಜಿದಾರರು ಚೆನ್ನೈ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ವೇಳೆ ಕೇಂದ್ರ ಪರಿಸರ ಇಲಾಖೆಯ ವಕೀಲರು, ಘಟಕಕ್ಕೆ 2014ರಲ್ಲೇ ಪರಿಸರ ಅನುಮೋದನೆ ನೀಡಲಾಗಿದೆ ಎಂದು ವಾದ ಮಂಡಿಸಿದ್ದರು. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಮಂಡಳಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪ್ರತಿವಾದಿ ರಾಮ್ಕಿ ಸಂಸ್ಥೆಯ ವಕೀಲರು ವಾದಿಸಿದ್ದರು. 'ಪರಿಹಾರಕ್ಕೆ ಸಂಬಂಧಿಸಿದಂತೆ ಸೂಕ್ತ ವೇದಿಕೆಗೆ ಅರ್ಜಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಅರ್ಜಿದಾರರಿಗೆ ಸ್ವಾತಂತ್ರ್ಯ ನೀಡಿತ್ತು. ಆದರೆ, ಘಟಕವನ್ನು ಮುಚ್ಚಬೇಕು ಎಂದು ಆಗ್ರಹಿಸಿ ಅರ್ಜಿದಾರರು ಚೆನ್ನೈ ಪೀಠಕ್ಕೆ ಮೂಲ ಅರ್ಜಿ ಸಲ್ಲಿಸಿದ್ದಾರೆ. ಇಲ್ಲಿ ಕಾನೂನು ದೃಷ್ಟಿಕೋನಕ್ಕಿಂತ ಬೇರೇನೋ ಇರುವಂತಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.



ಪರೀಕ್ಷೆ ಸಿದ್ಧತೆ

ರಾಜ್ಯದಾದ್ಯಂತ ಶುಕ್ರವಾರದಿಂದ (ಮಾರ್ಚ್ 1ರಿಂದ) ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ಆರಂಭವಾಗಲಿದ್ದು, ಪರೀಕ್ಷೆಗೂ ಮುನ್ನಾದಿನವಾದ ಗುರುವಾರ ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಸಿಬ್ಬಂದಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ನಮೂದಿಸಿದರು
– ಪ್ರಜಾವಾಣಿ ಚಿತ್ರ

ಪಿಯು ಪರೀಕ್ಷೆ: ವಿದ್ಯಾರ್ಥಿಗಳಿಗೆ ಬಸ್ ಸೇವೆ ಉಚಿತ

ಬೆಂಗಳೂರು: ಪರೀಕ್ಷೆ ಬರೆಯಲು ತೆರಳುವ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಬಿಎಂಟಿಸಿ ಉಚಿತ ಪ್ರಯಾಣದ ಅವಕಾಶವನ್ನು ಕಲ್ಪಿಸಿದೆ.

ಮಾರ್ಚ್ 1ರಿಂದ ಮಾರ್ಚ್ 22ರವರೆಗೆ ಪರೀಕ್ಷೆಗಳು ನಡೆಯಲಿವೆ. ಈ ಸಮಯದಲ್ಲಿ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ವಿದ್ಯಾರ್ಥಿಗಳು ವಾಸಸ್ಥಳದಿಂದ ಪರೀಕ್ಷಾ ಕೇಂದ್ರಕ್ಕೆ ಮತ್ತು ಪರೀಕ್ಷಾ ಕೇಂದ್ರದಿಂದ ವಾಸಸ್ಥಳಕ್ಕೆ ಪ್ರಯಾಣಿಸಬಹುದು. ಹೆಚ್ಚುವರಿ ಬಸ್‌ಗಳ ಅವಶ್ಯಕತೆ ಕಂಡು ಬಂದರೆ ಅದಕ್ಕೂ ಕ್ರಮ ಕೈಗೊಳ್ಳಲಾಗುವುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವೇಶ ನಿರಾಕರಣೆ: 'ಸಾರ್ವಭೌಮ ಅಧಿಕಾರ'

ನವದೆಹಲಿ (ಪಿಟಿಐ): ಬ್ರಿಟನ್‌ನ ಉಪನ್ಯಾಸಕಿ ನಿತಾಶಾ ಕೌಲ್ ಅವರಿಗೆ ಪ್ರವೇಶ ನಿರಾಕರಿಸಿರುವುದು ದೇಶದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಂಡ ನಿರ್ಧಾರ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

'ವಿದೇಶಿ ಪ್ರಜೆಗೆ ಪ್ರವೇಶ ನೀಡಬೇಕೋ, ಬೇಡವೋ ಎಂಬ ನಿರ್ಧಾರ ತೆಗೆದುಕೊಳ್ಳುವುದು ನಮ್ಮ ಸಾರ್ವಭೌಮ ಅಧಿಕಾರ' ಎಂದು ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಗುರುವಾರ ಹೇಳಿದರು. ಬ್ರಿಟನ್‌ನ ವಿಶ್ವವಿದ್ಯಾಲಯದಿಂದ ಉಪನ್ಯಾಸಕಿ ಆಗಿರುವ ನಿತಾಶಾ ಅವರನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೇ ತಡೆದಿದ್ದ ಅಧಿಕಾರಿಗಳು ಅವರನ್ನು ವಾಪಸ್ ಕಳಿಸಿದ್ದರು.

ಕನ್ನಡ ನಾಮಫಲಕ: ಡಿಕೆಶಿ ನಿರ್ದೇಶನ ಮೇರೆಗೆ ಕ್ರಮ

ಎರಡು ವಾರ ಗಡುವು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವ ಅಂಗಡಿ, ಹೋಟೆಲ್ ಸಹಿತ ಎಲ್ಲ ವ್ಯಾಪಾರಿ, ಇನ್ನಿತರ ಕೇಂದ್ರಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಇರಬೇಕು ಎಂದು ಕಡ್ಡಾಯಗೊಳಿಸಲಾಗಿದ್ದು, ನಿಯಮಬದ್ಧ ಫಲಕ ಅಳವಡಿಸಲು ನಿಗದಿಪಡಿಸಲಾಗಿದ್ದ ಅವಧಿಯನ್ನು ಎರಡು ವಾರ ವಿಸ್ತರಣೆ ಮಾಡಲಾಗಿದೆ.

ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಮತ್ತು ಮಂಜೂರಾತಿ ಪಡೆದು ಕಾರ್ಯ ನಿರ್ವಹಿಸುತ್ತಿರುವ ವಾಣಿಜ್ಯ ಮಳಿಗೆಗಳು ಸೇರಿದಂತೆ ಎಲ್ಲ ಕೇಂದ್ರಗಳು ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ 60 ರಷ್ಟು ಬಳಸಬೇಕು. ಫಲಕದ ಮೇಲ್ಭಾಗದಲ್ಲಿ ಅದು ಪ್ರದರ್ಶಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಉಲ್ಲೇಖಿತ ವಿಶೇಷ ರಾಜ್ಯ ಪತ್ರದಲ್ಲಿ ಸೂಚಿಸಲಾಗಿತ್ತು.

ಅದರಂತೆ ಫೆ.28ರ ಒಳಗೆ ಕನ್ನಡ ನಾಮಫಲಕ ಅಳವಡಿಸಲು ಈ ಮೊದಲು ಗಡುವು ವಿಧಿಸಲಾಗಿತ್ತು. ಈ ಸಮಯದಲ್ಲಿ ನಿಯಮಬದ್ಧ ನಾಮಫಲಕ ಅಳವಡಿಸದೇ ಇದ್ದರೆ ಉದ್ದಿಮೆ ಪರವಾನಗಿಗಳನ್ನು ರದ್ದುಗೊಳಿಸಲು, ಬೀಗ ಹಾಕಲು ಸುತ್ತೋಲೆ ಹೊರಡಿಸಲಾಗಿತ್ತು.

ವಾಣಿಜ್ಯ ಮಳಿಗೆಗಳು ಹೆಚ್ಚಿನ ಸಮಯಾವಕಾಶ ಕೋರಿದ್ದರಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನದಂತೆ ಮಾ.13ರವರೆಗೆ ಗಡುವು ವಿಸ್ತರಿಸಲಾಗಿದೆ ಎಂದು ಪಾಲಿಕೆ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ. ಪ್ರಮುಖ ರಸ್ತೆ ಮತ್ತು ವಾರ್ಡ್‌ ರಸ್ತೆಗಳಲ್ಲಿ ಉದ್ಯಮ ಪರವಾನಗಿ ಪಡೆದ 55 ಸಾವಿರ ಮಳಿಗೆಗಳಿವೆ. ಅದರಲ್ಲಿ 3000 ಮಳಿಗೆಗಳಷ್ಟೇ ಶೇ 60ರಷ್ಟು ಕನ್ನಡ ಇರುವ ನಾಮಫಲಕಗಳನ್ನು ಅಳವಡಿಸಿಲ್ಲ. ಉಳಿದವುಗಳಲ್ಲಿ ಅಳವಡಿಸಿದ್ದಾರೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಹಿತಿ ನೀಡಿದ್ದಾರೆ.

ಡಿಸಿಎಂ 'ಎಕ್ಸ್': 'ಕನ್ನಡ ನಾಮಫಲಕ' ಅಳವಡಿಕೆ ಅವಧಿಯನ್ನು ಎರಡು ವಾರ ವಿಸ್ತರಿಸಿರುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಬಿಬಿಎಂಪಿ ಬಜೆಟ್ ಮಂಡನೆಯಾಗುತ್ತಿದ್ದ ಸಮಯದಲ್ಲಿಯೇ 'ಎಕ್ಸ್'ನಲ್ಲಿ ಪ್ರಕಟಿಸಿದ್ದರು.

ಸಂಕ್ಷಿಪ್ತ ಸುದ್ದಿ

ಅಪಹರಣ: ರೌಡಿ ಬಂಧನ

ಬೆಂಗಳೂರು: 'ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದರು' ಎನ್ನಲಾದ ವ್ಯಕ್ತಿಯೊಬ್ಬನನ್ನು ಅಪಹರಿಸಿದ್ದ ಆರೋಪದಡಿ ರೌಡಿ ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ಗಿರಿನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಡಿ ರೌಡಿ ಇಟ್ಟಮಡು ಸಾಗರ್ ಹಾಗೂ ಈತನ ಮೂವರು ಸಹಚರರನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಎನ್ನಲಾದ ಸಂತೋಷ್, ಹೆಚ್ಚು ಹಣ ಗಳಿಸುತ್ತಿದ್ದ. ಈತನಿಗೆ ಬೆದರಿಕೆಯೊಡ್ಡಿದ್ದ ರೌಡಿ ಸಾಗರ್, ಪ್ರತಿ ತಿಂಗಳು ₹2 ಲಕ್ಷ ನೀಡಬೇಕೆಂದು ಒತ್ತಾಯಿಸಿದ್ದ. ಹಣ ನೀಡಲು ಸಾಧ್ಯವಿಲ್ಲವೆಂದು ಸಂತೋಷ್ ಹೇಳಿದ್ದ. ಇದೇ ಕಾರಣಕ್ಕೆ ರೌಡಿ ಹಾಗೂ ಸಹಚರರು, ಸಂತೋಷ್‌ನನ್ನು ಅಪಹರಿಸಿದ್ದರು' ಎಂದು ತಿಳಿಸಿದರು.

'ಆರೋಪಿಗಳು ಸಂತೋಷ್‌ನನ್ನು ಕನಕಪುರ ಕಡೆಗೆ ಕರೆದೊಯ್ದಿದ್ದರು. ಅಪಹರಣ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಕಾರ್ಯಾಚರಣೆ ನಡೆಸಿದ್ದ ಸಿಬ್ಬಂದಿ, ಆರೋಪಿಗಳನ್ನು ಬಂಧಿಸಿದ್ದಾರೆ. ಸಂತೋಷ್‌ನನ್ನು ರಕ್ಷಿಸಿದ್ದಾರೆ. ಸಂತೋಷ್‌ನ ಕೃತ್ಯದ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಹೇಳಿದರು.

ಬಿಬಿಎಂಪಿ ಅಧಿಕಾರಿ, ನೌಕರರ ಪ್ರತಿಭಟನೆ ಇಂದು

ಬೆಂಗಳೂರು: ಬಿಬಿಎಂಪಿ ಕಂದಾಯ ಅಧಿಕಾರಿಗಳು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ, ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ಮಾರ್ಚ್ 1ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ತೆರಿಗೆ ಸಂಗ್ರಹ ಕುಂಠಿತವಾಗಿದೆ ಎಂಬ ಕಾರಣಕ್ಕೆ ಮಹದೇವಪುರ ಜಂಟಿ ಆಯುಕ್ತರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿತ್ತು. ಅದಕ್ಕೆ ಉತ್ತರ ನೀಡುವ ಹೊತ್ತಿಗೆ ಇನ್ನೊಂದು ನೋಟಿಸ್ ಬಂದಿತ್ತು. ಉತ್ತರ ನೀಡಲು ನಾಲ್ಕು ದಿನ ಇರುವಾಗಲೇ ಅವರನ್ನು ನಿಯಮಬಾಹಿರವಾಗಿ ಅಮಾನತು ಮಾಡಲಾಗಿದೆ.

ಅಮಾನತು ತೆರವುಗೊಳಿಸಬೇಕು. 2023ರ ಮಾರ್ಚ್‌ನಲ್ಲಿ 20 ನೌಕರರಿಗೆ ಮುಂಬಡ್ತಿ ನೀಡಲು ಸಮಿತಿ ಅನುಮೋದನೆ ನೀಡಿತ್ತು. ಆದರೆ, ಇಲ್ಲಿಯವರೆಗೆ ಮುಂಬಡ್ತಿ ಆದೇಶ ನೀಡಿಲ್ಲ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಸುದ್ದಿಗಾರರಿಗೆ ತಿಳಿಸಿದರು.

ಈ ಕಾರಣಕ್ಕೆ ಮಾರ್ಚ್ 1ರಂದು ಸಾಮೂಹಿಕ ರಜೆ ಹಾಕಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಪ್ರತಿಭಟನೆ ಹಿಂಪಡೆದ ಅರಣ್ಯ ವಿಜ್ಞಾನ ಪದವೀಧರರು

ಬೆಂಗಳೂರು: ಅರಣ್ಯ ಇಲಾಖೆಯ ವಿವಿಧ ಹುದ್ದೆಗಳಿಗೆ ಕನಿಷ್ಠ ವಿದ್ಯಾರ್ಹತೆ ನಿಗದಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವ ಕುರಿತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿರುವುದರಿಂದ ಅರಣ್ಯ ವಿಜ್ಞಾನ ಪದವೀಧರರು ಪ್ರತಿಭಟನೆ ಹಿಂಪಡೆದಿದ್ದಾರೆ.

'ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಮತ್ತು ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ ನೇಮಕಾತಿಯಲ್ಲಿ ಬಿ.ಎಸ್ಸಿ. ಅರಣ್ಯ ವಿಜ್ಞಾನ ಪದವಿಯನ್ನು ಕನಿಷ್ಠ ವಿದ್ಯಾರ್ಹತೆಯನ್ನಾಗಿ ನಿಗದಿಪಡಿಸಬೇಕು ಎಂದು ಆಗ್ರಹಿಸಿ, ಕಾಲೇಜು ತರಗತಿಗಳನ್ನು 18 ದಿನಗಳಿಂದ ಬಹಿಷ್ಕರಿಸಲಾಗಿತ್ತು. ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿಯೂ ಕಳೆದ ಮೂರು ದಿನಗಳಿಂದ ಪ್ರತಿಭಟನೆ ನಡೆಸಲಾಗಿತ್ತು. ಸಚಿವರ ಸಕಾರಾತ್ಮಕ ಭರವಸೆಗಳಿಂದ ನಮ್ಮ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದೇವೆ' ಎಂದು ಕರ್ನಾಟಕ ಅರಣ್ಯ ವಿಜ್ಞಾನ ವಿದ್ಯಾರ್ಥಿಗಳು ಮತ್ತು ಪದವೀಧರರ ಸಂಘದ ಅಧ್ಯಕ್ಷ ಚೇತನ್ ಗೌಡ ಎಚ್.ಕೆ.ಹೇಳಿದರು.

ಯಲಚೇನಹಳ್ಳಿ, ಇಂದಿರಾ ನಗರದ ಮೆಟ್ರೊ ನಿಲ್ದಾಣದಲ್ಲಿ ಚಾಲನೆ

ಮಹಿಳಾ ಚಾಲಿತ ಇ–ಆಟೊ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಯಲಚೇನಹಳ್ಳಿ ಮತ್ತು ಇಂದಿರಾ ನಗರದ ಮೆಟ್ರೊ ನಿಲ್ದಾಣದಲ್ಲಿ ಮಹಿಳೆಯರೇ ಓಡಿಸುವ ಇ–ಆಟೊ ಸೇವೆಗೆ ಬುಧವಾರ ಚಾಲನೆ ನೀಡಲಾಗಿದೆ.

ಆಲ್ ಸ್ಟಂ ಇಂಡಿಯಾದಿಂದ ಪ್ರಾಯೋಗಿಕವಾಗಿ 25 ವಿದ್ಯುತ್ ಚಾಲಿತ ಆಟೊಗಳ ಸೇವೆ ಆರಂಭಿಸಲಾಗಿದೆ. ಈ ಎರಡೂ ನಿಲ್ದಾಣಗಳ 4 ಕಿ.ಮೀ ವ್ಯಾಪ್ತಿಯಲ್ಲಿ ಇ–ಆಟೊ ಸೇವೆ ದೊರೆಯಲಿದೆ.

ಬೆಳಿಗ್ಗೆ 8ರಿಂದ ರಾತ್ರಿ 9ರ ವರೆಗೆ ಆಟೊಗಳು ಕಾರ್ಯನಿರ್ವಹಿಸಲಿವೆ. ಪ್ರಯಾಣಿಕರು ಮೆಟ್ರೊ ರೈಡ್ ಆ್ಯಪ್ ಮೂಲಕ ಸೇವೆಯನ್ನು ಕಾಯ್ದಿರಿಸಬಹುದಾಗಿದೆ. ಮೊದಲ 1.5 ಕಿ.ಮೀ. ವರೆಗೆ ಪ್ರಯಾಣ ದರವನ್ನು ₹15 ನಿಗದಿಪಡಿಸಲಾಗಿದೆ.

ಮಹಿಳೆಯರ ರಕ್ಷಣೆಗೆ ಒತ್ತು: 'ಮಹಿಳಾ ಪ್ರಯಾಣಿಕರ ಹಿತದೃಷ್ಟಿಯಿಂದ ಮಹಿಳೆಯರೇ ಓಡಿಸುವ ಆಟೊ ಸೇವೆ ಆರಂಭಿಸಲಾಗಿದೆ' ಎಂದು ಆಲ್ ಸ್ಟಂ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಒಲಿವಿಯರ್ ಲಾಯನ್ಸ್ ಅವರು ಹೇಳಿದರು.

ಬೆಂಗಳೂರಿನ ಯಲಚೇನಹಳ್ಳಿ ಮೆಟ್ರೊ ನಿಲ್ದಾಣದ ಬಳಿ ಮಹಿಳಾ ಚಾಲಿತ ಇ–ಆಟೊ ಸೇವೆಗೆ ಚಾಲನೆ ನೀಡಲಾಯಿತು

ಆಲ್ ಸ್ಟಂ ಇಂಡಿಯಾ ಮತ್ತು ಡಬ್ಲ್ಯುಆರ್‌ಐ ಇಂಡಿಯಾ ಸಹಯೋಗದಡಿ ನಗರದ ಕನಕಪುರ ರಸ್ತೆಯಲ್ಲಿನ ಪ್ರೆಸ್ಟೀಜ್ ಶ್ರೀಹರಿ ಖೋಡೆ ಕೇಂದ್ರದಲ್ಲಿ ಆಯೋಜಿಸಿದ್ದ ಲೋ ಎಮಿಷನ್ ಆಕ್ಸೆಸ್ ಟು ಪಬ್ಲಿಕ್ ಟ್ರಾನ್ಸ್‌ಪೋರ್ಟ್ (ಎಲ್‌ಇಎಪಿ) ಕಾರ್ಯಕ್ರಮಕ್ಕೆ ಚಾಲನೆ ಅವರು ಮಾತನಾಡಿದರು.

ಹೆಣ್ಣುಮಕ್ಕಳೇ ಓಡಿಸುವ ಈ ಆಟೊದಿಂದ ಮಹಿಳಾ ಪ್ರಯಾಣಿಕರಿಗೆ ಹೆಚ್ಚಿನ ಸುರಕ್ಷತಾ ಭಾವನೆ ಮೂಡಲಿದೆ ಎಂದರು.

ಸ್ಟೇಟ್ ಇನ್‌ಸ್ಟಿಟ್ಯೂಟ್ ಫಾರ್ ದಿ ಟ್ರಾನ್ಸ್‌ಫಾರ್ಮೇಷನ್ ಆಫ್ ಕರ್ನಾಟಕದ ಉಪಾಧ್ಯಕ್ಷ ರಾಜೀವ್ ಗೌಡ ಮಾತನಾಡಿ, ಮಹಿಳಾ ಸಬಲೀಕರಣವೇ ರಾಜ್ಯದ ಸರ್ಕಾರದ ಗುರಿಯಾಗಿದೆ ಎಂದು ತಿಳಿಸಿದರು.

ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್‌ನ (ಕನೆಕ್ಟಿವಿಟಿ ಆ್ಯಂಡ್ ಅಸೆಟ್ ಮ್ಯಾನೇಜ್‌ಮೆಂಟ್) ಕಾರ್ಯನಿರ್ವಾಹಕ ನಿರ್ದೇಶಕಿ ಕಲ್ಪನಾ ಕಟಾರಿಯಾ ಮಾತನಾಡಿ, 'ಕುಟುಂಬದ ಪೋಷಣೆಗಾಗಿ ಮಹಿಳೆಯರು ಮನೆಯಿಂದ ಹೊರಬಂದು ದುಡಿಯುತ್ತಿದ್ದಾರೆ. ಇಂತಹವರಿಗೆ ಕುಟುಂಬದ ಸದಸ್ಯರು ಅಗತ್ಯ ಸಹಕಾರ ನೀಡಿದರೆ ಯಶಸ್ವಿಯಾಗುತ್ತಾರೆ' ಎಂದು ಸಲಹೆ ನೀಡಿದರು.

ಡಬ್ಲ್ಯುಆರ್‌ಐ ಇಂಡಿಯಾದ ಶ್ರೀನಿವಾಸ ಅಲವಳ್ಳಿ ಮಾತನಾಡಿ, 'ಆಲ್ ಸ್ಟಂ ಮತ್ತು ಮೆಟ್ರೊರೈಡ್ ಸಹಯೋಗದಡಿ ಪ್ರಯಾಣಿಕರಿಗೆ ಸುರಕ್ಷಿತ ಮತ್ತು ಕಡಿಮೆ ವೆಚ್ಚದಲ್ಲಿ ಆಟೊ ಸೇವೆ ಕಲ್ಪಿಸಲಾಗಿದೆ. ವಿದ್ಯುತ್ ಚಾಲಿತ ಆಟೊಗಳು ಪರಿಸರ ಮಾಲಿನ್ಯ ತಡೆಗೆ ಸಹಕಾರಿಯಾಗಿವೆ' ಎಂದು ಹೇಳಿದರು.

ಶುಕ್ರವಾರ, ಮಾರ್ಚ್ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 61 | ಪುಟ 16
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ದಮನಕನ ಜೊತೆ ಶಿವಣ್ಣ ಕರಟಕ'
'ಕರಟಕ..' ಚಿತ್ರ ಕುರಿತು ನಟ ಶಿವರಾಜ್‌ಕುಮಾರ್ ಸಂದರ್ಶನ

ಆಳ-ಅಗಲ
ಚಿರತೆಗಳ ಸಂಖ್ಯೆ ಏರುತ್ತಿದೆ, ಜತೆಗೆ ಸಂಘರ್ಷವೂ

'ಹಸಿವು ಮುಕ್ತ ಭಾರತ ನಮ್ಮ ಗುರಿ' 8
'ಮಹಾರಾಷ್ಟ್ರ ಚೌಕ್' ಫಲಕ ತೆರವು 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,500 ▲	21,982	₹64,200 (ಬೆಂಗಳೂರು) ▲	₹71,700 (ಬೆಂಗಳೂರು) ▼	82.89 ▲

ಬೇಸಿಗೆಯಲ್ಲಿ ಬೆವರು ಸಾಲೆ ತೊಲಗಿಸಿ, ಚಳಿಗಾಲದಲ್ಲಿ ತ್ವಚೆಯನ್ನು ರಕ್ಷಿಸುತ್ತದೆ.
SADGURU AYURVEDA
ಸದ್ಗುರು ಆಯುರ್ವೇದ
ಗ್ರಾಮ್ ಫ್ಲೋರ್ ಸೋಪ್
ಪರಿಶುದ್ಧ ಕಡಲೆ ಹಿಟ್ಟಿನೊಂದಿಗೆ ತಯಾರಿಸಲಾಗಿದೆ
GRAM FLOUR SOAP
Protect Skin, Improves Fairnees and Complexion
For Trade Enquiry.: 8970703070

ಲಿಂಗಾಯತ, ಒಕ್ಕಲಿಗರ ತೀವ್ರ ವಿರೋಧ • 'ಅಹಿಂದ'ದ ಬೇಡಿಕೆಗೆ ಮಣೆ

ಜಾತಿಗಣತಿ ವರದಿ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿದ್ದ ಜಾತಿವಾರು ಜನಗಣತಿ (ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ- 2015) ವರದಿಯನ್ನು ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ತೀವ್ರ ವಿರೋಧದ ನಡುವೆಯೂ ರಾಜ್ಯ ಸರ್ಕಾರ ಸ್ವೀಕರಿಸಿದೆ. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ದಲಿತ (ಅಹಿಂದ) ಸಮುದಾಯಗಳ ಬೇಡಿಕೆಗೆ ಈ ಮೂಲಕ ಮಣೆ ಹಾಕಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರವು ಲೋಕಸಭೆ ಚುನಾವಣೆ ಸನಿಹದಲ್ಲಿರುವಾಗಲೇ ವರದಿಯನ್ನು ಸ್ವೀಕರಿಸಿರುವುದು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ. ಈ ಬೆನ್ನಲ್ಲೇ, ಸಿದ್ದರಾಮಯ್ಯ ನೇತೃತ್ವದ ಸಂಪುಟದ ಕೆಲವು ಸಚಿವರು ಹಾಗೂ ಕಾಂಗ್ರೆಸ್ ಶಾಸಕರು ವರದಿ ಬಗ್ಗೆ ತಕರಾರು ತೆಗೆದಿದ್ದಾರೆ. ಸಮೀಕ್ಷೆಗೆ ವಿರೋಧವಿಲ್ಲ; ಸಮೀಕ್ಷೆ ವೈಜ್ಞಾನಿಕವೇ ಎಂದು ಬಿಜೆಪಿ ಪ್ರಶ್ನಿಸಿದೆ. ಈ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯುವಂತೆ ಆಗ್ರಹಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿದ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ, ಸಮೀಕ್ಷೆಯ ದತ್ತಾಂಶಗಳಿರುವ ಸಂಪುಟಗಳು ಮತ್ತು ಜಾತಿಗಳ ಮರು ವರ್ಗೀಕರಣ ಶಿಫಾರಸುಗಳ ವರದಿಯನ್ನು ಹೊಂದಿದ್ದ ಎರಡು ಪೆಟ್ಟಿಗೆಗಳನ್ನು ಹಸ್ತಾಂತರಿಸಿದರು. ವರದಿ ಸಲ್ಲಿಸಿದ ದಿನವೇ (ಫೆ. 29) ಹಾಲಿ ಆಯೋಗದ ಅಧಿಕಾರಾವಧಿಯೂ ಕೊನೆಗೊಂಡಿದೆ.

ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ (2013-18) ಅವಧಿಯಲ್ಲಿ ಆಯೋಗದ ಅಂದಿನ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ನೇತೃತ್ವದಲ್ಲಿ ಈ ಸಮೀಕ್ಷೆಯನ್ನು ನಡೆಸಲಾಗಿತ್ತು. ಸಮೀಕ್ಷೆಗೆ ₹158 ಕೋಟಿ ವೆಚ್ಚವಾಗಿತ್ತು. ಸಿದ್ದರಾಮಯ್ಯ ಅವರ ಅವಧಿಯಲ್ಲಿ ವರದಿ ಸಿದ್ಧಗೊಂಡಿರಲಿಲ್ಲ. ನಂತರ ವರದಿ ಸಿದ್ಧವಾಗಿದ್ದರೂ, ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ, ನಂತರ ಮುಖ್ಯಮಂತ್ರಿಯಾದ ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಈ ವರದಿಯನ್ನು ಸ್ವೀಕರಿಸಲು ಮುಂದಾಗಿರಲಿಲ್ಲ.

8ನೇ ಪುಟ ನೋಡಿ

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2015'ರ ವರದಿಯನ್ನು ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಮತ್ತು ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಸಲ್ಲಿಸಿದರು. ಗೃಹ ಸಚಿವ ಜಿ.ಪರಮೇಶ್ವರ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಇದ್ದರು

₹158.47 ಕೋಟಿ ವೆಚ್ಚ

ರಾಜ್ಯ ಸರ್ಕಾರ ಈ ಸಮೀಕ್ಷೆಗೆ 2014-2015ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಒಟ್ಟು ₹206.84 ಕೋಟಿ ನಿಗದಿಪಡಿಸಿದ್ದು, ಅದರಲ್ಲಿ ₹ 192.79 ಕೋಟಿ ಬಿಡುಗಡೆ ಮಾಡಿದೆ. ವರದಿ ಸಿದ್ಧಪಡಿಸಲು ₹158.47 ಕೋಟಿ ವೆಚ್ಚ ಮಾಡಲಾಗಿದೆ. ಜಾತಿ ಜನಗಣತಿಯ ಗಣಕೀಕರಣಕ್ಕೆ ಬಿಇಎಲ್ ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಅದಕ್ಕೆ, ₹43.09 ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿತ್ತು. 2015ರಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯನ್ನು 6.50 ಕೋಟಿ ಎಂದು ಅಂದಾಜಿಸಿ, ಪ್ರತಿ ವ್ಯಕ್ತಿಯ ಮಾಹಿತಿ ಗಣಕೀಕರಿಸಲು ಮತ್ತು ಪೋರ್ಟಲ್‌ನಲ್ಲಿ ಅಳವಡಿಸಿ ಆಯೋಗಕ್ಕೆ ಬೇಕಾಗುವ ವರದಿ ಒದಗಿಸಲು ತಲಾ ₹6.14ರಂತೆ ಸಂಸ್ಥೆಗೆ ವಹಿಸಲಾಗಿತ್ತು.

ಹಿಂದುಳಿದ ವರ್ಗಗಳ ಆಯೋಗದಿಂದ ನಾನು ವರದಿ ಸ್ವೀಕರಿಸಿದ್ದೇನೆ. ಸಚಿವ ಸಂಪುಟ ಸಭೆಯ ಮುಂದಿಟ್ಟು ವರದಿ ಬಗ್ಗೆ ಚರ್ಚಿಸಲಾಗುವುದು
ಸಿದ್ದರಾಮಯ್ಯ, ಮುಖ್ಯಮಂತ್ರಿ

ಸರ್ಕಾರ ರೂಪಿಸಿರುವ ಜಾತಿ ಗಣತಿ ಅವೈಜ್ಞಾನಿಕವಾಗಿದ್ದು, ಇದನ್ನು ವೈಜ್ಞಾನಿಕವಾಗಿ ರೂಪಿಸಲಿ. ಸರಿಯಾದ ಅಂಕಿ ಅಂಶ ಸಂಗ್ರಹಿಸಿ ವರದಿ ನೀಡಲಿ
ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ವರದಿ ಸಲ್ಲಿಸುವ ಮೂಲಕ ಬಹಳ ದೊಡ್ಡ ಜವಾಬ್ದಾರಿ ನಿಭಾಯಿಸಿದ್ದೇವೆ. ಮುಂದಿನ ನಿರ್ಧಾರ ಸರ್ಕಾರಕ್ಕೆ ಬಿಟ್ಟಿದ್ದಾಗಿದೆ. ವರದಿ ಸೋರಿಕೆಯಾಗಿಲ್ಲ
ಕೆ. ಜಯಪ್ರಕಾಶ್ ಹೆಗ್ಡೆ, ಅಧ್ಯಕ್ಷ,
ಹಿಂದುಳಿದ ವರ್ಗಗಳ ಶಾಶ್ವತ ಆಯೋಗ

ಜಾತಿ ಜನಗಣತಿ ವರದಿಯನ್ನು ನೋಡದೇ ವಿರೋಧ ಮಾಡುವುದು ಸರಿಯಲ್ಲ. ವರದಿ ಬಿಡುಗಡೆಯಾದ ಬಳಿಕ ಈ ಕುರಿತು ಚರ್ಚೆ ಮಾಡುವುದು ಸೂಕ್ತ
ಶಿವರಾಜ ತಂಗಡಗಿ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

'ಅಭಿವೃದ್ಧಿಗೆ ₹1.20 ಲಕ್ಷ ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿಯವರು ಅಭಿವೃದ್ಧಿ ಮಾಡದೇ ಬರೀ ಲೂಟಿ ಹೊಡೆದರು. ನಾವು ಗ್ಯಾರಂಟಿ ಯೋಜನೆಗಳ ಜತೆಗೆ ಅಭಿವೃದ್ಧಿಗೂ ಆದ್ಯತೆ ನೀಡಿದ್ದೇವೆ. ಗ್ಯಾರಂಟಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ₹1.20 ಲಕ್ಷ ಕೋಟಿ ಮೀಸಲಿಟ್ಟಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಉತ್ತರ ಕೊಡಲು ಆರಂಭಿಸುತ್ತಿದ್ದಂತೆಯೇ ಬಿಜೆಪಿ ಸದಸ್ಯರು 'ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದವರನ್ನು ಇನ್ನೂ ಬಂಧಿಸಿಲ್ಲ' ಎಂದು ಧರಣಿ ನಡೆಸಿದರು. ಬಿಜೆಪಿ ಮತ್ತು ಕೇಂದ್ರ ಸರ್ಕಾರವನ್ನು ಬೈಯುತ್ತಲೇ ತಮ್ಮ ಭಾಷಣವನ್ನು ಸಿದ್ದರಾಮಯ್ಯ ಮುಂದುವರಿಸುತ್ತಿದ್ದಂತೆ ಬಿಜೆಪಿ-ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

'ನಡೀರಿ ನಡೀರಿ' ಎಂದು ವಿರೋಧ ಪಕ್ಷದವರನ್ನು ಹಂಗಿಸಿದ ಮುಖ್ಯಮಂತ್ರಿ, ರಾಜ್ಯದ ತೆರಿಗೆ ಸಂಗ್ರಹ, ಕೇಂದ್ರ ಕೊಡುತ್ತಿರುವ ತೆರಿಗೆ ಪಾಲು, ಅಭಿವೃದ್ಧಿ ಹಾಗೂ ಜನ ಕಲ್ಯಾಣ ಕಾರ್ಯಕ್ರಮಗಳಿಗೆ ನೀಡಿದ ಅನುದಾನಗಳ ಅಂಕಿ ಅಂಶಗಳನ್ನು ಸದನದ ಮುಂದಿಟ್ಟರು. 'ಕೇಂದ್ರ ಸರ್ಕಾರ ಏಳು ಕೋಟಿ ಕನ್ನಡಿಗರಿಗೆ ಅನ್ಯಾಯ ಮಾಡುತ್ತಿದೆ. ಅದನ್ನು ಇಲ್ಲಿನ ವಿರೋಧ ಪಕ್ಷಗಳಾದ ಬಿಜೆಪಿ-ಜೆಡಿಎಸ್‌ಗಳು ಸಮರ್ಥಿಸುತ್ತಿವೆ' ಎಂದು ಹೇಳಿದ ಅವರು, ಏಳು ಕೋಟಿ ಕನ್ನಡಿಗರಿಗೆ ಎರಡೂ ಪಕ್ಷಗಳು ದ್ರೋಹ ಎಸಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

'2023ರ ಫೆಬ್ರುವರಿಯಲ್ಲಿ ಬಸವರಾಜ ಬೊಮ್ಮಾಯಿಯವರು ₹3.09 ಲಕ್ಷ ಕೋಟಿ ಮೊತ್ತದ ಬಜೆಟ್ ಮಂಡಿಸಿದ್ದರು. ಈ ಸಾಲಿನಲ್ಲಿ ನಾನು ₹3.71 ಲಕ್ಷ ಕೋಟಿ ಮೊತ್ತದ ಬಜೆಟ್ ಮಂಡಿಸಿದ್ದೇನೆ. ಬೊಮ್ಮಾಯಿ ಬಜೆಟ್‌ಗಿಂತ ₹62 ಸಾವಿರ ಕೋಟಿಯಷ್ಟು ಬಜೆಟ್ ಗಾತ್ರ ಹಿಗ್ಗಿದೆ. ಬೊಮ್ಮಾಯಿ ಬಜೆಟ್ ಮಂಡಿಸಿದಾಗ ರಾಜ್ಯದ ಜಿಡಿಪಿ ₹25,63,247 ಕೋಟಿ ಇತ್ತು. ಇದು 2024-25 ಕ್ಕೆ ₹28,09,063 ಕೋಟಿ ಆಗುವ ನಿರೀಕ್ಷೆ ಇದೆ. ಅಂದರೆ ₹2,41,723 ಕೋಟಿಯಷ್ಟು ಹೆಚ್ಚಲಿದೆ. ನಮ್ಮ ಸರ್ಕಾರ ಅಭಿವೃದ್ಧಿಗೆ ಆದ್ಯತೆ ನೀಡದೇ ಇದ್ದರೆ ಬಜೆಟ್ ಗಾತ್ರ ಹಾಗೂ ಜಿಡಿಪಿ ಇಷ್ಟು ಬೃಹತ್ ಮೊತ್ತದಲ್ಲಿ ಹೆಚ್ಚಳವಾಗುವ ಸಾಧ್ಯತೆ ಇತ್ತೇ' ಎಂದೂ ಪ್ರಶ್ನಿಸಿದರು.

8ನೇ ಪುಟ ನೋಡಿ

ಸರ್ಕಾರ ವಜಾಗೊಳಿಸಿ: ಬಿಜೆಪಿ ಮನವಿ

'ವಿಧಾನಸೌಧದಲ್ಲಿ ಕಿಡಿಗೇಡಿಯೊಬ್ಬ 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ದೇಶ ವಿರೋಧಿಗಳಿಗೆ ರಕ್ಷಣೆ ನೀಡುತ್ತಿರುವ ಸರ್ಕಾರವನ್ನು ಕೂಡಲೇ ವಜಾ ಮಾಡಬೇಕು' ಎಂದು ಬಿಜೆಪಿ ರಾಜ್ಯಪಾಲರಿಗೆ ಮನವಿ ಮಾಡಿದೆ.

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲು ಸಿದ್ದರಾಮಯ್ಯ ಆರಂಭಿಸುತ್ತಿದ್ದಂತೆ 'ಸುಳ್ಳೇ ಸುಳ್ಳು, ಏನಿಲ್ಲ ಏನಿಲ್ಲ ಈ ಬಜೆಟ್‌ನಲ್ಲಿ ಏನಿಲ್ಲ' ಎಂದು ಘೋಷಣೆ ಕೂಗಿದ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಆ ಬಳಿಕ ವಿಧಾನಸೌಧದಿಂದ ರಾಜಭವನದವರೆಗೆ ಕಾಲ್ನಡಿಗೆಯಲ್ಲಿ ತೆರಳಿ, ಸರ್ಕಾರವನ್ನು ವಜಾಗೊಳಿಸುವಂತೆ ಮನವಿ ಪತ್ರ ಸಲ್ಲಿಸಿದರು. ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ, ಶಾಸಕ ಬಸವರಾಜ ಬೊಮ್ಮಾಯಿ ಮತ್ತು ಇತರ ಶಾಸಕರು ಇದ್ದರು.

ಜೈ ಸೀತಾರಾಮ್ ಎಂದ ಸಿ.ಎಂ

ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುವ ವೇಳೆ ಸಿದ್ದರಾಮಯ್ಯ ಅವರು 'ಜೈ ಸೀತಾರಾಮ್ ಜೈ ಸೀತಾರಾಮ್' ಎಂದು ಘೋಷಣೆ ಕೂಗಿದರು.

ಮುಖ್ಯಮಂತ್ರಿ ಉತ್ತರ ಕೊಡಲು ಆರಂಭಿಸುತ್ತಿದ್ದಂತೆ ಬಿಜೆಪಿ-ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಸಚಿವಾಲಯದ ಸಿಬ್ಬಂದಿ ಕುಳಿತುಕೊಳ್ಳುವ ಮೇಜಿನ ಸುತ್ತ 'ಭಜನೆ' ಮಾಡುವ ರೀತಿಯಲ್ಲಿ ಎಡದಿಂದ ಬಲಕ್ಕೆ ಸುತ್ತು ಹೊಡೆಯುತ್ತಿದ್ದರು. 'ಕಟ್ಟಿ ಕಟ್ಟಿ ಕಾಂಗ್ರೆಸ್‌ಗೆ ಚಟ್ಟ ಕಟ್ಟಿ, ಸತ್ತೋಯ್ತು ಸತ್ತೋಯ್ತು ಕಾಂಗ್ರೆಸ್ ಸತ್ತೋಯ್ತು' ಎಂದು ಘೋಷಣೆ ಹಾಕುತ್ತಿದ್ದರು. ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರವನ್ನು ಟೀಕಿಸಲು ಆರಂಭಿಸುತ್ತಿದ್ದಂತೆಯೇ ಜೈ ಶ್ರೀರಾಮ್, ಜೈ ಮೋದಿ ಎಂದು ಘೋಷಣೆ ಕೂಗಲು ಬಿಜೆಪಿಯವರು ಶುರು ಮಾಡಿದರು.

8ನೇ ಪುಟ ನೋಡಿ

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್ SJ
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹5760/gm
ಬೆಳ್ಳಿ ದರ: ₹71/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಇಂದಿನಿಂದ ಪಿಯು ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಮೊದಲ ಮುಖ್ಯ ಪರೀಕ್ಷೆ ಮಾರ್ಚ್ 1ರಿಂದ ರಾಜ್ಯದ 1,124 ಕೇಂದ್ರಗಳಲ್ಲಿ ನಡೆಯಲಿದೆ.

3.30 ಲಕ್ಷ ಬಾಲಕರು, 3.67 ಲಕ್ಷ ಬಾಲಕಿಯರು ಸೇರಿದಂತೆ 6.98 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದು, ಮಾರ್ಚ್ 22ರವರೆಗೆ ನಿತ್ಯ 10.15ರಿಂದ ಮಧ್ಯಾಹ್ನ 1.30ರವರೆಗೆ ಪರೀಕ್ಷೆಗಳು ನಡೆಯಲಿವೆ. ಪ್ರತಿ ಕೇಂದ್ರಕ್ಕೂ ನಾಲ್ವರು ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ

An Initiative by
Horlicks Women's PLUS & Apollo DIAGNOSTICS
ಸುಮಾರು 90% ಮಹಿಳೆಯರು ವಿಟಮಿನ್ ಡಿ ಕೊರತೆಯಿಂದ ಬಳಲುತ್ತಿದ್ದಾರೆ.
ಇದರಿಂದ ಮೂಳೆಗಳು ದುರ್ಬಲಗೊಳ್ಳಬಹುದು.
ಈ ಮಹಿಳಾ ದಿನದಂದು,
ನಿಮ್ಮ ಆರೋಗ್ಯದ ಕಾಳಜಿ ನೀವೇ ವಹಿಸಿರಿ.
ವಿಟಮಿನ್ ಡಿ ಪರೀಕ್ಷೆ ಮಾಡಿಸಿಕೊಳ್ಳಿ,
ಕೇವಲ ~~₹1850~~ ₹199 ರಲ್ಲಿ.
ಯಾವುದೇ APOLLO DIAGNOSTIC ಅಥವಾ APOLLO CRADLEಗೆ ಭೇಟಿಕೊಡಿ.
Horlicks Women's PLUS caramel flavour
NUTRITION FOR STRONG BONES
INDIA'S #1 HEALTH DRINK FOR WOMEN
ಇಲ್ಲಿ ಖರೀದಿಸಿ.
Apollo PHARMACY Apollo 24|7
ಹೆಚ್ಚಿನ ವಿವರಗಳಿಗಾಗಿ, 040 4444 2424ಗೆ ಕರೆಮಾಡಿ.
CREATIVE VISUALIZATION. TERMS AND CONDITIONS APPLY. NEW PACKAGING DESIGN AS COMPARED TO THE OLD PACK. GARG R ET AL. INT J REPROD CONTRACEPT OBSTET GYNECOL. 2018 JUN;7 (6):2222-2225. APPLICABLE FOR WOMEN OVER AGE 30. REFER TO PACK FOR DETAILS. *APPLICABLE FOR WALK-IN TESTS AT APOLLO DIAGNOSTIC AND APOLLO CRADLE CENTRES. ADDITIONAL ₹50 TO BE CHARGED FOR HOME SAMPLE COLLECTIONS. PRICE MAY VARY ACROSS CITIES. "NO ADDED SUGAR. SUGAR REFERS TO SUCROSE. CONTAINS NATURALLY OCCURRING SUGARS. OFFER VALID FROM 1ST MARCH 2024 TO 15TH APRIL 2024.
This contains Acesulfame Potassium. Not recommended for children, pregnant or lactating women.
CONTAINS NON-CALORIC SWEETENER.

Pursue your hobbies!
We will take care of your Gratuity payments
NEW LIC's GROUP GRATUITY
CASH ACCUMULATION PLAN
UIN : 512N281V03
Salient Features :
- Insurance cover for future service gratuity
- Guaranteed interest rate
- Income tax benefits for contributions U/S 36(i)(v) and for interest earnings U/S 10(25)(iv) (Subject to changes in Income Tax laws from time to time)
- Scientific funding as per AS(15)(Revised)
Contact through https://lmspgs.licindia.in/ilead or email id- groupbusiness@licindia.com
Beware of spurious phone calls and fictitious / fraudulent offers
IRDAI clarifies to public that • IRDAI or its officials do not involve in activities like sale of any kind of insurance or financial products nor invest premiums. • IRDAI does not announce any bonus. Public receiving such phone calls are requested to lodge a police complaint along with details of phone call number.
Attract and Retain Talent with LIC's Group Schemes
For queries and contact details of officers of Pension and Group Schemes Offices in Karnataka State please visit our site @ www.licindia.in , click on Home --> Group Gratuity Scheme -->Karnataka Compulsory Group Gratuity.
Follow us : LIC India Forever IRDAI Regn. No. 512
LIC भारतीय जीवन बीमा निगम LIFE INSURANCE CORPORATION OF INDIA
LIC / AR / 20-21/ 03/ Eng
For more details on risk factors, terms and conditions please read sales brochure carefully before concluding a sale.
www.licindia.in

Government of India

ಮೋದಿ ಸರ್ಕಾರದ ಗ್ಯಾರಂಟಿ

ಸ್ಟಾರ್ಟ್-ಅಪ್‌ಗಳ ಮೂಲಕ ಸಮೃದ್ಧಿಯ ಖಾತರಿ

ಭಾರತವು ವಿಶ್ವದ 3ನೇ ಅತಿದೊಡ್ಡ ಸ್ಟಾರ್ಟ್-ಅಪ್ ಪೂರಕ ವ್ಯವಸ್ಥೆಯಾಗಿದೆ

ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

ನಮ್ಮ ಸಂಕಲ್ಪ ವಿಕಸಿತ ಭಾರತ

cbc 22201/13/0319/2324

ವರ್ಜೀನಿಯಾದಲ್ಲಿ 12ನೇ ವಿಶ್ವ ಕನ್ನಡ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕ ಕನ್ನಡ ಕೂಟಗಳ ಒಕ್ಕೂಟವು (ಅಕ್ಕ) ಮುಂಬರುವ ಆ.30ರಿಂದ ಸೆ.1ರವರೆಗೆ ಅಮೆರಿಕದ ವರ್ಜೀನಿಯಾದ ಗ್ರೇಟರ್ ರಿಚ್ಮಂಡ್ ಕನ್ವೆನ್ಷನ್ ಸೆಂಟರ್‌ನಲ್ಲಿ 12ನೇ ವಿಶ್ವ ಕನ್ನಡ ಸಮ್ಮೇಳನ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ 'ಅಕ್ಕ' ಅಧ್ಯಕ್ಷ ರವಿ ಬೋರೇಗೌಡ ಅವರು, 'ವಾಷಿಂಗ್ಟನ್ ಡಿ.ಸಿ. ಕಾವೇರಿ ಕನ್ನಡ ಸಂಘ, ರಿಚ್ಮಂಡ್ ಕನ್ನಡ ಸಂಘದ ಆಶ್ರಯದಲ್ಲಿ ಈ ಸಮ್ಮೇಳನ ನಡೆಯಲಿದೆ. ಎರಡು ವರ್ಷಗಳಿಗೆ ಒಮ್ಮೆ ಈ ಉತ್ಸವವನ್ನು ನಡೆಸಲಾಗುತ್ತಿದೆ. ಈಗಾಗಲೇ ಸಿದ್ಧತೆಗಳು ಪ್ರಾರಂಭವಾಗಿದ್ದು, ಏಳು ಸಾವಿರ ಕನ್ನಡಿಗರು ಸೇರುವ ನಿರೀಕ್ಷೆಯಿದೆ' ಎಂದರು.

ಬೆಂಗಳೂರು ಚಿತ್ರೋತ್ಸವದಲ್ಲಿ ಜಬ್ಬಾರ್ ಪಟೇಲ್ ಉಪನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಗುರುವಾರ(ಫೆ.29) ಚಾಲನೆ ದೊರಕಿದ್ದು, ಮಾ. 1ರಿಂದ ಸಿನಿಮಾಗಳ ಪ್ರದರ್ಶನ ಹಾಗೂ ಉಪನ್ಯಾಸ, ಸಂವಾದ ಕಾರ್ಯಕ್ರಮಗಳು ನಡೆಯಲಿವೆ.

ಶುಕ್ರವಾರ ಮಧ್ಯಾಹ್ನ 2.30ಕ್ಕೆ ರಾಜಾಜಿನಗರದ ಒರಾಯನ್ ಮಾಲ್‌ನ ಸ್ಕ್ರೀನ್ ಮೂರರಲ್ಲಿ ಖ್ಯಾತ ನಿರ್ದೇಶಕ ಜಬ್ಬಾರ್ ಪಟೇಲ್ ಅವರ ಉಪನ್ಯಾಸ ಇದೆ. ಅವರು 'ಸಾಂವಿಧಾನಿಕ ಮೌಲ್ಯಗಳು ಮತ್ತು ಭಾರತೀಯ ಸಿನಿಮಾ' ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ.

ಒರಾಯನ್ ಮಾಲ್, ಚಾಮರಾಜಪೇಟೆಯಲ್ಲಿರುವ ಕಲಾವಿದರ ಸಂಘದ ಡಾ.ರಾಜ್‌ಕುಮಾರ್ ಭವನ ಹಾಗೂ ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾ ಸಿನಿಮಾ ಅಕಾಡೆಮಿಯಲ್ಲಿ ಸಿನಿಮಾಗಳ ಪ್ರದರ್ಶನಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗೆ- https://biffes.org/ ನೋಡಿ.

ಆರ್ಥಿಕ ಪ್ರಗತಿಯತ್ತ ಭಾರತ

ರೇವಾ ವಿ.ವಿ. ಕಾರ್ಯಕ್ರಮದಲ್ಲಿ ಹರ್ದೀಪ್ ಸಿಂಗ್ ಪುರಿ

ಪ್ರಜಾವಾಣಿ ವಾರ್ತೆ

ಯಲಹಂಕ: '2040ರ ವೇಳೆಗೆ ಭಾರತ ವಿಶ್ವದ ಅತ್ಯಂತ ಬಲಿಷ್ಠ ಆರ್ಥಿಕತೆಯ ರಾಷ್ಟ್ರವಾಗಿ ಹೊರಹೊಮ್ಮಲಿದೆ. ಇದಕ್ಕೆ ಪೂರಕವಾಗಿ ಇಂದಿನ ವಿದ್ಯಾರ್ಥಿಗಳ ಕೊಡುಗೆ ಮಹತ್ವಪೂರ್ಣವಾಗಲಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ವಿಶ್ವಾಸ ವ್ಯಕ್ತಪಡಿಸಿದರು.

ರೇವಾ ವಿಶ್ವವಿದ್ಯಾಲಯದಲ್ಲಿ ಭೌಗೋಳಿಕ, ರಾಜಕೀಯ ಮತ್ತು ಅಂತರರಾಷ್ಟ್ರೀಯ ಅಧ್ಯಯನ ಕುರಿತ ಉನ್ನತ ಕೇಂದ್ರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'1835ರಲ್ಲಿ ಥಾಮಸ್ ಬಾಬಿಂಗ್ಟನ್ ಮಕಾಲೆ ಜಾರಿಗೆ ತಂದಿದ್ದ ಶಿಕ್ಷಣ ನೀತಿ ಬ್ರಿಟಿಷ್ ವಸಾಹತುಶಾಹಿಯ ಪ್ರಾಬಲ್ಯಕ್ಕೆ ಪೂರಕವಾಗಿತ್ತು. ಆದರೆ 118 ವರ್ಷಗಳ ನಂತರ ಭಾರತದಲ್ಲಿ ಜಾರಿಯಾಗಿರುವ ಶಿಕ್ಷಣ ನೀತಿಯು ದೇಶದ ಸ್ವಾಭಿಮಾನದ ಪರಿಮಿತಿಯಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಇಂಬು ನೀಡುವಂತಿದೆ' ಎಂದರು.

ರೇವಾ ವಿಶ್ವವಿದ್ಯಾಲಯದಲ್ಲಿ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಚಾಲನೆ ನೀಡಿದರು. ರೇವಾ ವಿ.ವಿ. ಕುಲಾಧಿಪತಿ ಪಿ.ಶ್ಯಾಮರಾಜು, ಸಹ ಕುಲಪತಿ ಉಮೇಶ್ ಎಸ್. ರಾಜು ಭಾಗಹಿಸಿದ್ದರು.

ಭಾರತ ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಆರ್ಥಿಕತೆಯತ್ತ ದಾಪುಗಾಲಿಡುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ಜಗತ್ತಿನ ಮೂರನೆಯ ಅತಿದೊಡ್ಡ ಆರ್ಥಿಕತೆ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಲಿದೆ' ಎಂದರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿ, 'ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಉನ್ನತ ಶೈಕ್ಷಣಿಕ ಮೌಲ್ಯಗಳನ್ನು ಕಲಿಸುವ ಮಹತ್ವದ ಧ್ಯೇಯದೊಂದಿಗೆ ಆರಂಭವಾಗಿದೆ. ಅತ್ಯುತ್ತಮ ಶಿಕ್ಷಣದ ಜೊತೆಗೆ ಉದ್ಯೋಗ, ವ್ಯಕ್ತಿತ್ವ ವಿಕಸನ, ಪರಿಸರ ಕಾಳಜಿ, ಸಾಮಾಜಿಕ ಜವಾಬ್ದಾರಿ ಸೇರಿದಂತೆ ಪರಿಪೂರ್ಣ ಶಿಕ್ಷಣಕ್ಕೆ ಒತ್ತುನೀಡುತ್ತಾ ಬಂದಿದೆ' ಎಂದರು.

ರೇವಾ ವಿವಿ ಕುಲಪತಿ ಡಾ.ಎಂ. ಧನಂಜಯ, ಸಹ ಕುಲಪತಿ ಉಮೇಶ್. ಎಸ್.ರಾಜು, ಕುಲಸಚಿವ ಎನ್.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ತ್ಯಾಜ್ಯ ಆಯುವವರ ದಿನಾಚರಣೆ: ಮುಖ್ಯ ಅತಿಥಿಗಳು: ಎಚ್. ಎನ್. ಗೋಪಾಲಕೃಷ್ಣ, ಬಿ. ವೆಂಕಟೇಶ್, ಸಂತೋಷ್ ಹಿಪ್ಪರಗಿ, ಲೀಲಾವತಿ, ಆಯೋಜನೆ: ತ್ಯಾಜ್ಯ ಶ್ರಮಿಕ ಸಂಘ, ಸ್ಥಳ: ಗೋಲ್ಡನ್ ಬಾಯ್ಸ್, ಯೂತ್ಸ್ ಕ್ಲಬ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಆರ್. ಗುಂಡೂರಾವ್ ಕ್ರೀಡಾ ಸಂಕೀರ್ಣ, ಮಲ್ಲೇಶ್ವರ, ಬೆಳಿಗ್ಗೆ 11

ಚೈತನ್ಯ ಸಂಜೆ 898: ಅಧ್ಯಕ್ಷತೆ: ಗೀತಾ ಸತೀಶ್, 'ಶರಣ ಕಿನ್ನರಿ ಬೊಮ್ಮಯ್ಯ' ವಿಷಯದ ಬಗ್ಗೆ ಉಪನ್ಯಾಸ: ರಂಜನಿ, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಪ್ರಮೀಳಾ ಗರಡಿ, ಮಂಜುಳಾ ಶಿವಾನಂದ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆಎಸ್‌ಎಸ್ ಕಾಲೇಜು ಸಭಾಂಗಣ, ಗೇಟ್ ನಂ.7, 38ನೇ ಕ್ರಾಸ್, 1ಮುಖ್ಯರಸ್ತೆ, 8ನೇ ವಿಭಾಗ, ಜಯನಗರ, ಸಂಜೆ 5.30

ಟಿ. ತಿಮ್ಮೇಶ್ ಅವರ 'ನುಡಿ ಸಿಂಗಾರ' ಗ್ರಂಥ ಲೋಕಾರ್ಪಣೆ ಹಾಗೂ ಅಭಿನಂದನಾ ಸಮಾರಂಭ: ಮಧ್ಯಾಹ್ನ 3.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಅಭಿನಂದನಾ ಸಮಾರಂಭದ ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಆಶಯ ನುಡಿ: ಹಿ.ಚಿ. ಬೋರಲಿಂಗಯ್ಯ, ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಅಭಿನಂದಿಸುವವರು: ಎಂ. ಕೃಷ್ಣಪ್ಪ, ಟಿ.ಎ. ನಾರಾಯಣಗೌಡ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಮುಖ್ಯ ಅತಿಥಿಗಳು: ಪ್ರಿಯಕೃಷ್ಣ, ಪಿ. ರಾಮಯ್ಯ, ಆಯೋಜನೆ: ಟಿ. ತಿಮ್ಮೇಶ್-60 ಅಭಿನಂದನಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಸಾಮೂಹಿಕ ಸರಸ್ವತಿ ಪೂಜೆ: ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, ನಂ.74, 5ನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.30

'ಸರ್ವಮೂಲ ಸಾರ' ಧಾರ್ಮಿಕ ಪ್ರವಚನ: ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

FORM-IV
PRAJAVANI

STATEMENT about ownership and other particulars about newspaper **"PRAJAVANI" Bangalore** as required to be published under Section 19-D(b) of the Press and Registration of Books Act, read with Rule-8 of the Registration of Newspapers (Central) Rules, 1956

1. Place of Publication: Bangalore
2. Periodicity of Publication: Daily
3. Printer : Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampura 2nd Stage, Mysore-570023
4. Publisher : Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampura 2nd Stage, Mysore-570023
5. Editor : Mr Sudesha Doddapalya, Citizen of India, Olavu, #286, 12th cross, Janatha Nagar, T K Layout, Mysore.
6. Names and addresses of individuals who own the newspaper and partners or shareholders holding more than one percent of the total capital.
Proprietors: The Printers (Mysore) Pvt. Ltd. CIN. No. U22110KA1948PTC000521 Plot No. 7-12, Kumbalgodu Industrial Area II Phase, Mysore Road, Bangalore-560 074.
Shareholders holding more than one percent of the total capital:
1. Mr. K. N. Hari Kumar, No. 22 1st 'A' Main, 1st Block, RMV 2nd Stage, Bangalore-560 094.
2. Mr. K. N. Tilak Kumar, No. 173, Subbaramachetty Road, Basavanagudi, Bangalore-560 004.
3. Mr. K. N. Shanth Kumar, No. 298/A, 1st Main Road, 8th Block, Jayanagar, Bangalore - 560 082.
4. K. N. Guruswamy & Co. Pvt. Ltd. No. 75, M. G. Road, Bangalore-560 001 5. Legal Heirs of Late Khan Bahadur Budan Saheb, Landlord, Hindupur, Andhra Pradesh. 6. Mr. S. N. Srinivasa Murthy, Mr. S.N. Shiva Shankar, No. 10, VI Main, II Cross, Gandhinagar, Bangalore-560 009. 7. Mr. S. D. Eswarasa, Sri. Durgamba Lodge, 305, Subedar Chatram Road, 6th Main, Gandhinagar, Bangalore - 560 009. 8. Mr. S.D. Aswathnarayana, Mr. S. D. Nageshwar, Mr. S. D. Shivaram, Mr. S. D. Krishnamurthy, Mr. S. N. Raghavendra, No. 361, II 'C' Cross, 4th Main Road, 3rd Stage, 3rd Block, Basaveswarnagar, Bangalore-560 079. 9. Mr M P Manjunath, No.172, Ground Floor, Moksha Marga, Siddartha Layout, Mysore -570011 10. Mr. S.D. Muniswamy, Swamy Dhondusa Fabric, Sri Lodge (Basement) No. 9, 6th Main, 2nd Cross, Gandhinagar, Bangalore-560 009 11. Mrs Prema B Moola, Mr Ananda Ranga Moola, Mr Ved Manu Moola, Ms Dev Siri Moola, Mr M Bhakatvatsala, No.9, "Rangapuri", Lalbagh Road, Bangalore 560027 12. Mrs. Pratibha S. Moola, Mr. Siddartha S. Moola, Ms. Lakshmi S. Moola, Ms. Vidya S. Moola, Ms. Aparna S. Moola, No. 38, Wellington Street, Richmond Town, Bangalore-560 025. 13. Mrs Anuradha R Moola, Ms Sharuna R Moola, Ms Bhavana R Moola, Mr M Ramesh, Mr Vivesh R Moola, Centropolis, No.21, Langford Road, Richmond Town, Bangalore-560025 14. Mrs. Dechu R. Moola, Mr. Vishnu R. Moola, Ms. Brinda Devi Moola, Ms. Maya R. Moola, Flat No. 32, August Mansion Apts. No. 42, Curley Street, Richmond Town, Bangalore-560 025.

I, B. A. Ravi hereby declare that the particulars given above are true to the best of my knowledge and belief.

Place : Bangalore
Date : 29-02-2024
Sd/-
(B.A. Ravi)
Publisher

ರೈಲ್ವೆ ವಿದ್ಯುದೀಕರಣ, ಬೆಂಗಳೂರು

ಇ-ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂ.:ಇಎಲ್‌ಆರ್‌ಇಎಸ್‌ಬಿಸಿ-ಜಿಆರ್.296-ಒಟಿ-ಟಿಎಲ್-ಎಸ್‌ಬಿಜಿಎ ದಿ:27.02.2024

ಭಾರತದ ರಾಷ್ಟ್ರಪತಿಗಳ ಪರವಾಗಿ ಇಲ್ಲಿ ಕೆಳಗೆ ಸಹಿ ಹಾಕಿರುವವರು ಕೆಳಕಂಡ ಕಾಮಗಾರಿಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿ ವಿವರ	ಅಂದಾಜು ವೆಚ್ಚ
1.	ಹಾಸನದ ಶ್ರವಣಬೆಳಗೊಳದಲ್ಲಿನ 66/11ಕೆವಿ ಕೆಪಿಟಿಸಿಎಲ್ ಸಬ್‌ಸ್ಟೇಷನ್ ಇಂದ ಶ್ರವಣಬೆಳಗೊಳದಲ್ಲಿನ 66ಕೆವಿ/27ಕೆವಿ ರೈಲ್ವೆ ಟ್ರಾಕ್ಷನ್ ಸಬ್‌ಸ್ಟೇಷನ್‌ವರೆಗೆ, ಅಂದಾಜು 1.29 ಕಿ.ಮೀ. ಮಾರ್ಗದುದ್ದಕ್ಕೂ ಸಿಂಗಲ್ ಸರ್ಕ್ಯೂಟ್ 66ಕೆವಿ, 2-ಫೇಸ್ ಟ್ರಾನ್ಸ್‌ಮಿಷನ್ ಲೈನ್ ವಿನ್ಯಾಸ, ಪೂರೈಕೆ, ನಿರ್ಮಾಣ, ಪರೀಕ್ಷಣೆ ಮತ್ತು ಕಮಿಷನಿಂಗ್ ಜೊತೆಗೆ ಯಚೆನಹಳ್ಳಿ ಇಂದ ಶ್ರವಣಬೆಳಗೊಳದವರೆಗಿನ 66ಕೆವಿ ಲೈನ್‌ನಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಎಸ್‌ಸಿ ಟವರ್‌ಗಳ ಡಿಸ್ಮ್ಯಾಂಟ್ಲಿಂಗ್ ಜೊತೆಗೆ ಶ್ರವಣಬೆಳಗೊಳ ಕೆಪಿಟಿಸಿಎಲ್ ಸಬ್‌ಸ್ಟೇಷನ್‌ನಲ್ಲಿ ಒಂದು 66ಕೆವಿ ಟರ್ಮಿನಲ್ ಬೇ ಕಾಮಗಾರಿ.	₹ 2,12,61,510.11

ಸದರಿ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ 20.03.2024 ರಂದು 15.00 ಗಂಟೆ. ಟೆಂಡರ್ ಪ್ರಕಟಣೆಯ ಸಂಪೂರ್ಣ ವಿವರಗಳಿಗಾಗಿ ಮತ್ತು ಟೆಂಡರ್ ದಸ್ತಾವೇಜುಗಳಿಗಾಗಿ, ಆಸಕ್ತಿಯುಳ್ಳ ಟೆಂಡರ್‌ದಾರರು **www.ireps.gov.in** ವೆಬ್‌ಸೈಟ್‌ಗೆ ಲಾಗಾನ್ ಮಾಡಬಹುದು. ಕೊನೆಯ ದಿನಾಂಕದವರೆಗೂ ಯಾವುದೇ ತಿದ್ದುಪಡಿಗಳ ಮಾಹಿತಿಗಾಗಿ ಆಗಾಗ್ಗೆ ಸದರಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಲಿರಿ.

No. PR/24/24 (FA) ಡೆ. ಸಿಇಇ/ಪಿ&ಪಿ/ಆರ್‌ಇ/ಎಸ್‌ಬಿಸಿ

"ನಸುನಗೆಯೊಂದಿಗೆ ಗ್ರಾಹಕರ ಸೇವೆಯಲ್ಲಿ"

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರ ಕಳೆದಿರುವ ಬಗ್ಗೆ ಸೂಚನೆ

ಕಂಪನಿಯ, ಈ ಕೆಳಗೆ ತಿಳಿಸಿರುವ ಷೇರು ಸರ್ಟಿಫಿಕೇಟ್ ನಷ್ಟವಾಗಿರುವುದರಿಂದ ಇನ್ವೆಸ್ಟರ್ ಎಜುಕೇಷನ್ ಮತ್ತು ಪ್ರೊಟೆಕ್ಷನ್ ಫಂಡ್ ಪ್ರಾಧಿಕಾರದಿಂದ ಷೇರುಗಳನ್ನು ಕ್ಲೇಮ್ ಮಾಡುವುದಕ್ಕಾಗಿ ಹಕ್ಕು ಪತ್ರವನ್ನು ನೀಡಿ ಎಂದು ಷೇರುದಾರರ ಕಾನೂನು ಪ್ರತಿನಿಧಿ ಮನವಿಯನ್ನು ಸಲ್ಲಿಸಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರುಗಳ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
S000258	2000	1592	14198786 ಇಂದ 14200785 ವರೆಗೆ	ಸುಕ್ಲಾ ದಾಸ್‌ಗುಪ್ತ (ಮೃತ)

ಈ ಸೂಚನೆ ಪ್ರಕಟವಾದ ದಿನದಿಂದ 15 ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪ ಬರದಿದ್ದರೆ, ಕಂಪನಿಯು, ಇನ್ವೆಸ್ಟರ್ ಎಜುಕೇಷನ್ ಮತ್ತು ಪ್ರೊಟೆಕ್ಷನ್ ಫಂಡ್ ಪ್ರಾಧಿಕಾರದಿಂದ ಷೇರುಗಳನ್ನು ಕ್ಲೇಮ್ ಮಾಡುವುದಕ್ಕಾಗಿ ಸದರಿ ಹಕ್ಕುದಾರರಿಗೆ ಹಕ್ಕು ಪತ್ರವನ್ನು ನೀಡುವ ಪ್ರಕ್ರಿಯೆಯನ್ನು ಕೈಗೊಳ್ಳುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸ್ಥಳ: ಬೆಂಗಳೂರು
ದಿನಾಂಕ: 29-02-2024
ಮಾನಸ. ಆರ್
ಕಂಪನಿ ಸೆಕ್ರಟರಿ

11 ಗಂಟೆಯಲ್ಲಿ ಪರಿಹಾರ
ಮಹಾಗಣಪತಿ ಜ್ಯೋತಿಷ್ಯಂ
ಕೊಳ್ಳೆಗಾಲದ ಪ್ರಖ್ಯಾತ ಜ್ಯೋತಿಷ್ಯರು
ನಿಮ್ಮ ಜೀವನದ ಯಾವುದೇ ಸಮಸ್ಯೆಗಳಿಗೆ 11 ಗಂಟೆಯಲ್ಲಿ 100% ಶಾಶ್ವತ ಪರಿಹಾರ
ಇವರು ಕೇರಳ, ಕೊಳ್ಳೆಗಾಲ, ಕಾಶಿ ಅಘೋರಿ ನಾಗಾ ಸಾಧುಗಳ ವಿದ್ಯೆಯನ್ನು ಸತತ 21 ವರ್ಷ ಅಧ್ಯಯನ ಮಾಡಿ ಲಕ್ಷಾಂತರ ಜನರ ಸಮಸ್ಯೆಗಳ ಪರಿಹಾರಕ್ಕೆ ಇಂದಿಗೂ ಕಾರಣಕರ್ತರಾಗಿದ್ದಾರೆ.
ಸ್ತ್ರೀ ಪುರುಷ ವಶೀಕರಣ 2 ಗಂಟೆಯಲ್ಲಿ ಮಾಡುತ್ತಾರೆ
ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರುಕಾಟ, ಲೈಂಗಿಕ ಸಮಸ್ಯೆ ಮತ್ತು ನೀವು ಯಾವುದೇ ಸಮಸ್ಯೆಗಳಿಂದ ನೊಂದಿದ್ದರೆ ಗುರೂಜಿಯವರನ್ನು ಸಂಪರ್ಕಿಸಿ
ಇಂದಿಗೂ ಸಾವಿರಾರು ಕುಟುಂಬಗಳು ಗುರೂಜಿಯವರಿಂದ ಪರಿಹಾರ ಪಡೆದುಕೊಂಡು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ.
ಓಂ ವಶೀಕರಣ ಸ್ಪೇಷಲಿಸ್ಟ್ ಓಂ
ಪಂಡಿತ ಶ್ರೀ ಸೂರ್ಯನಾರಾಯಣ ಭಟ್ಟರು (ಗುರೂಜಿ)
ಮೊ:9591911004

ಷೆಡ್ಯೂಲ್ 1 ಫಾರಂ-ಎ
ಸಾರ್ವಜನಿಕ ಘೋಷಣೆ
(ಭಾರತದ ಇನ್ಸಾಲ್ವನ್ಸಿ ಮತ್ತು ಬ್ಯಾಂಕ್‌ರಪ್ಸಿ ಮಂಡಳಿಯ (ವಾಲಂಟರಿ ಲಿಕ್ವಿಡೇಶನ್ ಪ್ರಾಸೆಸ್) ನಿಯಮಾವಳಿಗಳು, 2017ರ ನಿಯಮ 14)

ಪ್ರೊಪೆಲ್ಲರ್ ಆಡ್ಸ್ ಪ್ರೈವೇಟ್ ಲಿಮಿಟೆಡ್‌ನ ಪಾಲುದಾರರ ಗಮನಕ್ಕೆ

1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಪ್ರೊಪೆಲ್ಲರ್ ಆಡ್ಸ್ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ವ್ಯಕ್ತಿಯ ಸಂಸ್ಥಾಪನಾ ದಿನಾಂಕ	ಜುಲೈ 14, 2022
3.	ಕಾರ್ಪೊರೇಟ್ ವ್ಯಕ್ತಿಗೆ ಸಂಸ್ಥಾಪನೆ/ನೋಂದಣಿ ಒದಗಿಸಿರುವ ಪ್ರಾಧಿಕಾರ	ಕಂಪನಿಗಳ ರಿಜಿಸ್ಟ್ರಾರ್ -ಬೆಂಗಳೂರು ಕಂಪನಿಗಳ ಕಾಯ್ದೆ, 2013ರ ನಿಯಮಗಳ ಅಡಿಯಲ್ಲಿ
4.	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಗುರುತಿನ ಸಂಖ್ಯೆ/ಸೀಮಿತ ಹೊಣೆಗಾರಿಕೆಯ ಗುರುತಿನ ಸಂಖ್ಯೆ	U72900KA2022FTC163782
5.	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಚೇರಿಯ ಮತ್ತು ಪ್ರಧಾನ ಕಚೇರಿಯ (ಯಾವುದಾದರೂ ಇದ್ದಲ್ಲಿ) ವಿಳಾಸ	ಕೇರಾಫ್ ವಿ ವರ್ಕ್, ನಂ. 36, ಪ್ರೆಸ್ಟೀಜ್ ಸೆಂಟ್ರಲ್, ಇನ್ಫಂಟ್ರಿ ರಸ್ತೆ, ಬೆಂಗಳೂರು ಜಿ.ಪಿ.ಒ., ಬೆಂಗಳೂರು, ಬೆಂಗಳೂರು ಉತ್ತರ, ಕರ್ನಾಟಕ, ಭಾರತ, 560001
6.	ಕಾರ್ಪೊರೇಟ್ ವ್ಯಕ್ತಿಯ ಲಿಕ್ವಿಡೇಶನ್ ಆರಂಭದ ದಿನಾಂಕ	ಫೆಬ್ರವರಿ 28, 2024
7.	ಲಿಕ್ವಿಡೇಟರ್ ಹೆಸರು, ವಿಳಾಸ, ಇಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ	ವಿ. ಶಂಕರ್, ಇಮೇಲ್: 1981shanky@gmail.com ವಿಳಾಸ: 303, ಬ್ಲಾಕ್-ಎ, ಲೆಜೆಂಡ್ ಕಮರ್ಷಿಯಲ್ ಕಾಂಪ್ಲೆಕ್ಸ್, 3-4770 ಮತ್ತು 136, ಐಸಿಐಸಿಐ ಬ್ಯಾಂಕ್ ಎದುರು, ಕೇಶವ ಮೆಡಿಕಲ್ಸ್ ಮೇಲ್ಭಾಗ, ಬರ್ಕತ್‌ಪುರ, ಹೈದರಾಬಾದ್-500027. ಐಬಿಬಿಐ ನೋಂದಣಿ: ಐಬಿಬಿಐ/ಐಪಿಎ-002/ಐಪಿ-ಎನ್00145/2017-18/10436
8.	ಕ್ಲೇಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಮಾರ್ಚ್ 29, 2024, ಸಂಜೆ 5:00ರೊಳಗೆ (ಐಎಸ್‌ಟಿ)

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, **ಪ್ರೊಪೆಲ್ಲರ್ ಆಡ್ಸ್ ಪ್ರೈವೇಟ್ ಲಿಮಿಟೆಡ್** ಕಂಪನಿಯು ದಿನಾಂಕ ಫೆಬ್ರವರಿ 28, 2024 ರಂದು ಸ್ವಯಂಪ್ರೇರಿತ ಲಿಕ್ವಿಡೇಶನ್ ಆರಂಭಿಸಿರುತ್ತದೆ. ಹೀಗಿರುವಾಗ, **ಪ್ರೊಪೆಲ್ಲರ್ ಆಡ್ಸ್ ಪ್ರೈವೇಟ್ ಲಿಮಿಟೆಡ್** ಕಂಪನಿಯ ಪಾಲುದಾರರು ಮೇಲಿನ ಕಾಲಂ ನಂ. 7 ರಲ್ಲಿ ತಿಳಿಸಲಾಗಿರುವ ವಿಳಾಸದಲ್ಲಿರುವ ಲಿಕ್ವಿಡೇಟರ್‌ರವರಿಗೆ ತಮ್ಮ ಕ್ಲೇಮ್ ಪುರಾವೆಗಳನ್ನು ಮಾರ್ಚ್ 29, 2024 ರಂದು ಸಂಜೆ 5:00 ರೊಳಗೆ (ಐಎಸ್‌ಟಿ) ಸಲ್ಲಿಸಬೇಕೆಂದು ಕರೆ ನೀಡಲಾಗಿದೆ. ಫೈನಾನ್ಷಿಯಲ್ ಕ್ರೆಡಿಟರ್‌ಗಳು ಕೂಡ ತಮ್ಮ ಕ್ಲೇಮ್ ಪುರಾವೆಗಳನ್ನು ಅಂಚೆ ಮೂಲಕ ಅಥವಾ ವಿದ್ಯುನ್ಮಾನ ವಿಧಾನದ ಮೂಲಕ ಸಲ್ಲಿಸುವುದು. ಇನ್ನಿತರೆ ಎಲ್ಲಾ ಪಾಲುದಾರರು ತಮ್ಮ ಕ್ಲೇಮ್ ಪುರಾವೆಗಳನ್ನು ಖುದ್ದಾಗಿಯಾಗಲಿ, ಅಂಚೆ ಮೂಲಕವಾಗಲಿ ಅಥವಾ ವಿದ್ಯುನ್ಮಾನ ವಿಧಾನದಲ್ಲಾಗಲಿ ಸಲ್ಲಿಸಬಹುದು. ಸುಳ್ಳು ಅಥವಾ ದಿಕ್ಕು ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಸಲ್ಲಿಸಿದರೆ ಜುಲ್ಮಾನೆ ವಿಧಿಸಲಾಗುತ್ತದೆ.

ದಿನಾಂಕ: ಫೆಬ್ರವರಿ 28, 2024
ಸ್ಥಳ: ಹೈದರಾಬಾದ್
ಲಿಕ್ವಿಡೇಟರ್‌ವರ ಹೆಸರು ಮತ್ತು ಸಹಿ: ವಿ. ಶಂಕರ್
ಎಎಫ್‌ಎ: ಎಎ2/10436/02/181024/202922

ಆನೇಕಲ್ ಯೋಜನಾ ಪ್ರಾಧಿಕಾರ
'ಅಣ್ಣ', ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560 099.
www.anekal.tpa.gov.in, www.e-vinyasa.kar.nic.in

ಸಂಖ್ಯೆ: ಅಯೋಪ್ರಾ/ಭೂ.ಬ./56/2023-24 **ಪ್ರಕಟಣೆ** ದಿನಾಂಕ: 27.02.2024

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಜನಾರ್ಧನ ಎಂ. ಬಿನ್ ಮುನಿರೆಡ್ಡಿ, ಶ್ರೀ ಪ್ರಭಾಕರ್ ಆರ್. ರೆಡ್ಡಿ ಬಿನ್ ಲೇ. ಜಿ. ರಾಮಸ್ವಾಮಿ ರೆಡ್ಡಿ ಮತ್ತು ಶ್ರೀ ಜಯಪಾಲ್ ಕೆ. ಬಿನ್ ಕೃಷ್ಣಾರೆಡ್ಡಿ	ಆನೇಕಲ್	ಸರ್ಜಾಪುರ	ಜಂತ ಗೊಂಡನ ಹಳ್ಳಿ	16	0-21	ಕೃಷಿ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರಕುತ್ತದೆ. ವಸತಿ ಅವಲಂಬಿತ ಅನ್ಯ ಉದ್ಯಮಗಳು ಅಭಿವೃದ್ಧಿ ಹೊಂದಿ ಹೆಚ್ಚಿನ ಉದ್ಯೋಗಾವಕಾಶಗಳು, ಉದ್ದಿಮೆಗಳು ಸೃಷ್ಟಿಯಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **ಕೃಷಿ** ವಲಯದಿಂದ **ವಸತಿ** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾಪ್ರ/ಜಿಎ/3922/2023-24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು-560 029. ಫೋನ್: 25536625, 25536789

IFT NO. ಕಹಾಮ/ಅಭಿ/Mech/1825/1841/2023-24 ದಿನಾಂಕ: 29-02-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ಅಡಿಯಲ್ಲಿಅಲ್ಪಾವದಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರಿ ಹಾಲು ಮಂಡಳವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸರಬರಾಜು, ಅನುಷ್ಠಾನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ನಂದಿನಿ ವೀರ್ಯಾಣುಕೇಂದ್ರದ ಕೃಷಿ ಭೂಮಿಯ ಬೋರ್ ವೆಲ್‌ಗಳಿಗೆ ಯುಜಿ ಕೇಬಲ್ ಅಳವಡಿಸುವ ಹಾಗೂ ಸಂಬಂಧಿಸಿದ ಮತ್ತಿತರೆ ಕೆಲಸಗಳು.	1 ಜಾಬ್	17,500/-	2 ತಿಂಗಳು
2	ಹಾಸನದ ಪಶು ಆಹಾರ ಘಟಕದಲ್ಲಿ ಬಾಯ್ಲರ್ ಟ್ಯೂಬ್‌ಗಳ ಬದಲಾವಣೆ ಹಾಗೂ ಸಂಬಂಧಿಸಿದ ಮತ್ತಿತರೆ ಕೆಲಸಗಳು	1 ಜಾಬ್	50,000/-	3 ತಿಂಗಳು

1) ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 01-03-2024 ರಿಂದ 11-03-2024 ರ ಸಾಯಂಕಾಲ 4:00 ಗಂಟೆಯವರೆಗೆ. 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11-03-2024 ಸಾಯಂಕಾಲ 4:00 ಗಂಟೆಯವರೆಗೆ. 3) ಟೆಂಡರುಗಳನ್ನು (Cover - 1)ತೆರೆಯುವ ದಿನಾಂಕ: 12-03-2024 ರಂದು ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಅಭಿಯಂತರ-2)

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ – 562123,
E-mail: itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080-23718487

ಸಂಖ್ಯೆ: ಮಾ.ನ.ಕಾ/ತಾ.ಶಾ/17/2023-24 ದಿನಾಂಕ: 29-02-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal https://kppp.karnataka.gov.in only)

2023-24 ನಗರಸಭಾ ನಿಧಿ ಅನುದಾನ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರಮ. ಸಂ.	ಇಂಡೆಂಟ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಕಾಲಾವಧಿ	ವರ್ಗ
1.	DMA/2023-24/WS/WORK_INDENT4865/Call-2	30.00	60,000	03 ತಿಂಗಳು	Others
2.	DMA/2023-24/WS/WORK_INDENT14866/Call-2	30.00	60,000	03 ತಿಂಗಳು	Others
3.	DMA/2023-24/WS/WORK_INDENT16444	18.43	46,075	03 ತಿಂಗಳು	Others

ಟೆಂಡರ್ ಸಲ್ಲಿಸುವ ವಿವರಗಳು:- (1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್ ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **07-03-2024** ಸಂಜೆ **5.00** ಗಂಟೆಯವರೆಗೆ **(2)** ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **08-03-2024** ಸಂಜೆ **5.30** ಗಂಟೆಗೆ ಅಥವಾ ಪೌರಾಯುಕ್ತರು ಸೂಚಿಸುವ ದಿನಾಂಕದಂದು.

ಸೂಚನೆ:- ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/3981/ಸ್ಕ್ಯಾನ್/2023-24

ಕರ್ನಾಟಕ ಸರ್ಕಾರ
ನಗರಾಭಿವೃದ್ಧಿ ಇಲಾಖೆ
ರಾಜ್ಯ ಅಭಿಯಾನ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್(ನಗರ)
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560001.
ದೂರವಾಣಿ: 080- 22867172 / 22866302, ಫ್ಯಾಕ್ಸ್: 080-22863576/22861665
ಇ-ಮೇಲ್: smdsbmkar@gmail.com | ವೆಬ್‌ಸೈಟ್: www.municipaladmn.gov.in

ಸಂಖ್ಯೆ: 1288225/ಡಿಎಂಎ/ಘವನಿ/ಎಸ್‌ಬಿಎಂ/3/2024 ದಿನಾಂಕ: 29-02-2024

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್ 2.0 (ನ) ಯೋಜನೆಯಡಿ ರಾಜ್ಯ ಅಭಿಯಾನ ನಿರ್ದೇಶನಾಲಯದ ಕಛೇರಿಯ ಕೆಲಸಗಳಿಗೆ ಅವಶ್ಯವಿರುವ 1 ಸಂಖ್ಯೆಯ Innova crysta ಮತ್ತ 4 ಸಂಖ್ಯೆಗಳ Sedan ವಾಹನಗಳನ್ನು ಬಾಹ್ಯ ಮೂಲ (Out-source) ಗಳಿಂದ ಪಡೆಯುವ ಕೆಲಸಕ್ಕೆ ಟೆಂಡರ್ (INDENT NO: DMA/2023-24/SE2630) ನ್ನು ಆಹ್ವಾನಿಸಲಾಗಿದೆ ಟೆಂಡರ್ ಅನ್ನು LCS ಆಧಾರದ ಮೇಲೆ ಇ-ಪೋರ್ಟಲ್ ಮುಖಾಂತರ ಪ್ರಚುರ ಪಡಿಸಲಾಗಿದ್ದು, ಇ-ಪೋರ್ಟಲ್ ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಅಪ್ಲೋಡ್ ಮಾಡಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು **https://kppp.karnataka.gov.in** ಪೋರ್ಟಲ್ ಮುಖಾಂತರವೆ ಪಡೆಯುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು(ಘವನಿ),
ಸ್ವಚ್ಛ ಭಾರತ್ ಮಿಷನ್(ನಗರ),
ಬೆಂಗಳೂರು.

ವಾಸಾಸಂಇ/ವಾಪ್ರ/3963/ಎಸ್‌ಎಸ್‌ಸಿ/2023-24

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಸಂಘ, ಕೋಲಾರ ಜಿಲ್ಲೆ.
ಕೆ.ಎನ್.ಟಿ.ಬಿ ಸ್ಯಾನಿಟೋರಿಯಂ ಆಸ್ಪತ್ರೆ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ- 563102

ಸಂಖ್ಯೆ:ಡಿಹೆಚ್‌ಎಸ್/ಎನ್‌ಹೆಚ್‌ಎಂ/ಕೋ/ಹೊ.ಗು/02/2023-24
ದಿನಾಂಕ: 26.02.2024

E-PROCUREMENT TENDAR NOTIFICATION

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಕೋಲಾರ ಜಿಲ್ಲೆ ಇಲ್ಲಿಗೆ ಎನ್‌ಹೆಚ್‌ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಿಗೆ ಅನುಮೋದನೆಯಾಗಿರುವ ಸಿಬ್ಬಂದಿಯನ್ನು ಹೊರ ಸಂಪನ್ಮೂಲ ಸಂಸ್ಥೆಯಿಂದ 2024-25 ನೇ ಸಾಲಿಗೆ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ **(KPPP)** 1999 ನಿಯಮಗಳು 2000 ರ ಪ್ರಕಾರ E- Procurement ಮೂಲಕ ಟೆಂಡರ್ ಮೂಲಕ ಆಹ್ವಾನಿಸಿದ್ದು, ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, **www.kppp.karnataka.gov.in/ kolar.nic.in/https://kolarhfwd.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
ಕೋಲಾರ ಜಿಲ್ಲೆ. ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:381/ಕೆಎಸ್‌ಎಂಸಿಎ/2023-24

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 009.
ದೂ: 080-22341230/35 ಇ-ಮೇಲ್: bmicapa@gmail.com

ಸಂ: ಬಿಎಂಐಸಿಎಪಿಎ/ಭೂಉಬ-01/76/2023-24/1853 ದಿನಾಂಕ: 29.02.2024

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಮಹೇಶ್ ಕುಮಾರ್ ಬಿನ್ ಲೇಟ್ ಮುನಿರಾಜು ಇವರು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮಂಗನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:62/10ರ 0ಎ-35.08ಗು ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿವೆ.
4. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ-ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/3960/2023-24

ರೈಲ್ವೆ: ಒಪಿಎಸ್ ಜಾರಿಗೆ ಮೇ 1ರ ಗಡುವು

ನವದೆಹಲಿ (ಪಿಟಿಐ): ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಲು ಮೇ 1ರ ಗಡುವು ನೀಡಿರುವ ರೈಲ್ವೆ ನೌಕರರ ಸಂಘಟನೆಗಳು, ಬೇಡಿಕೆ ಈಡೇರದಿದ್ದಲ್ಲಿ ಎಲ್ಲ ರೈಲುಗಳ ಸಂಚಾರ ಸ್ಥಗಿತಗೊಳಿಸಲಾಗುವುದು ಎಂದು ಎಚ್ಚರಿಸಿವೆ.

ಹಳೆಯ ಪಿಂಚಣಿ ಯೋಜನೆ ಮರುಜಾರಿಗಾಗಿ ಜಂಟಿ ವೇದಿಕೆ (ಜೆಎಫ್‌ಆರ್‌ಒಪಿಎಸ್) ಜೊತೆಗೆ ಗುರುತಿಸಿಕೊಂಡಿರುವ ರೈಲ್ವೆ ನೌಕರರ ವಿವಿಧ ಸಂಘಟನೆಗಳು, ಒಪಿಎಸ್ ಜಾರಿಗೆ ಒತ್ತಡ ಹೇರಲು ಮೇ 1ರಿಂದ ರೈಲು ಸಂಚಾರ ಸ್ಥಗಿತ ಪ್ರತಿಭಟನೆ ನಡೆಸಲು ತೀರ್ಮಾನಿಸಿವೆ.

ಕೇಂದ್ರ ಸರ್ಕಾರ ಈ ಕುರಿತು ಸ್ಪಷ್ಟ ಭರವಸೆ ನೀಡುತ್ತಿಲ್ಲ. ಈಗ ನಮಗೆ ನೇರ ಪ್ರತಿಭಟನೆಗೆ ಇಳಿಯದೇ ಅನ್ಯಮಾರ್ಗವಿಲ್ಲವಾಗಿದೆ ಎಂದು ಜೆಎಫ್‌ಆರ್‌ಒಪಿಎಸ್ ಸಂಚಾಲಕ ಶಿವಗೋಪಾಲ್ ಮಿಶ್ರಾ ಅವರು ಹೇಳಿದ್ದಾರೆ.

ಜಿಕೆವಿಕೆ: ಇಐಎಂಎ ಅಗ್ರಿಮ್ಯಾಕ್ ಇಂಡಿಯಾ–2024ರಲ್ಲಿ 100ಕ್ಕೂ ಹೆಚ್ಚು ಮಳಿಗೆಗಳು

ಕೃಷಿ ಯಂತ್ರೋಪಕರಣ ಪ್ರದರ್ಶನ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಿಕೆವಿಕೆ ಆವರಣದಲ್ಲಿ ಹಮ್ಮಿಕೊಂಡಿರುವ 'ಇಐಎಂಎ ಅಗ್ರಿಮ್ಯಾಕ್ ಇಂಡಿಯಾ–2024' ಕೃಷಿ ಯಂತ್ರೋಪಕರಣ ಪ್ರದರ್ಶನಕ್ಕೆ ಗುರುವಾರ ಚಾಲನೆ ನೀಡಲಾಯಿತು. ಮಾರ್ಚ್ 3ರವರೆಗೂ ಪ್ರದರ್ಶನ ನಡೆಯಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ.

ಪ್ರದರ್ಶನದಲ್ಲಿ 100ಕ್ಕೂ ಹೆಚ್ಚು ಮಳಿಗೆಗಳಿದ್ದು, ಕೃಷಿ ಕ್ಷೇತ್ರದಲ್ಲಿಯ ಹೊಸ ಆವಿಷ್ಕಾರ ಹಾಗೂ ಹೊಸ ಯಂತ್ರೋಪಕರಣಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ. ಬಿತ್ತನೆ ಹಾಗೂ ಕಟಾವಿಗೆ ಸಂಬಂಧಪಟ್ಟ ಯಂತ್ರಗಳನ್ನು ಪ್ರದರ್ಶನದಲ್ಲಿ ಇರಿಸಲಾಗಿದ್ದು, ಖರೀದಿಗೂ ಅವಕಾಶ ಕಲ್ಪಿಸಲಾಗಿದೆ.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘಗಳ ಒಕ್ಕೂಟ (ಎಫ್‌ಐಸಿಸಿಐ), ಫೆಡೆರುನಾಕೊಮಾ

ಪ್ರದರ್ಶನಕ್ಕೆ ಗುರುವಾರ ಭೇಟಿ ನೀಡಿದ್ದ ರೈತರು, ಔಷಧ ಸಿಂಪಡಣೆ ಡ್ರೋನ್ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಜಂಟಿಯಾಗಿ ಪ್ರದರ್ಶನವನ್ನು ಆಯೋಜಿಸಿದ್ದು, ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಸಹಭಾಗಿತ್ವವಿದೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ಹಾಗೂ ನೆರೆ ರಾಜ್ಯಗಳ ರೈತರು ಪ್ರದರ್ಶನಕ್ಕೆ ಗುರುವಾರ ಭೇಟಿ ನೀಡಿದರು.

ವಿದ್ಯುತ್ ಚಾಲಿತ ಟ್ರ್ಯಾಕ್ಟರ್, ಮೇವು ಕತ್ತರಿಸುವ ಯಂತ್ರಗಳು, ರೋಟಾವೇಟರ್, ಕಲ್ಟಿವೇಟರ್,

ಮುಖ್ಯಾಂಶಗಳು

- ಅತ್ಯಾಧುನಿಕ ಯಂತ್ರಗಳ ಪ್ರದರ್ಶನ
- ಪ್ರಾತ್ಯಕ್ಷಿಕೆ ಮತ್ತು ವಿಚಾರ ಗೋಷ್ಠಿಗಳು

ಔಷಧ ಸಿಂಪರಣೆಯ ಡ್ರೋನ್‌ಗಳು, ಪಂಪ್‌ಸೆಟ್‌ಗಳು, ಬೃಹತ್ ಗಾತ್ರದ ಭತ್ತ ಕಟಾವು ಯಂತ್ರಗಳು, ಕೃಷಿ ಕೆಲಸಕ್ಕೆ ಬೇಕಾಗುವ ಸಾಮಗ್ರಿಗಳನ್ನು ಪ್ರದರ್ಶನದಲ್ಲಿ ಇರಿಸಲಾಗಿದೆ.

ರಾಜ್ಯ, ಹೊರ ರಾಜ್ಯ ಹಾಗೂ ವಿದೇಶಿ ಕಂಪನಿಗಳು ಪ್ರದರ್ಶನದಲ್ಲಿ ಮಳಿಗೆ ತೆರೆದಿವೆ. ಕೃಷಿ ಕ್ಷೇತ್ರದಲ್ಲಿರುವ ಹೊಸ ಉದ್ಯೋಗಾವಕಾಶಗಳ ಬಗ್ಗೆ ಮಳಿಗೆಯಲ್ಲಿ ಮಾಹಿತಿ ನೀಡಲಾಗುತ್ತಿದೆ. ಕಡಿಮೆ ಖರ್ಚಿನಲ್ಲಿ ಅಧಿಕ ಆದಾಯ ಗಳಿಸುವ ಬಗ್ಗೆ ತಜ್ಞರು ಮಾಹಿತಿ ವಿನಿಮಯ ಮಾಡಿಕೊಂಡರು.

ಕೃಷಿ ಕ್ಷೇತ್ರದ ಸಮಸ್ಯೆಗಳು ಹಾಗೂ ರೈತರ ಕಷ್ಟಗಳ ನಿವಾರಣೆಗೆ ಸಂಬಂಧಪಟ್ಟಂತೆ ತಜ್ಞರ ಗೋಷ್ಠಿಗಳು ನಡೆದವು. ಅಂತರರಾಷ್ಟ್ರೀಯ ಕೃಷಿ ತಜ್ಞರು ಗೋಷ್ಠಿಯಲ್ಲಿ ವಿಶೇಷ ಉಪನ್ಯಾಸ ನೀಡಿದರು. ಇಟಲಿ, ಟರ್ಕಿ, ಥಾಯ್ಲೆಂಡ್, ಸ್ಪೇನ್, ಜಪಾನ್ ಹಾಗೂ ಇತರೆ ದೇಶಗಳ ಪ್ರತಿನಿಧಿಗಳು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ಉಚಿತ ತರಬೇತಿ: ಕೇಂದ್ರ ಸರ್ಕಾರದ ದಕ್ಷಿಣ ವಲಯ ಕೃಷಿ ಯಂತ್ರೋಪಕರಣ ತರಬೇತಿ ಹಾಗೂ ಪರೀಕ್ಷಾ ಸಂಸ್ಥೆಯಿಂದ ಮಳಿಗೆ ತೆರೆಯಲಾಗಿತ್ತು.

'ಕೃಷಿ ಯಂತ್ರೋಪಕರಣಗಳ ದುರಸ್ತಿ ಹಾಗೂ ನಿರ್ವಹಣೆ ಬಗ್ಗೆ ರೈತರು ಮತ್ತು ಅವರ ಮಕ್ಕಳಿಗೆ ಉಚಿತವಾಗಿ ತರಬೇತಿ ನೀಡಲಾಗುತ್ತಿದೆ. ಮಾಹಿತಿಗೆ www.srfmtti.nic.in ಸಂಪರ್ಕಿಸಬಹುದು' ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ಹೇಳಿದರು.



ಗಗನಯಾನ ಮಿಷನ್ ಗೆ ನಾಲ್ಕು ಗಗನಯಾತ್ರಿಗಳು ಆಯ್ಕೆಯಾಗಿದ್ದಾರೆ.

'ಚೀನಾ ಬಾವುಟ ವಿವಾದ: ವಿನ್ಯಾಸಕಾರನ ತಪ್ಪು'

ತೂತ್ತುಕುಡಿ: ತಮಿಳುನಾಡಿನಲ್ಲಿ ಇಸ್ರೊದ ನೂತನ ರಾಕೆಟ್ ಉಡ್ಡಯನ ಕೇಂದ್ರಕ್ಕೆ ಶಿಲಾನ್ಯಾಸ ಕಾರ್ಯಕ್ರಮದ ಅಂಗವಾಗಿ ನೀಡಿದ್ದ ಜಾಹೀರಾತಿನಲ್ಲಿ ಚೀನಾ ಬಾವುಟ ಮುದ್ರಿತವಾಗಿರುವುದಕ್ಕೆ ವಿನ್ಯಾಸಕಾರನಿಂದಾದ ಲೋಪವೇ ಕಾರಣ ಎಂದು ಡಿಎಂಕೆ ನಾಯಕಿ ಹಾಗೂ ಮೀನುಗಾರಿಕೆ ಸಚಿವೆ ಅನಿತಾ ರಾಧಾಕೃಷ್ಣನ್ ಗುರುವಾರ ಹೇಳಿದ್ದಾರೆ.

ಜಾಹೀರಾತಿನಲ್ಲಿ ರಾಕೆಟ್‌ನ ತುದಿಯಲ್ಲಿ ಚೀನಾ ಬಾವುಟ ಮುದ್ರಿತವಾಗಿರುವುದು ವಿವಾದಕ್ಕೆ ಕಾರಣವಾಗಿತ್ತು. ಈ ವಿಚಾರವಾಗಿ ಡಿಎಂಕೆ ವಿರುದ್ಧ ಬಿಜೆಪಿ ರಾಜ್ಯ ಘಟಕ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ವಾಗ್ದಾಳಿ ನಡೆಸಿದ್ದರು.

ನಗರದ ಪೀಣ್ಯ ಎರಡನೇ ಹಂತದ ಅಂದ್ರಹಳ್ಳಿ ಮುಖ್ಯರಸ್ತೆ ಅನುಪಮಾ ಕಾಲೇಜಿನಲ್ಲಿ ವಿದ್ಯಾಗಣಪತಿ ಪ್ರತಿಷ್ಠಾಪನೆ ಹಾಗೂ ಗೋಪುರದ ಕುಂಭಾಭಿಷೇಕ ಕಾರ್ಯಕ್ರಮವನ್ನು ಶೃಂಗೇರಿ ಜಗದ್ಗುರು ಶಿವಗಂಗಾ ಶಾರದಾ ಮಠದ ಪುರುಷೋತ್ತಮ ಸ್ವಾಮೀಜಿ ಉದ್ಘಾಟಿಸಿದರು. ಕಾಲೇಜಿನ ಸಂಸ್ಥಾಪಕ ಎಸ್.ಎಲ್.ಕೃಷ್ಣಮೂರ್ತಿ, ಪ್ರಾಂಶುಪಾಲ ವೆಂಕಟೇಶ್ ಉಪಸ್ಥಿತರಿದ್ದರು

ಇಂದಿನಿಂದ ದನಗಳ ಜಾತ್ರೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಸಮೀಪದ ತೋಟಗೆರೆ ಬಸವಣ್ಣ ದೇವಸ್ಥಾನ ಕ್ಷೇತ್ರದಲ್ಲಿ ಮಾರ್ಚ್ 1ರಿಂದ ಎಂಟು ದಿನ ಜಿಲ್ಲಾ ಮಟ್ಟದ ದನಗಳ ಜಾತ್ರೆ ನಡೆಯಲಿದೆ ಎಂದು ಸಿಎನ್‌ಆರ್ ಹಿತಚಿಂತನಾ ಚಾರಿಟೆಬಲ್ ಟ್ರಸ್ಟ್ ತಿಳಿಸಿದೆ.

ದನಗಳ ಜಾತ್ರೆಯಲ್ಲಿ ವಿವಿಧ ತಳಿಗಳ ಜಾನುವಾರು ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಜಾತ್ರೆಯಲ್ಲಿ ನೀರಿನ ಸೌಲಭ್ಯ ಕಲ್ಪಿಸಲಾಗುವುದು. ಉತ್ತಮ ರಾಸುಗಳಿಗೆ ಪ್ರಥಮ ಬಹುಮಾನವಾಗಿ

100 ಗ್ರಾಂ ಬೆಳ್ಳಿ, ದ್ವಿತೀಯ ಬಹುಮಾನ 50 ಗ್ರಾಂ ಬೆಳ್ಳಿ ತೃತೀಯ ಬಹುಮಾನದ ರೂಪದಲ್ಲಿ 25 ಗ್ರಾಂ ಬೆಳ್ಳಿ ನೀಡಲಾಗುವುದು. ಜಾತ್ರೆಯಲ್ಲಿ 500ಕ್ಕೂ ಹೆಚ್ಚು ಜಾನುವಾರುಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಟ್ರಸ್ಟ್ ಅಧ್ಯಕ್ಷ ವಿ.ರಾಮಸ್ವಾಮಿ ಮಾಹಿತಿ ನೀಡಿದರು.

ಟ್ರಸ್ಟ್ ವತಿಯಿಂದ ಜಾತ್ರೆಯಲ್ಲಿ ಪಾಲ್ಗೊಳ್ಳುವ ಎಲ್ಲ ರೈತರಿಗೆ ಶಲ್ಯ ವಿತರಣೆ ಮತ್ತು ಎಲ್ಲ ಜಾನುವಾರುಗಳಿಗೆ ಬಾರ್ಕೋಲು, ಕೊರಳ ಗೆಜ್ಜೆ, ದಂಡೆ, ಶಂಖ, ವಿತರಣೆ ಮಾಡಲಾಗುವುದು ಎಂದರು. ಐದು ಎಕರೆ ಪ್ರದೇಶದಲ್ಲಿ ಜಾನುವಾರುಗಳಿಗೆ ಸ್ಥಳಾವಕಾಶ ಕಲ್ಪಿಸಿದ್ದು ಬೆಂಗಳೂರು ಉತ್ತರ, ನೆಲಮಂಗಲ, ಮಾಗಡಿ, ತುಮಕೂರು, ದೊಡ್ಡಬಳ್ಳಾಪುರ, ದೇವನಹಳ್ಳಿ ತಾಲ್ಲೂಕುಗಳ ರೈತರು ತಮ್ಮ ರಾಸುಗಳೊಂದಿಗೆ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಧರಣಿ ಹಿಂಪಡೆದ ಅಂಗವಿಕಲರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರ ಬೇಡಿಕೆಗೆ ಸ್ಪಂದಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸ್ಥಳದಲ್ಲಿಯೇ ಆದೇಶ ಹೊರಡಿಸಿದ್ದರಿಂದ ಅಂಗವಿಕಲರು ನಡೆಸುತ್ತಿದ್ದ ಧರಣಿ ಸತ್ಯಾಗ್ರಹವನ್ನು ಹಿಂಪಡೆದುಕೊಂಡರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗವಿಕಲರ ಸಂಘದ ನೇತೃತ್ವದಲ್ಲಿ ಗುರುವಾರ ಧರಣಿ ಆರಂಭವಾಗಿತ್ತು. ಸ್ಥಳಕ್ಕೆ ಭೇಟಿ ನೀಡಿದ ಲಕ್ಷ್ಮೀ ಹೆಬ್ಬಾಳ್ಕರ್ ಬೇಡಿಕೆಗಳನ್ನು ಆಲಿಸಿದರು.

ಮಹಿಳಾ ಪುನರ್ವಸತಿ ಕಾರ್ಯಕರ್ತೆಯರಿಗೆ ವೇತನ ಸಹಿತ 6 ತಿಂಗಳು ಹೆರಿಗೆ ರಜೆ ನೀಡಬೇಕು. ಗರ್ಭಪಾತ ರಜೆ 45 ದಿನ ನೀಡಬೇಕು. ಬೇಡಿಕೆಗೆ ಮತ್ತು ಹೊಸದಾಗಿ ರಚನೆಗೊಂಡಿರುವ 51 ತಾಲ್ಲೂಕುಗಳಿಗೆ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (ಎಂಆರ್‌ಡಬ್ಲ್ಯು) ನೇಮಕಾತಿ ಮಾಡಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಆರ್ಥಿಕ ಇಲಾಖೆಗೆ ಶಿಫಾರಸು ಮಾಡಬೇಕು ಎಂಬ ಬೇಡಿಕೆಗಳನ್ನು ಈಡೇರಿಸಲು ಸ್ಥಳದಲ್ಲಿಯೇ ಆದೇಶ ಹೊರಡಿಸಿದರು.

ಮಾರ್ಚ್ 13 ಅಥವಾ 14 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು.

ಕಳ್ಳತನ: ಬೆರಳಚ್ಚಿನಿಂದ ಸಿಕ್ಕಿಬಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣದಲ್ಲಿ ಆರೋಪಿ ಕಾಂತರಾಜ್ ಅಲಿಯಾಸ್ ಮೋರಿಕಾಂತ್ (47) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಸುಂಕದಕಟ್ಟೆ ಚಂದನ ಬಡಾವಣೆಯ ಕಾಂತರಾಜ್, ಅಪರಾಧ ಹಿನ್ನೆಲೆಯುಳ್ಳವ. ಕೃತ್ಯ ಎಸಗಿದ್ದ ಈತನನ್ನು ಬೆರಳಚ್ಚು ನೀಡಿದ್ದ ಸುಳಿವು ಆಧರಿಸಿ ಸೆರೆ ಹಿಡಿಯಲಾಗಿದೆ. ಇನ್ನೊಬ್ಬ ಆರೋಪಿ ಚಿಕ್ಕಮಗಳೂರಿನ ದುಬೈ ನಗರದ ಯತೀಶ್ ಎಂಬಾತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಕಾಂತರಾಜ್

'ದೂರುದಾರ ಮಹೇಶ್‌ಕುಮಾರ್ ಅವರು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಬೇರೆ ಊರಿಗೆ ಹೋಗಿದ್ದರು. ಬೀಗ ಹಾಕಿದ್ದ ಮನೆ ಗುರುತಿಸಿದ್ದ ಆರೋಪಿಗಳು, ಕಳ್ಳತನಕ್ಕೆ

ಅಪರಾಧ ಸುದ್ದಿ

ಸಂಚು ರೂಪಿಸಿದ್ದರು. ಬೀಗ ಮುರಿದು ಒಳನುಗ್ಗಿದ್ದ ಅವರಿಬ್ಬರು, 50 ಗ್ರಾಂ ಚಿನ್ನಾಭರಣ, 1 ಕೆ.ಜಿ. ಬೆಳ್ಳಿ ಸಾಮಗ್ರಿ ಹಾಗೂ ₹ 35,000 ನಗದು ಕದ್ದೊಯ್ದಿದ್ದರು' ಎಂದು ತಿಳಿಸಿದರು.

'ಆರೋಪಿ ಕಾಂತರಾಜ್ ಈ ಹಿಂದೆಯೂ ಮನೆಗಳಲ್ಲಿ ಕಳ್ಳತನ ಮಾಡಿ ಸಿಕ್ಕಿಬಿದ್ದಿದ್ದ. ಜೈಲಿಗೂ ಹೋಗಿ ಜಾಮೀನಿನ ಮೇಲೆ ಹೊರಬಂದು ಪುನಃ ಕೃತ್ಯ ಎಸಗಲಾರಂಭಿಸಿದ್ದ. ದೂರುದಾರ ಮಹೇಶ್‌ಕುಮಾರ್ ಅವರ ಮನೆಯಲ್ಲಿ ಪರಿಶೀಲನೆ ನಡೆಸಲಾಗಿತ್ತು. ಆಗ ಆರೋಪಿಯ ಬೆರಳಚ್ಚು ಸಿಕ್ಕಿತ್ತು. ಕಾಂತರಾಜ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ' ಎಂದು ಹೇಳಿದರು.

'ಆರೋಪಿಯಿಂದ ₹3.50 ಲಕ್ಷ ಮೌಲ್ಯದ 46 ಗ್ರಾಂ ಚಿನ್ನಾಭರಣ, 1 ಕೆ.ಜಿ. ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ. ಈತನ ಬಂಧನದಿಂದ 2 ಪ್ರಕರಣಗಳೂ ಪತ್ತೆಯಾಗಿವೆ' ಎಂದು ಪೊಲೀಸರು ತಿಳಿಸಿದರು.

ಅಂಗಾಂಗ ಸಾಗಿಸಲು ಸಿಗ್ನಲ್ ಮುಕ್ತ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿಯೊಬ್ಬರ ಹೃದಯ ಹಾಗೂ ಶ್ವಾಸಕೋಶವನ್ನು ಬೇರೆ ವ್ಯಕ್ತಿಗಳಿಗೆ ಅಳವಡಿಸಲು ಕೊಂಡೊಯ್ಯುತ್ತಿದ್ದ ಆಂಬುಲೆನ್ಸ್ ಸಂಚಾರಕ್ಕೆ ಪೊಲೀಸರು ಗುರುವಾರ ಗ್ರೀನ್ ಕಾರಿಡಾರ್ ವ್ಯವಸ್ಥೆ ಮಾಡಿಕೊಟ್ಟರು.

ಹೆಬ್ಬಾಳದ ಆಸ್ಟರ್ ಸಿಎಂಐ ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿಯೊಬ್ಬರು ಮಿದುಳು ನಿಷ್ಕ್ರಿಯಗೊಂಡು ಮೃತಪಟ್ಟಿದ್ದರು. ಇವರ ಅಂಗಾಂಗಗಳನ್ನು ಕುಟುಂಬದವರು ದಾನ ಮಾಡಿದ್ದರು.

ವ್ಯಕ್ತಿಯ ಹೃದಯವನ್ನು ಚೆನ್ನೈನಲ್ಲಿರುವ ಆಸ್ಪತ್ರೆಯೊಂದರಲ್ಲಿ ರೋಗಿಯೊಬ್ಬರಿಗೆ ಅಳವಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು.

ಹೆಬ್ಬಾಳದ ಆಸ್ಟರ್ ಸಿಎಂಐ ಆಸ್ಪತ್ರೆಯಿಂದ ಹೊರಟಿದ್ದ ಆಂಬುಲೆನ್ಸ್

ವಿಶೇಷ ಪೆಟ್ಟಿಗೆಯಲ್ಲಿ ಹೃದಯವನ್ನು ಆಸ್ಪತ್ರೆಯಿಂದ ಆಂಬುಲೆನ್ಸ್‌ನಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಿಗ್ನಲ್ ಮುಕ್ತ ರಸ್ತೆಯಲ್ಲಿ ಕೊಂಡೊಯ್ಯಲಾಯಿತು. ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸರು, ಆಂಬುಲೆನ್ಸ್ ತಡೆರಹಿತವಾಗಿ ಸಂಚರಿಸಲು ಅನುಕೂಲ ಮಾಡಿಕೊಟ್ಟರು. ವಿಮಾನದಲ್ಲಿ ಹೃದಯವನ್ನು ಚೆನ್ನೈಗೆ ಕಳುಹಿಸಲಾಯಿತು.

ಅದೇ ವ್ಯಕ್ತಿಯ ಶ್ವಾಸಕೋಶವನ್ನು ಜೆ.ಪಿ.ನಗರದ ಆರ್.ವಿ. ಆಸ್ಟರ್ ಆಸ್ಪತ್ರೆಯಲ್ಲಿರುವ ರೋಗಿಗೆ ಕಸಿ ಮಾಡಲಾಯಿತು. ಶ್ವಾಸಕೋಶ ಕೊಂಡೊಯ್ಯಲು ಸಹ ಪೊಲೀಸರು, ಗ್ರೀನ್ ಕಾರಿಡಾರ್ ವ್ಯವಸ್ಥೆ ಮಾಡಿಕೊಟ್ಟರು.

ಡೆನ್-ಟಾನಿಕ್®

ಹಲ್ಲುಗಳು ಸುಲಭವಾಗಿ ಬರಲು ಸೂಕ್ತ

ಹೋಮಿಯೋಪತಿ ಮಾತ್ರೆಗಳು

ನಕಲಿಯನ್ನು ತೆಗೆದುಕೊಳ್ಳಬೇಡಿ, ನಿಜವನ್ನು ಮಾತ್ರ ಆರಿಸಿ

ಎ–ಪಿಲ್ಸ್®

ಅರಿವಿಲ್ಲದೆ ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವ ಮಕ್ಕಳಿಗೆ ಉಪಯುಕ್ತ

ಹೋಮಿಯೋಪತಿ ಮಾತ್ರೆಗಳು

Mfg.: Homoeo Laboratories, Pune.
Email : homoeolab@gmail.com
SS:B.R.Ent, Mumbai.
Mobile 8652756688 / 7219731618
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Deepak Pharma Agency, Mysore : 988672264
For Product information contact : Bhargavi Bhatt : 6363477044

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ · ಸತ್ಯಮೇವ ಜಯತೇ · ರಾಷ್ಟ್ರೀಯ ಆರೋಗ್ಯ ಅಭಿಯಾನ · JEEVASARTHAKATHE

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಅವರಿಂದ ಅಂಗಾಂಗ ದಾನಿಗಳ ಕುಟುಂಬದವರಿಗೆ **ಪ್ರಶಂಸಾ ಪತ್ರ** ನೀಡಿ ಗೌರವಿಸುವ ಕಾರ್ಯಕ್ರಮಕ್ಕೆ ಚಾಲನೆ

1ನೇ ಮಾರ್ಚ್ 2024, ಶುಕ್ರವಾರ

ಬೆಳಿಗ್ಗೆ 09:00 ಗಂಟೆಗೆ — ಕೃಷ್ಣ, ಮುಖ್ಯಮಂತ್ರಿಗಳ ಗೃಹ ಕಛೇರಿ , ಕುಮಾರ ಕೃಪ ರಸ್ತೆ, ಬೆಂಗಳೂರು

"ಅಂಗಾಂಗ ದಾನ ಮಾಡಿ ಜೀವ ಉಳಿಸಿ"



- ಒಬ್ಬ ದಾನಿಯು ಹೃದಯ, ಕಿಡ್ನಿ, ಲಿವರ್, ಮೇದೋಜೀರಕ ಗ್ರಂಥಿ, ಸಣ್ಣ ಕರುಳು, ಶ್ವಾಸಕೋಶಗಳನ್ನು ದಾನ ಮಾಡುವ ಮೂಲಕ 8 ಜೀವಗಳನ್ನು ಉಳಿಸಬಹುದು.
- ಚರ್ಮ, ಅಸ್ಥಿಮಜ್ಜೆ, ಹೃದಯದ ಕವಾಟ, ಮತ್ತು ಕಾರ್ನಿಯಾ ಮುಂತಾದ ಅಂಗಾಂಶಗಳನ್ನು ದಾನ ಮಾಡುವ ಮೂಲಕ 50 ಜನರ ಜೀವಕ್ಕೆ ನೆರವಾಗಬಹುದು.
- ಯಾವುದೇ ವಯಸ್ಸು, ಲಿಂಗ ಭೇದವಿಲ್ಲದೆ ಅಂಗಾಂಗ ಮತ್ತು ಅಂಗಾಂಶಗಳನ್ನು ದಾನ ಮಾಡಬಹುದು.
- ಮೆದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿಯು ಕಾನೂನು ಬದ್ಧವಾಗಿ ಅಂಗಾಂಗ ಮತ್ತು ಅಂಗಾಂಶಗಳನ್ನು ದಾನ ಮಾಡಬಹುದು.

ಈ QR ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಂಗಾಂಗ ದಾನದ ಪ್ರತಿಜ್ಞೆ ಮಾಡಿ.
ನಿಮ್ಮ ಜೀವಿತದ ನಂತರ ಇನ್ನೊಬ್ಬರ ಜೀವ ಉಳಿಸಲು ನೆರವಾಗಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಜೀವಸಾರ್ಥಕತೆ / SOTTO
ಆರೋಗ್ಯಸೌಧ, 6ನೇ ಮಹಡಿ, ಬೆಂಗಳೂರು - 560023,
ಮೊ: +91 9845006768, ಈ ಮೇಲ್ : jeevasarthakathe@gmail.com,
ವೆಬ್‌ಸೈಟ್ : www.jeevasarthakathe.karnataka.gov.in

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು ರವರ ಜೊತೆ
ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಸಚಿವರು ಇಲಾಖಾ ಕಾರ್ಯಕ್ರಮ ಕುರಿತು ಚರ್ಚಿಸುತ್ತಿರುವುದು

ಒಂದು ದೇಹ ಎಂಟು ಜೀವ, ಅಂಗಾಂಗ ದಾನ ಮಾಡಿ ಜೀವ ಉಳಿಸಿ, ಮರಣದ ನಂತರವೂ ಇನ್ನೊಬ್ಬರ ಜೀವಕ್ಕೆ ಬೆಳಕಾಗಿ

"ದೇಶದ ಕಾಡು, ವನ್ಯಜೀವಿ, ನದಿಗಳು ಒಳಗೊಂಡಂತೆ ಪರಿಸರ ಉಳಿಸಿ ಬೆಳೆಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | ನಿಮ್ಮ ಆರೋಗ್ಯ, ನಮ್ಮ ಬದ್ಧತೆ.

ಬಿಬಿಎಂಪಿ ಬಜೆಟ್ 2024-25

ಒಟ್ಟು ಸ್ವೀಕೃತಿ ₹12,372 ಕೋಟಿ
₹11,886 (2023-24)

ಒಟ್ಟು ವೆಚ್ಚ ₹12,369 ಕೋಟಿ
₹11,883 (2023-24)

ಉಳಿತಾಯ ₹2.17 ಕೋಟಿ
₹2.94 (2023-24)

ಆದಾಯ (ಕೋಟಿಗಳಲ್ಲಿ) ಒಟ್ಟು ₹12,371.63 ಕೋಟಿ

- ₹2.13 ಪ್ರಾರಂಭಿಕ ಶಿಲ್ಕು
- ₹4,470 ತೆರಿಗೆ ಮತ್ತು ಕರ
- ₹3,097.91 ತೆರಿಗೆಯೇತರ ಆದಾಯ
- ₹488.01 ಕೇಂದ್ರ ಸರ್ಕಾರದ ಅನುದಾನ
- ₹3,589.58 ರಾಜ್ಯ ಸರ್ಕಾರದ ಅನುದಾನ
- ₹724 ಅಸಾಧಾರಣ ಆದಾಯ

ವೆಚ್ಚ (ಕೋಟಿಗಳಲ್ಲಿ) ಒಟ್ಟು ₹12,369.46 ಕೋಟಿ

- ₹1,607.42 ಸಿಬ್ಬಂದಿ ವೆಚ್ಚ
- ₹389.88 ಆಡಳಿತ ವೆಚ್ಚ
- ₹912.99 ಕಾರ್ಯಕ್ರಮ ವೆಚ್ಚ
- ₹2,271.07 ಕಾರ್ಯಾಚರಣೆ ಮತ್ತು ನಿರ್ವಹಣೆ
- ₹6,661.10 ಸಾರ್ವಜನಿಕ ಅಭಿವೃದ್ಧಿ ಕಾಮಗಾರಿ
- ₹527 ಠೇವಣಿ ಮತ್ತು ಕರ ಮರುಪಾವತಿ

ಅನುದಾನ ಹಂಚಿಕೆ ವಿವರ

ಇಲಾಖೆ	ಅಂದಾಜು ವೆಚ್ಚ (₹ ಕೋಟಿಗಳಲ್ಲಿ)
ಸಾರ್ವಜನಿಕ ಕಾಮಗಾರಿ	7,280.93
ಘನತ್ಯಾಜ್ಯ ನಿರ್ವಹಣೆ	1,952.19
ಸಮಾಜ ಕಲ್ಯಾಣ	829.63
ಸಾಮಾನ್ಯ ಆಡಳಿತ	678.60
ಕಂದಾಯ	559.18
ಸಾರ್ವಜನಿಕ ಆರೋಗ್ಯ– ಸಾಮಾನ್ಯ	388.98
ತೋಟಗಾರಿಕೆ	248.08
ಸಾರ್ವಜನಿಕ ಶಿಕ್ಷಣ	214.82
ಸಾರ್ವಜನಿಕ ಆರೋಗ್ಯ– ವೈದ್ಯಕೀಯ	94.28
ನಗರ ಯೋಜನೆ	62.30
ನಗರ ಅರಣ್ಯೀಕರಣ	47.78
ಕೌನ್ಸಿಲ್	12.68

ನಿರೀಕ್ಷಿತ ಒಟ್ಟು ಸಂಗ್ರಹದಲ್ಲಿ ಶೇ 50ರಷ್ಟು ಆಸ್ತಿ ತೆರಿಗೆ ಮೇಲೆ ಅವಲಂಬಿತ

‘ಬ್ರ್ಯಾಂಡ್’ ಛಾಯೆ, ಆದಾಯವೇ ಸವಾಲು

• ಆರ್. ಮಂಜುನಾಥ್

ಬೆಂಗಳೂರು: ಸ್ವಂತ ಸಂಪನ್ಮೂಲಗಳ ಕ್ರೋಡೀಕರಣದತ್ತ ಗುರಿ ನೆಟ್ಟಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯೇ ಬಜೆಟ್‌ನಲ್ಲಿ ಪ್ರತಿಫಲನವಾಗುವಂತೆ ನೋಡಿಕೊಂಡಿದೆ. ಆದರೆ, ಹೆಚ್ಚುವರಿಯಾಗಿ ನಿರೀಕ್ಷಿಸಿರುವ ಆದಾಯ ಖಜಾನೆ ತುಂಬದಿದ್ದರೆ ಕಾಮಗಾರಿಗಳ ಬೆನ್ನೆಲುಬೇ ಮುರಿದಂತಾಗುತ್ತದೆ.

ಬೃಹತ್ ಹಾಗೂ ಉತ್ತಮ ಯೋಜನೆಗಳ ಉದ್ದದ ಪಟ್ಟಿಯಂತಿರುವ ಬಜೆಟ್, ಮೇಲ್ನೋಟಕ್ಕೆ ಎಲ್ಲ ಸೌಲಭ್ಯಗಳೂ ಸಿಕ್ಕಂತಾಯಿತು ಎಂದು ಎನ್ನಿಸುತ್ತದೆ. ಆದರೆ, ಅವುಗಳ ಆರಂಭಕ್ಕಷ್ಟೇ ಬಜೆಟ್‌ನಲ್ಲಿ ಅನುದಾನವಿದ್ದು, ಎಲ್ಲ ಪೂರ್ಣಗೊಳ್ಳಲು ವರ್ಷಗಳೇ ಬೇಕಾಗುತ್ತವೆ ಎಂಬುದೂ ಸ್ಪಷ್ಟವಾಗಿದೆ.

ಅರ್ಥಶಾಸ್ತ್ರದಲ್ಲಿ ಚಾಣಕ್ಯ ಹೇಳಿರುವ ಮಾತುಗಳನ್ನು ಉಲ್ಲೇಖಿಸಿ ಖಜಾನೆ ತುಂಬಿಕೊಳ್ಳುವ ಮಾತನ್ನಾಡಿರುವ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಎಚ್. ಕಲಕೇರಿ ಅವರು, ಸುಂಕ ವಂಚನೆ ಬಗೆಗಿನ ಬಸವಣ್ಣನವರ ವಚನವನ್ನೂ ಪ್ರಸ್ತಾಪಿಸಿದ್ದಾರೆ.

ಖಜಾನೆ ತುಂಬಬೇಕೆಂದರೆ ನಾಗರಿಕನಿಗೆ ಬೇಕಾದ ಸವಲತ್ತುಗಳು ಅವನ ಅಗತ್ಯಾನುಸಾರ ಸಿಗಬೇಕು. ಆಗ, ಪ್ರಸ್ತಾಪಿಸುವ ತೆರಿಗೆಗಳನ್ನು ಪಾವತಿಸಲು ಆತ ಸಿದ್ಧನಿರುತ್ತಾನೆ. ರಸ್ತೆ, ಚರಂಡಿ, ಕುಡಿಯಲು ನೀರು ಕೊಡದೆ, ಸುರಕ್ಷಿತ ರಸ್ತೆ, ಸುಗಮ ಸಂಚಾರ, ಮಳೆಗಾಲದಲ್ಲಿ ಸಂಕಷ್ಟವಿಲ್ಲದ ಜೀವನ ನೀಡುವ ಭರವಸೆಗಳು ವರ್ಷಗಟ್ಟಲೆ ಕನಸಾಗಿಯೇ ಉಳಿದರೆ ‘ಹೈಟೆಕ್’ ತೆರಿಗೆಯನ್ನು ನಿರೀಕ್ಷಿಸುವುದು ತರವಲ್ಲ. ಆದರೂ, ತೆರಿಗೆ ನೀಡದವ ಭಂಡ/ ವಂಚಕ ಎಂದು ಪರೋಕ್ಷವಾಗಿ ಬಿಬಿಎಂಪಿ ಬಜೆಟ್‌ನಲ್ಲಿ ಜರಿಯಲಾಗಿದೆ.

ಬಜೆಟ್‌ನಲ್ಲಿ ನಿರೀಕ್ಷಿಸಲಾಗಿರುವ ಒಟ್ಟು ಸಂಗ್ರಹದಲ್ಲಿ ಶೇ 50ರಷ್ಟು ಆಸ್ತಿ ತೆರಿಗೆ ಮೇಲೆಯೇ ಅವಲಂಬಿತವಾಗಿದೆ. ಕಳೆದ ವರ್ಷಕ್ಕಿಂತ ₹1,500 ಕೋಟಿ ಹೆಚ್ಚು ಆಸ್ತಿ ತೆರಿಗೆ ಸಂಗ್ರಹಿಸುವುದಾಗಿ ಹೇಳಿರುವುದು ಹೊಸ ಆಸ್ತಿ ತೆರಿಗೆಯಿಂದ ಜನರ ಮೇಲಾಗುವ ಹೊರೆಯನ್ನು ಸೂಚಿಸುತ್ತದೆ. 751 ಚದರ ಕಿ.ಮೀ. ವ್ಯಾಪ್ತಿಯ ಬಿಬಿಎಂಪಿ ಪ್ರದೇಶಗಳು ಒಂದಕ್ಕಿಂತ ಒಂದು ವಿಭಿನ್ನ. ಒಂದೆಡೆ ಬೇಕಾದ ಸೌಲಭ್ಯ, ಇನ್ನೊಂದುಕಡೆ ಅನಗತ್ಯ. ಆದರೂ, ಸೌಂದರ್ಯೀಕರಣ, ಪ್ರತಿಷ್ಠೆಗಳಿಗಾಗಿ ಕೇಂದ್ರೀಕೃತ ಯೋಜನೆಗಳನ್ನೇ ಬಜೆಟ್‌ನಲ್ಲಿ ಹೆಚ್ಚು ಪ್ರಸ್ತಾಪಿಸಲಾಗಿದೆ.

ಹೆಚ್ಚುವರಿಯಾಗಿ ಫ್ಲ್ಯಾಟ್‌ಗಳನ್ನು ನಿರ್ಮಿಸಿಕೊಳ್ಳಲು ಸರ್ಕಾರಿ ಬೆಲೆಯಲ್ಲಿ ಪ್ರೀಮಿಯಂ ಎಫ್‌ಎಆರ್ ಮಾರಾಟದಿಂದ ₹1 ಸಾವಿರ ಕೋಟಿ ಸಂಗ್ರಹ ನಿರೀಕ್ಷಿಸಲಾಗಿದೆ. ನಗರದ ಸೌಂದರ್ಯ ಹಾಳು ಮಾಡುವ ಜಾಹೀರಾತುಗಳಿಗೆ ಮತ್ತಷ್ಟು ಅವಕಾಶ ನೀಡಿ ₹500 ಕೋಟಿ ಸಂಗ್ರಹಿಸುವ ಗುರಿಯೂ ಇದೆ. ಹೆಚ್ಚುವರಿಯಾಗಿ ಸುಮಾರು ₹3,750 ಕೋಟಿ ಸಂಗ್ರಹಿಸುವ ನಿರೀಕ್ಷೆ ಹೊಂದಲಾಗಿದೆ. 'ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಗೆ ನಾಗರಿಕರು 70 ಸಾವಿರ ಸಲಹೆಗಳನ್ನು ನೀಡಿದ್ದರು. ಬಿ.ಎಸ್. ಪಾಟೀಲ ಸಮಿತಿಯು ಈ ಪರಿಕಲ್ಪನೆಯನ್ನು ಪರಿಗಣಿಸಿ, ಪರಿಷ್ಕರಿಸಿ ನೀಡುವ ನಿರ್ದೇಶನದಂತೆ ಮುಂದಿನ ತೀರ್ಮಾನ ಕೈಗೊಳ್ಳಲಾಗುತ್ತದೆ’ ಎಂದು ಬಜೆಟ್‌ನಲ್ಲೇ ಹೇಳಲಾಗಿದೆ. ಆದರೂ, ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಲ್ಲೇ ಶೇ 70ರಷ್ಟು ಯೋಜನೆಗಳನ್ನು ಪ್ರಕಟಿಸಲಾಗಿದೆ.

ಸುರಂಗ ಮಾರ್ಗ, ಸ್ಕೈ–ಡೆಕ್, ಸಂಚಾರಯುಕ್ತ ರಸ್ತೆಗಳ ಸಾವಿರಾರು ಕೋಟಿ ವೆಚ್ಚದ ಯೋಜನೆಗಳನ್ನು ಪ್ರಕಟಿಸಿ, ಅವುಗಳಿಗೆ ಪ್ರಾರಂಭಿಕ ಹಂತದ ನೂರಾರು ಕೋಟಿಯನ್ನಷ್ಟೇ ‘ರೋಮಾಂಚನ ಬೆಂಗಳೂರು’ ಅಡಿಯಲ್ಲಿ ಪ್ರಕಟಿಸಲಾಗಿದೆ. ನಗರದಲ್ಲಿ ನಡೆಯುತ್ತಿರುವ ಐದು ಮೇಲ್ಸೇತುವೆಗಳಿಗೆ ಹಣ ಬಿಡುಗಡೆ ಮಾಡಲು ಸಾಧ್ಯವಾಗದೆ ಕಾಮಗಾರಿಗಳು ಸ್ಥಗಿತವಾಗಿರುವುದು ಈ ಬೃಹತ್ ಯೋಜನೆಗಳ ಭವಿಷ್ಯವನ್ನು ಪ್ರಶ್ನಿಸುವಂತಾಗಿದೆ.

‘ನಮ್ಮ ತೆರಿಗೆ ಬಿಬಿಎಂಪಿ ಹಕ್ಕು’ ಎಂಬುದು ಬಜೆಟ್‌ನಲ್ಲಿ ಸ್ಪಷ್ಟವಾಗಿದ್ದು, ನಾಗರಿಕರ ತೆರಿಗೆಯ ಮೇಲೆಯೇ ಎಲ್ಲವೂ ಅವಲಂಬಿತವಾಗಿದೆ. ಉಪ ಮುಖ್ಯಮಂತ್ರಿಯವರ ವಿವೇಚನಾ ಕೋಟಾದ ₹100 ಕೋಟಿಯೂ ಇದೇ ತೆರಿಗೆಯಿಂದಲೇ ಭರಿಸಬೇಕಾಗಿದೆ. ಹೀಗಾಗಿ, ನಾಗರಿಕರ ತೆರಿಗೆ, ವಾಣಿಜ್ಯ ಚಟುವಟಿಕೆಗಳ ಸುಂಕದಿಂದ ಬಿಬಿಎಂಪಿ ಖಜಾನೆ ನಿರೀಕ್ಷೆಯಂತೆ ಭರ್ತಿಯಾದರೆ ಮಾತ್ರ ಪ್ರಕಟಿಸಿರುವ ಯೋಜನೆಗಳು ಆರಂಭವಾಗುತ್ತವೆ.



ಬಿಬಿಎಂಪಿ ಆಯವ್ಯಯ ಮಂಡನೆಗೂ ಮುನ್ನ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಎಚ್. ಕಲಕೇರಿ, ಆಡಳಿತಗಾರ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಬಜೆಟ್ ಪ್ರತಿ ಪ್ರದರ್ಶಿಸಿದರು

16 ಸಾವಿರ ಪೌರಕಾರ್ಮಿಕರ ನೇಮಕಕ್ಕೆ ಕ್ರಮ

16 ಸಾವಿರ ಪೌರ ಕಾರ್ಮಿಕರನ್ನು ನೇರ ಪಾವತಿ ಅಡಿಯಲ್ಲಿ ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.

ಅಧಿಕಾರಿಗಳು ಮತ್ತು ಸಿಬ್ಬಂದಿ ಕೊರತೆಯನ್ನು ನೀಗಿಸಲು ವಿವಿಧ ಇಲಾಖೆಗಳಿಂದ ಎರವಲು ಸೇವೆ ಪಡೆಯಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮ ಪಾಲಿಸಲಾಗುವುದು. ಸಹಾಯಕ ಎಂಜಿನಿಯರ್ ಮತ್ತು ಕಿರಿಯ ಎಂಜಿನಿಯರ್ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ತಿಳಿಸಲಾಗಿದೆ.

ಪಾರದರ್ಶಕ ವರ್ಗಾವಣೆ ನೀತಿ ಜಾರಿಗೆ ತರಲಾಗುವುದು. ಆರ್.ವಿ. ದೇಶಪಾಂಡೆ ನೇತೃತ್ವದ ಆಡಳಿತ ಸುಧಾರಣಾ ಆಯೋಗದ ವರದಿ ಬಂದ ಬಳಿಕ ಆಡಳಿತ ಸುಧಾರಣೆಗೆ ಕ್ರಮಗಳನ್ನು ಕೈಗೊಳ್ಳಲಾಗುವುದು.

ಬಿಬಿಎಂಪಿ ಪಿಂಚಣಿದಾರರ ಆರೋಗ್ಯ ಕಲ್ಯಾಣ ನಿಧಿ ಹೆಸರಲ್ಲಿ ಸೊಸೈಟಿ ಸ್ಥಾಪಿಸಿ ಕಾರ್ಪಸ್ ಫಂಡ್ ಬೆಳೆಸಲು ಉದ್ದೇಶಿಸಲಾಗಿದೆ.

ಬಿಬಿಎಂಪಿ ಅಧಿಕಾರಿಗಳು, ಸಿಬ್ಬಂದಿಯ ಜ್ಞಾನ ಹೆಚ್ಚಿಸಲು ಸುಸಜ್ಜಿತ ಗ್ರಂಥಾಲಯ ಸ್ಥಾಪನೆ, ತರಬೇತಿ ಘಟಕ ಸ್ಥಾಪನೆ ಮಾಡಲಾಗುವುದು. ಅಧಿಕಾರಿ, ಸಿಬ್ಬಂದಿಗೆ ಈ ವರ್ಷವೂ ₹2 ಲಕ್ಷ ನಗದು ಒಳಗೊಂಡ ನಾಡಪ್ರಭು ಕೆಂಪೇಗೌಡ ಆವಿಷ್ಕಾರ ಪ್ರಶಸ್ತಿ ನೀಡಲಾಗುವುದು.

ಲೆಕ್ಕಪತ್ರ, ಆಯವ್ಯಯ ಘಟಕ

ಪಾಲಿಕೆಯ ದೈನಂದಿನ ಲೆಕ್ಕಪತ್ರ ನಿರ್ವಹಣೆ ಜೊತೆಗೆ ಆಯವ್ಯಯ ತಯಾರಿಕೆ, ತೆರಿಗೆ ಸಂಬಂಧಿತ ಶಾಸನಬದ್ಧ ವಿಷಯಗಳನ್ನು ನಿರ್ವಹಿಸಲು, ಇತರೆ ಆರ್ಥಿಕ ಸಿಧಾರಣೆ ಕ್ರಮಗಳ ಬಗ್ಗೆ ಸಲಹೆಗಳನ್ನು ನೀಡಲು ನುರಿತ ಚಾರ್ಟೆಡ್ ಅಕೌಂಟೆಂಟ್ ನೇತೃತ್ವದಲ್ಲಿ ಪಾಲಿಕೆಯ ಲೆಕ್ಕಪತ್ರ ಮತ್ತು ಆಯವ್ಯಯ ಘಟಕವನ್ನು ಸ್ಥಾಪಿಸಲಾಗುವುದು.

ಬೆಂಗಳೂರು ಹಬ್ಬಕ್ಕೂ ಖಾಸಗಿ ಸಹಭಾಗಿತ್ವಕ್ಕೆ ಮಣೆ!

ಬೆಂಗಳೂರು ಹಬ್ಬ, ಡಿಜಿಟಲ್ ಬೆಂಗಳೂರು ಹಾಗೂ ಆಟದ ಮೈದಾನದ ತಳಭಾಗದಲ್ಲಿ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಸಾರ್ವಜನಿಕ– ಖಾಸಗಿ ಸಹಭಾಗಿತ್ವ(ಪಿಪಿಪಿ) ಮಾದರಿಗೆ ಬಿಬಿಎಂಪಿ ಮಣೆ ಹಾಕಿದೆ.

ಆದಾಯ ಹಂಚಿಕೆ ಸೂತ್ರದಡಿ ನಗರದಲ್ಲಿರುವ 13 ಸಾವಿರ ಕಿ.ಮೀ ಉದ್ದ ರಸ್ತೆಗಳಲ್ಲಿ ‘ನಿರ್ದಿಷ್ಟ ಒಎಫ್‌ಸಿ ಕೇಬಲ್ ಡಕ್ಟ್ ಪಥ’ಗಳನ್ನು ಖಾಸಗಿಯವರು ನಿರ್ಮಿಸಿ, ನಿರ್ವಹಿಸಲಿದ್ದಾರೆ. ಬಿಬಿಎಂಪಿಗೆ ಒಂದಷ್ಟು ಶುಲ್ಕ ನೀಡಲಿದ್ದಾರೆ. ಆಟದ ಮೈದಾನದ ತಳಭಾಗದಲ್ಲಿನ ಪಾರ್ಕಿಂಗ್ ಅನ್ನು ಖಾಸಗಿಯವರು ನಿರ್ಮಿಸಿ, ಶುಲ್ಕ ವಸೂಲಿ ಮಾಡಲಿದ್ದಾರೆ. ಇನ್ನು ನಗರದ ಬ್ರ್ಯಾಂಡ್ ‘ಬೆಂಗಳೂರು ಹಬ್ಬ’ವನ್ನು ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ನೀರಿನ ಭದ್ರತೆ ಮರೆತ ಬಿಬಿಎಂಪಿ

‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯ 8ನೇ ವಿಭಾಗ ‘ನೀರಿನ ಭದ್ರತೆ ಬೆಂಗಳೂರು’ ಅನ್ನು ಬಿಬಿಎಂಪಿ ಮರೆತುಹೋಗಿದೆ. ಅಂತರ್ಜಲ ವೃದ್ಧಿ, ಇಂಗು ಗುಂಡಿ, ಕೆರೆಗಳ ಅಭಿವೃದ್ಧಿ, ನೀರಿನ ಸ್ವಾವಲಂಬನೆಯಂತಹ ಉಪಕ್ರಮಗಳಿರುವ ಈ ವಿಭಾಗದಿಂದ ಯಾವುದೇ ರೀತಿಯ ಯೋಜನೆಗಳನ್ನು ಪ್ರಕಟಿಸಲಾಗಿಲ್ಲ. ಕುಡಿಯುವ ನೀರಿನ ಕೊರತೆಯಿಂದ ಸಂಕಷ್ಟದಲ್ಲಿರುವ ನಗರದ ಜನತೆಗೆ ಮುಂದಿನ ವರ್ಷಗಳಲ್ಲಿ ನೀರಿನ ಭರವಸೆ ನೀಡುವ ಕೆಲಸವೂ ಆಗಿಲ್ಲ.

ಬಿಬಿಎಂಪಿಯ 2024–25ನೇ ಸಾಲಿನ ಬಜೆಟ್ ಮಂಡಿಸಿದ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಕಲಕೇರಿ

ಸಿದ್ದರಾಮಯ್ಯ ‘ಸಮಾಜವಾದಿ ಸಿದ್ಧಾಂತದ ದ್ಯೋತಕ’

ಬಿಬಿಎಂಪಿ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಎರಡು ಬಾರಿ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮೂರು ಬಾರಿ ಹೊಗಳಲಾಗಿದೆ. ‘ಮುಖ್ಯಮಂತ್ರಿಯವರ ದಾರ್ಶನಿಕ ಮುಂದಾಳತ್ವ’ ಎಂದು ಆರಂಭದಲ್ಲಿ ಹೇಳಲಾಗಿದ್ದು, ಇಂದಿರಾ ಕ್ಯಾಂಟೀನ್ ವಿಷಯ ಪ್ರಸ್ತಾಪಿಸುವಾಗ ‘ನಮ್ಮ ಭಾರತ ಸಂವಿಧಾನದ ಸಮಾಜವಾದಿ ಸಿದ್ಧಾಂತದ ದ್ಯೋತಕವಾಗಿರುವ ರಾಜ್ಯದ ಜನಪ್ರಿಯ ಮುಖ್ಯಮಂತ್ರಿ’ ಎಂದು ಬಣ್ಣಿಸಲಾಗಿದೆ.

ಡಿ.ಕೆ. ಶಿವಕುಮಾರ್ ದೂರದೃಷ್ಟಿಗೆ ಗಾಂಧೀಜಿ, ಲಿಂಕನ್ ಮಾತು ಜೋಡಣೆ

ಬಜೆಟ್ ಭಾಷಣದ ಮೊದಲ ಪುಟದಲ್ಲಿ ಉಪ ಮುಖ್ಯಮಂತ್ರಿಯವರ ಮಾರ್ಗದರ್ಶನ ಎಂದು ಹೇಳಲಾಗಿದೆ. ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯನ್ನು ಪ್ರಸ್ತಾಪಿಸುವಾಗ, ‘ಪ್ರಜಾಪ್ರಭುತ್ವವು ಜನರ, ಜನರಿಂದ, ಜನರಿಗಾಗಿ ಇರುವ ಸರ್ಕಾರ’ ಎಂಬ ಅಮೆರಿಕದ ಮಾಜಿ ಅಧ್ಯಕ್ಷ ಅಬ್ರಹಾಂ ಲಿಂಕನ್ ಅವರ ಮಾತು ಮತ್ತು ‘ಭಾರತದ ಸಂವಿಧಾನದ ರಾಜ್ಯ ನೀತಿಯ ನಿರ್ದೇಶಕ ತತ್ವಗಳ ಅಡಿಯಲ್ಲಿ ಜನಾಭಿಪ್ರಾಯಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಬೇಕೆನ್ನುವ’ ಮಹಾತ್ಮ ಗಾಂಧೀಜಿ ಆಶಯಗಳನ್ನು ಶಿವಕುಮಾರ್ ಅವರ ನಡೆಯನ್ನು ಬಣ್ಣಿಸಲು ಬಳಸಲಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ನಿವಾಸಿಗಳಿಗೆ ಉತ್ಕೃಷ್ಟ ದರ್ಜೆಯ ಸೌಲಭ್ಯ ಮತ್ತು ಅನುಕೂಲ ಕಲ್ಪಿಸುವ ದೃಷ್ಟಿಯಿಂದ ‘ನಾಗರಿಕರ ಧ್ವನಿ ಸರ್ಕಾರದ ಧ್ವನಿ’ ಎಂಬ ಘೋಷವಾಕ್ಯ ನೀಡಿದ್ದಾರೆ ಎಂದು ಹೊಗಳಲಾಗಿದೆ.

ಸಂವಿಧಾನ ಪೀಠಿಕೆ

ಬಜೆಟ್ ಭಾಷಣ ಪುಸ್ತಕದ ಒಳಮುಖಪುಟದಲ್ಲಿ ಸಂವಿಧಾನದ ಪೀಠಿಕೆ ಪ್ರಕಟಿಸಲಾಗಿದೆ.

ಚಾಣಕ್ಯನ ಮಾತು

ಅರ್ಥಶಾಸ್ತ್ರದಲ್ಲಿ ಚಾಣಕ್ಯ ಹೇಳಿದಂತೆ, ‘ರಾಜ್ಯದ ಖಜಾನೆಯು ಆಡಳಿತ ಯಂತ್ರದ ಬೆನ್ನುಲುಬು’ ಎಂದು ಹೇಳಿದ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಕಲಕೇರಿ, ‘ಕಾನೂನಿನ ಪ್ರಕಾರ ಪಾವತಿಸಬೇಕಾದ ಕಂದಾಯವನ್ನು ಪಾವತಿಸದೇ ಇರುವುದು ನಮ್ಮ ನಾಗರಿಕತೆಯ ಹಳೆಯ ರೂಢಿ’ ಎಂದು ಕಂದಾಯ ವಿಭಾಗದ ಮಾಹಿತಿ ಹೇಳುವ ಪ್ರಾರಂಭದಲ್ಲಿ ನುಡಿದರು.

ಬಸವಣ್ಣನ ಸುಂಕ

ಮುಂದುವರಿದು, ‘ಭಂಡವ ತುಂಬಿದ ಬಳಿಕ, ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು, ಕಳ್ಳ ನಾಣ್ಯ ಸಲುಗೆಗೆ ಸಲ್ಲದು, ಕಳ್ಳ ನಾಣ್ಯ ಸಲಲೀಯರಯ್ಯಾ, ಭಕ್ತಿಯೆಂಬ ಭಂಡಕ್ಕೆ ಜಂಗಮವೆ ಸುಂಕಿಗ, ಕೂಡಲ ಸಂಗಮದೇವಾ’ ಎಂದು ಸುಂಕದ ವಂಚನೆ ಕುರಿತ ಬಸವಣ್ಣನವರ ವಚನ ಹೇಳಿ, ಇದು ಇಂದಿಗೂ ಪ್ರಸ್ತುತವೆನಿಸುತ್ತದೆ ಎಂದರು.

60 ನಿಮಿಷದ ಓದು

ಗಂಟಲಿನ ಸಮಸ್ಯೆಯಿಂದ ಸಾಕಷ್ಟು ಕೆಮ್ಮಿ, ಆರು ಬಾರಿ ನೀರು ಕುಡಿದು 106 ಅಂಶಗಳ 64 ಪುಟಗಳ ಬಜೆಟ್ ಭಾಷಣವನ್ನು 60 ನಿಮಿಷದಲ್ಲಿ ಶಿವಾನಂದ ಓದಿ ಮುಗಿಸಿದರು.

ಸಾಲು ಸಾಲು ಅಭಿವೃದ್ಧಿ ಯೋಜನೆಗಳು

ಬಿಬಿಎಂಪಿಯಲ್ಲಿ ಗುರುವಾರ ಮಂಡನೆಯಾದ ಬಜೆಟ್‌ನಲ್ಲಿ ‘ಬ್ರ್ಯಾಂಡ್ ಬೆಂಗಳೂರು’ ಸಿಂಹಪಾಲು ಪಡೆದಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪರಿಕಲ್ಪನೆ ಬಜೆಟ್ ರೂಪ ಪಡೆದಿದೆ. ‘ಬ್ರ್ಯಾಂಡ್ ಬೆಂಗಳೂರು’ ಶೀರ್ಷಿಕೆಯಡಿಯೇ ಬಹುತೇಕ ಯೋಜನೆಗಳನ್ನು ಪ್ರಕಟಿಸಲಾಗಿದೆ.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಎಚ್. ಕಲಕೇರಿ ಅವರು 2024–25ನೇ ಸಾಲಿನ ₹2.17 ಉಳಿತಾಯ ಬಜೆಟ್ ಮಂಡಿಸಿದರು.

ಸ್ವಚ್ಛ ಬೆಂಗಳೂರು

ತ್ಯಾಜ್ಯ ಸಂಸ್ಕರಿಸಲು 4 ದಿಕ್ಕುಗಳಲ್ಲಿ 50ರಿಂದ 100 ಎಕರೆಗಳಷ್ಟು ಜಮೀನುಗಳನ್ನು ಗುರುತಿಸಲಾಗಿದ್ದು, ಖರೀದಿಗಾಗಿ ₹ 100 ಕೋಟಿ ಮೀಸಲಿರಿಸಲಾಗಿದೆ.

ಮಹಿಳೆಯರಿಗಾಗಿ 100 ‘ಶಿ ಟಾಯ್ಲೆಟ್’ಗಳನ್ನು ನಿರ್ಮಿಸಲು 10 ಕೋಟಿ ಒದಗಿಸಲಾಗಿದೆ.

ಘನತ್ಯಾಜ್ಯ ಸಂಗ್ರಹಣೆ, ವಿಂಗಡಣೆ, ಭೂಭರ್ತಿ ಪ್ರದೇಶ ಅಭಿವೃದ್ಧಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ನಿರ್ವಹಣೆಗಳಿಗಾಗಿ ಬಿಎಸ್‌ಡಬ್ಲ್ಯುಎಂಎಲ್‌ಗೆ ₹1,000 ಕೋಟಿ ಪಾಲಿಕೆ ಮೀಸಲಿಡಲಾಗಿದೆ.

ಪೌರಕಾರ್ಮಿಕರಿಗೆ ‘ಶರಣೆ ಸತ್ಯಕ್ಕ’ ಪ್ರಶಸ್ತಿ

ಪ್ರತಿ ವಲಯದಿಂದ ಒಬ್ಬರಂತೆ 8 ಪೌರಕಾರ್ಮಿಕರಿಗೆ ತಲಾ ₹50,000 ನಗದು ಒಳಗೊಂಡ ‘ಶರಣೆ ಸತ್ಯಕ್ಕ’ ಪ್ರಶಸ್ತಿಗಳನ್ನು ಪೌರಕಾರ್ಮಿಕರ ದಿನಾಚರಣೆಯಂದು ನೀಡಲು ನಿರ್ಧರಿಸಲಾಗಿದೆ.

ಹಸಿರು ಬೆಂಗಳೂರು

ಬೆಂಗಳೂರಿನ ಮೊಟ್ಟಮೊದಲ ಹವಾಮಾನ ಕ್ರಿಯೆ ಮತ್ತು ಸ್ಥಿತಿ-ಸ್ಥಾಪಕತ್ವ ಯೋಜನೆ ಪ್ರಾರಂಭಗೊಂಡಿದೆ. ಪಾಲಿಕೆಯು ಇತರ ಮಧ್ಯಸ್ಥಗಾರ ಏಜೆನ್ಸಿಗಳ ಮೂಲಕ ಹವಾಮಾನ ಕ್ರಿಯಾ ಕೋಶ (ಕ್ಲೈಮೆಟ್ ಆ್ಯಕ್ಷನ್ ಸೆಲ್) ಮೂಲಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ₹ 10 ಕೋಟಿ ಅನುದಾನ ಮೀಸಲಿರಿಸಲಾಗಿದೆ.

2 ಲಕ್ಷ ಸಸಿಗಳನ್ನು ನೆಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು, ಅದಕ್ಕಾಗಿ 6 ಹೈಟೆಕ್ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸಲಾಗುತ್ತಿದೆ. ಹೆಚ್ಚಿನ ಸಸಿಗಳ ಬೇಡಿಕೆ ಪೂರೈಸಲು 2 ಹೊಸ ಹೈಟೆಕ್ ಸಸ್ಯಕ್ಷೇತ್ರಗಳನ್ನು ದಾಸರಹಳ್ಳಿ ಮತ್ತು ಯಲಹಂಕದಲ್ಲಿ ಸ್ಥಾಪಿಸಲು ₹14 ಕೋಟಿ ಮೀಸಲಿರಿಸಲಾಗಿದೆ. ಪಾಲಿಕೆ ವ್ಯಾಪ್ತಿಯ ಹೊಸ ಬಡಾವಣೆಗಳಲ್ಲಿ ಉದ್ಯಾನಗಳ ಅಭಿವೃದ್ಧಿ, ನಿರ್ವಹಣೆಗಾಗಿ ₹35 ಕೋಟಿ ಒದಗಿಸಲಾಗಿದೆ.

ಟೆಕ್‌ಥಾನ್

2024ರ ಜೂನ್ 5ರ ಹೊತ್ತಿಗೆ ‘ಟೆಕ್‌ಥಾನ್’ ಆಯೋಜಿಸಿ, ಸ್ಮಾರ್ಟ್ ಆ್ಯಪ್, ನಾವೀನ್ಯಕಾರರು ಮತ್ತು ಪ್ರಶಸ್ತಿ ವಿಜೇತರ ಮೂಲಕ ಹವಾಮಾನ ಸುಸ್ಥಿರತೆಯ ಪರಿಹಾರಗಳನ್ನು ಪ್ರಸ್ತುತಪಡಿಸಲು, ಅನುಷ್ಠಾನ ಮಾಡಲು ಅವಕಾಶ ನೀಡಲಾಗುತ್ತಿದೆ.

ವನ್ಯಜೀವಿ ರಕ್ಷಣೆಗಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ‘ಆರೈಕೆ ಕೇಂದ್ರ’ ಸ್ಥಾಪಿಸಲು ₹1 ಕೋಟಿ ಮೀಸಲಿರಿಸಲಾಗಿದೆ. ಕೆರೆಗಳ ಅಭಿವೃದ್ಧಿ ಮತ್ತು ಸುಧಾರಣೆ, ಕೆರೆಗಳ ಗಡಿಗೆ ತಂತಿಬೇಲಿ ಅಳವಡಿಕೆ ಇತ್ಯಾದಿ ಕಾರ್ಯಗಳಿಗಾಗಿ ₹ 35 ಕೋಟಿ ಒದಗಿಸಲಾಗಿದೆ.

ಟೆಕ್ ಬೆಂಗಳೂರು

ಬಳಕೆಯಲ್ಲಿರುವ ಸಾಫ್ಟ್‌ವೇರ್ ಮತ್ತು ಐಟಿ ಆ್ಯಪ್‌ಗಳನ್ನು ಪರಸ್ಪರ ಸಮನ್ವಯಗೊಳಿಸಿ, ನಾಗರಿಕ ಸೇವೆಗಳಿಗೆ ಸಮಗ್ರವಾದ ವ್ಯವಸ್ಥೆಯನ್ನು ರೂಪಿಸಲು ಈ ಸಾಲಿನಲ್ಲಿ ₹50 ಕೋಟಿ ಒದಗಿಸಲಾಗಿದೆ.

ಸೇವಾ ವೇದಿಕೆ

ಕೊರಿಯರ್ ಸೇವೆ, ಅಮೆಜಾನ್, ಫ್ಲಿಪ್‌ಕಾರ್ಟ್‌ಗಳ ಮಾದರಿಯಲ್ಲಿ, ನಾಗರಿಕರು ಪಾಲಿಕೆಯಿಂದ ಸೇವೆಗಾಗಿ ಸಲ್ಲಿಸಲಾಗಿರುವ ಅರ್ಜಿಗಳು ಯಾವ ಹಂತದಲ್ಲಿವೆ ಎಂಬುದರ ಮಾಹಿತಿ ನೀಡಲು ‘ಸೇವಾ ವೇದಿಕೆ’ ಅಭಿವೃದ್ಧಿಪಡಿಸಲಾಗುವುದು.

ವಾರ್ಡ್‌ಗಳಿಗೆ ₹450 ಕೋಟಿ

225 ವಾರ್ಡ್‌ಗಳ ನಿರ್ವಹಣೆಗಾಗಿ ಪ್ರತಿ ವಾರ್ಡ್‌ಗೆ ತಲಾ ₹75 ಲಕ್ಷ ಒದಗಿಸಲಾಗಿದೆ. ಚರಂಡಿ ಹೂಳೆತ್ತುವುದು, ನಿರ್ವಹಣೆಗೆ ತಲಾ ₹30 ಲಕ್ಷ, ರಸ್ತೆ ಗುಂಡಿ ಮುಚ್ಚಲು ತಲಾ ₹15 ಲಕ್ಷ, ಪಾದಚಾರಿ ಮಾರ್ಗ ನಿರ್ವಹಣೆಗೆ ತಲಾ ₹25 ಲಕ್ಷ, ಮಳೆಗಾಲದ ಕಂಟ್ರೋಲ್ ರೂಮ್ ನಿರ್ವಹಣೆಗೆ ತಲಾ ₹ 5 ಲಕ್ಷ ನೀಡಲಾಗುತ್ತದೆ. ಅಭಿವೃದ್ಧಿ ಕಾಮಗಾರಿಗಳಿಗಾಗಿ ಪ್ರತಿ ವಾರ್ಡ್‌ಗೆ ತಲಾ ₹1.25 ಕೋಟಿ ಒದಗಿಸಲಾಗುತ್ತದೆ. ಇದರ ಒಟ್ಟು ಮೊತ್ತ ₹ 450 ಕೋಟಿ ಆಗಲಿದೆ.

ಸುಗಮ ಸಂಚಾರ ಬೆಂಗಳೂರು

2 ಕಡೆ ಸುರಂಗ ಮಾರ್ಗ

ನಗರದ ಸಂಚಾರ ದಟ್ಟಣೆಗೆ ದೀರ್ಘ ಪರಿಹಾರ ಕಂಡುಕೊಳ್ಳಲು ‘ಬೆಂಗಳೂರು ನಗರ ಸಮಗ್ರ ಸಂಚಾರ ಯೋಜನೆ’ ತಯಾರಿಸಲಾಗುತ್ತಿದ್ದು, ಸುರಂಗ ಮಾರ್ಗ ಸೇರಿದಂತೆ ವಿವಿಧ ಮಾರ್ಗೋಪಾಯ ಡಿಪಿಆರ್ ಸಿದ್ಧಪಡಿಸಲು ಯೋಜನಾ ಸಮಾಲೋಚಕರಿಗೆ ಕಾರ್ಯಾದೇಶ ನೀಡಲಾಗಿದೆ. ಸಂಚಾರ ದಟ್ಟಣೆ ಇರುವ ಎರಡು ಕಡೆ ಸುರಂಗ ಮಾರ್ಗಗಳ ಪ್ರಾಯೋಗಿಕ ನಿರ್ಮಾಣಕ್ಕಾಗಿ ₹200 ಕೋಟಿ ‘ಸೀಡ್ ಮನಿ’ ಒದಗಿಸಲಾಗಿದೆ. ಪರಿಷ್ಕೃತ ಮಹಾನಕ್ಷೆ-2015ರಂತೆ (ಆರ್‌ಎಂಪಿ–2015) ಮುಖ್ಯ ರಸ್ತೆಗಳ ವಿಸ್ತರಣೆ ಮತ್ತು ಅಭಿವೃದ್ಧಿಗಾಗಿ ₹130 ಕೋಟಿ ಮೀಸಲಿರಿಸಿದೆ.

ಸಂಚಾರಯುಕ್ತ ರಸ್ತೆಗಳು

ರಾಜಕಾಲುವೆಯ ಇಕ್ಕೆಲಗಳಲ್ಲಿ ರಸ್ತೆ ಅಭಿವೃದ್ಧಿಗಾಗಿ ₹100 ಕೋಟಿ ಒದಗಿಸಲಾಗಿದೆ. ಸುಗಮ ಸಂಚಾರಕ್ಕಾಗಿ ವೈಟ್ ಟಾಪಿಂಗ್ ರಸ್ತೆಗಳಿಗಾಗಿ ₹300 ಕೋಟಿ ಇಟ್ಟಿದೆ.

ಸಂಯುಕ್ತ ಮೆಟ್ರೊ-ರಸ್ತೆ ಮೇಲ್ಸೇತುವೆ ಮಾರ್ಗ (ಡಬಲ್ ಡೆಕ್ಕರ್ ರಸ್ತೆ) ಗಳನ್ನು ನಿರ್ಮಿಸಲು ₹100 ಕೋಟಿ ಒದಗಿಸಲಾಗಿದೆ.

ಮೈದಾನದ ಅಡಿಯಲ್ಲಿ ಪಾರ್ಕಿಂಗ್

ಪಾಲಿಕೆಗೆ ಸೇರಿದ ಆಟದ ಮೈದಾನದ ತಳಭಾಗದಲ್ಲಿ (ಅಂಡರ್‌ಗ್ರೌಂಡ್) ವಾಹನಗಳ ನಿಲುಗಡೆ ಸೌಲಭ್ಯ ಒದಗಿಸಲು ₹5 ಕೋಟಿ ಮೀಸಲಿರಿಸಲಾಗಿದೆ.

ಆರೋಗ್ಯಕರ ಬೆಂಗಳೂರು

ಬ್ರ್ಯಾಂಡ್ ಬೆಂಗಳೂರು ಅಡಿಯಲ್ಲಿ ಆರೋಗ್ಯ ಸೇವೆಗಳ ಉನ್ನತೀಕರಿಸಲು ₹100 ಕೋಟಿ ಅನುದಾನ ಒದಗಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಪಾಲಿಕೆ ನಡುವಿನ ಸುಗಮ ಸಮನ್ವಯಕ್ಕಾಗಿ. ‘ಬೆಂಗಳೂರು ಆರೋಗ್ಯ ಆಯುಕ್ತರು’ ಎನ್ನುವ ಹೊಸ ಹುದ್ದೆಯನ್ನು ಸೃಜಿಸಲಾಗುತ್ತಿದೆ. ಇದಕ್ಕಾಗಿ ₹20 ಕೋಟಿ ಮೀಸಲಿರಿಸಲಾಗಿದೆ.

ಸದೃಢ ಆರೋಗ್ಯ

‘ಸಮಗ್ರ ಸದೃಢ ಆರೋಗ್ಯ’ ಯೋಜನೆಯಡಿ ಮುಂದಿನ ಮೂರು ವರ್ಷಗಳಲ್ಲಿ ₹64 ಕೋಟಿ ವೆಚ್ಚದಲ್ಲಿ 40 ಹೊಸ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, 81 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ನಿರ್ಧರಿಸಲಾಗಿದೆ. 24 ಹೆರಿಗೆ ಆಸ್ಪತ್ರೆಗಳು ಮತ್ತು ರೆಫರಲ್ ಘಟಕಗಳಲ್ಲಿ ಕೊಠಡಿಗಳು ₹24 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿವೆ.

50 ಇಂದಿರಾ ಕ್ಯಾಂಟೀನ್

50 ಹೊಸ ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಿರ ಅಥವಾ ಮೊಬೈಲ್ (ಸಂಚಾರಿ) ಮಾದರಿಯಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. ಇದಕ್ಕಾಗಿ ₹70 ಕೋಟಿ ಮೀಸಲಿಡಲಾಗಿದೆ. ಹೊಸ ರುದ್ರಭೂಮಿ ಹಾಗೂ ಚಿತಾಗಾರಗಳನ್ನು ನಿರ್ಮಾಣ ಮಾಡಲು ₹ 15 ಕೋಟಿಗಳನ್ನು ಒದಗಿಸಲಾಗಿದೆ. ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಹಾಗೂ ಪ್ರಾಣಿಗಳ ತ್ಯಾಜ್ಯ ವಿಲೇವಾರಿಗಾಗಿ 4 ಘಟಕಗಳನ್ನು ನಿರ್ಮಿಸಲು ₹10 ಕೋಟಿ ಒದಗಿಸಲಾಗಿದೆ.

ಆರೋಗ್ಯ ಸಾರಥಿ

‘ರೋಗ ನಿರೋಧಕ ಶಕ್ತಿ’ ಸುಧಾರಿಸಲು ವಿದ್ಯುತ್ ಚಾಲಿತ ವಾಹನಗಳಲ್ಲಿ ಮನೆ ಬಾಗಿಲಿಗೆ ತೆರಳಿ ಚುಚ್ಚುಮದ್ದು ನೀಡುವ ‘ಆರೋಗ್ಯ ಸಾರಥಿ’ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂವಾದಾತ್ಮಕ ಯುಟ್ಯೂಬ್

ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳು ಸೇರಿದಂತೆ ವಿವಿಧ ಕಾರಣಗಳಿಂದ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರಿಗೆ ಕೌನ್ಸೆಲಿಂಗ್ ಮಾಡಲು ಪಾಲಿಕೆಯ ಆಂತರಿಕ ವೈದ್ಯರ ತಂಡ ಮತ್ತು ಕ್ಷೇತ್ರ ತಜ್ಞರ ಸಹಾಯದಿಂದ ‘ಮನೋಬಿಂಬ’ ಎಂಬ ಸಂವಾದಾತ್ಮಕ ಯುಟ್ಯೂಬ್ ಆರಂಭಿಸಲಾಗುವುದು.

ಶಿಕ್ಷಣ ಬೆಂಗಳೂರು

ಪಾಲಿಕೆಯ ಶಾಲಾ ಮತ್ತು ಕಾಲೇಜುಗಳ ಕಲಿಕಾ ಸಾಮರ್ಥ್ಯ ವೃದ್ದಿಸುವ ಸಲುವಾಗಿ ಕಂಪ್ಯೂಟರ್ ಲ್ಯಾಬ್, ಡಿಜಿಟಲ್ ಲ್ಯಾಬ್, ಮಾಹಿತಿ ಮತ್ತು ತಂತ್ರಜ್ಞಾನ ಲ್ಯಾಬ್, ಸೈನ್ಸ್ ಲ್ಯಾಬ್, ಇ-ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕಾಗಿ 10 ಕೋಟಿ ಮೀಸಲಿರಿಸಲಾಗಿದೆ. ಹೊಸ ಶಾಲಾ ಕಾಲೇಜು ಕಟ್ಟಡಗಳನ್ನು ಅಭಿವೃದ್ಧಿಪಡಿಸಲು ₹35 ಕೋಟಿ ಮೀಸಲಿರಿಸಲಾಗಿದೆ.

ಶಾಲೆ ತೋಟ

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳಿಗೆ ಕೃಷಿ ಮತ್ತು ತೋಟಗಾರಿಕೆಯ ಪರಿಕಲ್ಪನೆ ಹಾಗೂ ಪರಿಸರ ಕಾಳಜಿ ಮೈಗೂಡಿಸಲು ‘ಶಾಲೆ ತೋಟ’ ನಿರ್ಮಿಸಲು ₹ 5 ಕೋಟಿ ಮೀಸಲಿರಿಸಲಾಗಿದೆ.

ಆಕರ್ಷಕ ಬೆಂಗಳೂರು

250 ಮೀಟರ್ ಎತ್ತರದ ಸ್ಕೈ-ಡೆಕ್ ನಿರ್ಮಿಸಲು ₹350 ಕೋಟಿ ವೆಚ್ಚವೆಂದು ಅಂದಾಜಿಸಲಾಗಿದ್ದು, ಈ ಸಾಲಿನಲ್ಲಿ ₹50 ಕೋಟಿ ಅನುದಾನವನ್ನು ಒದಗಿಸಲಾಗುತ್ತಿದೆ.

ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 50 ಕೋಟಿ ಅನುದಾನ ಮೀಸಲಿರಿಸಲಾಗಿದೆ. ವಿಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ಬೃಹತ್ ಕೆಂಪೇಗೌಡ ಭವನ ನಿರ್ಮಿಸಲಾಗುವುದು. ನಗರದಲ್ಲಿರುವ 5 ಲಕ್ಷ ಸಾಂಪ್ರದಾಯಿಕ ಬೀದಿದೀಪಗಳನ್ನು ಎಲ್‌ಇಡಿ ಬೀದಿದೀಪಗಳಾಗಿ ಬದಲಾಯಿಸಲಾಗುವುದು



ಗುಲಾಬಿ ಕೊಠಡಿ

ಮಹಿಳೆಯರಿಗಾಗಿ ಮಾಲ್, ಬಸ್ ನಿಲ್ದಾಣಗಳಲ್ಲಿ, ಶೌಚಾಲಯಗಳಲ್ಲಿ ಗುಲಾಬಿ ಕೊಠಡಿಗಳನ್ನು ಸ್ಥಾಪಿಸುವುದು. ಮುಟ್ಟಿನ ಸಮಯದಲ್ಲಿ ನ್ಯಾಪ್‌ಕಿನ್‌ಗಳು, ಮತ್ತು ವಿಶ್ರಾಂತಿ ಕೊಠಡಿಗಳನ್ನು ಒದಗಿಸಲು ನಿರ್ಧರಿಸಲಾಗಿದೆ.

ನಗರದಲ್ಲಿರುವ ಮೇಲ್ಸೇತುವೆ, ಕೆಳಸೇತುವೆ, ರಸ್ತೆ ಕೂಡು ಜಾಗಗಳು, ಉದ್ಯಾನಗಳಲ್ಲಿ ಆಕರ್ಷಕ ಬಣ್ಣದ ವಿದ್ಯುತ್ ದೀಪ ಅಳವಡಿಸಲು ₹ 100 ಕೋಟಿ ಅನುದಾನ ಒದಗಿಸಲಾಗಿದೆ.

ನಗರದ ಕೂಡು ರಸ್ತೆಗಳ ಹಾಗೂ ಸಾರ್ವಜನಿಕ ಸ್ಥಳಗಳನ್ನು ಸುಂದರಗೊಳಿಸಲು ₹25 ಕೋಟಿ ಅನುದಾನ ಮೀಸಲಿರಿಸಲಾಗಿದೆ.

15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ಉದ್ಘಾಟಿಸಿ ಸಿದ್ದರಾಮಯ್ಯ ಘೋಷಣೆ

ಚಲನಚಿತ್ರ ಪ್ರಶಸ್ತಿ ಪುನರಾರಂಭಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಕೆಲ ವರ್ಷಗಳಿಂದ ಸ್ಥಗಿತಗೊಂಡಿರುವ ಕರ್ನಾಟಕ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಯನ್ನು ಪುನರಾರಂಭಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಿಧಾನಸೌಧದ ಪೂರ್ವದ್ವಾರದ ಮುಂಭಾಗದಲ್ಲಿ ಗುರುವಾರ(ಫೆ.29) ನಡೆದ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಪ್ರಶಸ್ತಿಗೆ ಸಂಬಂಧಿಸಿದಂತೆ ಸಮಿತಿಗಳನ್ನು ಮಾಡಿದ್ದು ಇವುಗಳು ವರದಿ ನೀಡಿದ ತಕ್ಷಣ, ಈ ವರ್ಷದ್ದೂ ಸೇರಿದಂತೆ ಹಿಂದಿನ ವರ್ಷಗಳ ಪ್ರಶಸ್ತಿಗಳನ್ನು ನೀಡಲಾಗುವುದು' ಎಂದು ತಿಳಿಸಿದರು.

'ದೇಶದಲ್ಲಿ ಅನೇಕ ಧರ್ಮ, ಜಾತಿ, ಭಾಷೆಗಳಿವೆ. ನಾವು ಇವೆಲ್ಲವನ್ನೂ ಮೀರಿ ಮನುಷ್ಯರಾಗಿ ಬಾಳುವ ಪ್ರಯತ್ನವನ್ನು ಮಾಡುವ ಸಂದೇಶವನ್ನು ನೀಡುವುದೇ ಈ ಚಿತ್ರೋತ್ಸವಗಳ ಉದ್ದೇಶ. ಈ ಸಮಾಜದಲ್ಲಿ ನಾವೆಲ್ಲರು ಸಮಾನತೆ ತರಲು ಪ್ರಯತ್ನ ಮಾಡಬೇಕು. ಎಲ್ಲ ಸರ್ಕಾರಗಳೂ ಕೂಡಾ ಈ ನಿಟ್ಟಿನಲ್ಲಿ

15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ರಿಕ್ಕಿ ಕೇಜ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು – ಪ್ರಜಾವಾಣಿ ಚಿತ್ರ

ಪ್ರಯತ್ನ ಮಾಡಬೇಕು. ಅದೇ ನಮ್ಮ ಸಂವಿಧಾನದ ತಿರುಳು. ಹೀಗಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಕುರಿತಾದ ಚಿತ್ರಗಳನ್ನು ಮಾಡುವವರಿಗೆ ಸರ್ಕಾರ ಹಣಕಾಸಿನ ಬೆಂಬಲ ಸೇರಿದಂತೆ ಇತರೆ ಎಲ್ಲ ಸಹಕಾರ ನೀಡಲಿದೆ' ಎಂದು ಘೋಷಿಸಿದರು.

ಚಿತ್ರೋತ್ಸವದ ಕೈಪಿಡಿ ಬಿಡುಗಡೆ ಮಾಡಿ ಮಾತನಾಡಿದ ನಟ ಶಿವರಾಜ್ ಕುಮಾರ್, 'ಕನ್ನಡ ಸಿನಿಮಾಗಳು ಇಂದು ಅಂತರರಾಷ್ಟ್ರೀಯ ಮಟ್ಟಕ್ಕೆ ತಲುಪಿವೆ. ಇದು ಹೆಮ್ಮೆಯ ವಿಷಯ. ಕನ್ನಡ ಚಿತ್ರರಂಗಕ್ಕೆ 90 ವರ್ಷ ಪೂರೈಸಿದ್ದು, ಇದರಲ್ಲಿ ನಾನು 38 ವರ್ಷ ಸೇವೆ ಸಲ್ಲಿಸಿರುವುದು ಪುಣ್ಯ' ಎಂದರು. ಕನ್ನಡ ಚಿತ್ರರಂಗದ 90 ವರ್ಷದ ವಿಶೇಷ ಸಂಚಿಕೆಯನ್ನು ಚಿತ್ರೋತ್ಸವದ ರಾಯಭಾರಿ, ನಟ ಡಾಲಿ ಧನಂಜಯ ಬಿಡುಗಡೆಗೊಳಿಸಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ನಟ ಸಾಧುಕೋಕಿಲ, ನಟಿ ಆರಾಧನಾ, ಚಿತ್ರೋತ್ಸವ ಸಮಿತಿ ಅಧ್ಯಕ್ಷ ಕೆ.ವಿ. ತ್ರಿಲೋಕ್ ಚಂದ್ರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಮತ್ತಿತರರು ಉಪಸ್ಥಿತರಿದ್ದರು. ಚಿತ್ರೋತ್ಸವದ ಉದ್ಘಾಟನಾ ಸಮಾರಂಭಕ್ಕೂ ಮುನ್ನ ನಡೆದ ರಿಕ್ಕಿ ಕೇಜ್ ತಂಡದ ಸಂಗೀತ ಕಾರ್ಯಕ್ರಮ ಜನರನ್ನು ಸೆಳೆಯಿತು.

ಕಲಾವಿದರಿಗೆ, ಚಿತ್ರರಂಗಕ್ಕೆ ಸರ್ಕಾರದ ಪ್ರೋತ್ಸಾಹ ಮುಖ್ಯ. ಸಬ್ಸಿಡಿ ಹಾಗೂ ಪ್ರಶಸ್ತಿ ವಿತರಣೆಯನ್ನು ಮುಂದುವರಿಸಬೇಕು.
ಡಾಲಿ ಧನಂಜಯ, ನಟ

'ಡಾ. ಬಾಬಾಸಾಹೇಬ್ ಅಂಬೇಡ್ಕರ್ ಸಿನಿಮಾ ಕನ್ನಡಕ್ಕೆ ಡಬ್ ಆಗಲಿ'

ಬೆಂಗಳೂರು ಚಿತ್ರೋತ್ಸವದ ಸಿಗ್ನೇಚರ್ ಟ್ಯೂನ್ ಬಿಡುಗಡೆಗೊಳಿಸಿ ಮಾತನಾಡಿದ ಖ್ಯಾತ ನಿರ್ದೇಶಕ ಜಬ್ಬಾರ್ ಪಟೇಲ್, 'ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಸಾಹಿತ್ಯ, ರಂಗಭೂಮಿಯ ಕೊಡುಕೊಳ್ಳುವಿಕೆ ಹಿಂದಿನಿಂದಲೂ ಇದೆ. ಪುಣೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನಡೆದ ಸಂದರ್ಭದಲ್ಲಿ ಕರ್ನಾಟಕದ ಯುವ ನಿರ್ದೇಶಕರ ಸಿನಿಮಾಗಳು ಅಲ್ಲಿಗೆ ಬರುತ್ತವೆ. ಇಂತಹ ಚಿತ್ರೋತ್ಸವಗಳು ಗ್ರಾಮೀಣ ಭಾಗದಲ್ಲಿರುವ ಚಿತ್ರ ನಿರ್ಮಾಣ ಮಾಡುವ ಯುವಜನತೆಗೂ ವೇದಿಕೆಯಾಗಬೇಕು' ಎಂದರು.

'ನಟ ಮಮ್ಮುಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸಿದ 'ಡಾ.ಬಾಬಾಸಾಹೇಬ್ ಅಂಬೇಡ್ಕರ್' ಸಿನಿಮಾವನ್ನು ನಾನು ನಿರ್ದೇಶಿಸಿದ್ದೆ. ದೇಶದ 9 ಭಾಷೆಗಳಿಗೆ ಈ ಸಿನಿಮಾ ಡಬ್ ಆಗಿದೆ. ಆದರೆ ಕನ್ನಡದಲ್ಲಿ ಈ ಸಿನಿಮಾ ಡಬ್ ಆಗಲು ನಿಯಮವೊಂದು ಅಡ್ಡಿಯಾಯಿತು. ಈ ಸಿನಿಮಾವನ್ನು ಕನ್ನಡಕ್ಕೆ ಡಬ್ ಮಾಡಲು ಸಿ.ಎಂ ಕ್ರಮಕೈಗೊಳ್ಳಬೇಕು. ಏಕೆಂದರೆ ಅಂಬೇಡ್ಕರ್ ಅವರು ನೀಡಿದ ಮೌಲ್ಯಗಳು ಈ ಮೂಲಕ ಜನರನ್ನು ತಲುಪಲಿವೆ. ಸಂವಿಧಾನ ಎನ್ನುವುದು ಅತ್ಯುತ್ತಮ ಧರ್ಮಗ್ರಂಥ' ಎಂದರು.

ನಿಗಮ, ಮಂಡಳಿ, ಆಯೋಗ, ಅಕಾಡೆಮಿಗಳಿಗೆ ನೇಮಕ

ಕಾರ್ಯಕರ್ತರಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಗೆ ಮುನ್ನವೇ ಪಕ್ಷದ ಕಾರ್ಯಕರ್ತರನ್ನು ವಿವಿಧ ನಿಗಮ–ಮಂಡಳಿ, ಅಕಾಡೆಮಿ, ಆಯೋಗಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ನೇಮಕ ಮಾಡಲಾಗಿದೆ.

ವಿಧಾನಸಭೆ ಚುನಾವಣೆ ವೇಳೆ ಅನೇಕ ಕ್ಷೇತ್ರಗಳಲ್ಲಿ ಹಲವು ಆಕಾಂಕ್ಷಿಗಳಿದ್ದರು. ಆ ಪೈಕಿ ಗೆಲ್ಲುವವರು ಹಲವರಿದ್ದರು. ಯಾರದ್ದೋ ಒತ್ತಡ, ಪ್ರಭಾವಗಳಿಂದ ಕೆಲವರಿಗೆ ಟಿಕೆಟ್ ಕೈತಪ್ಪಿತ್ತು. ಟಿಕೆಟ್ ಕೈತಪ್ಪಿದ ಕೆಲವರಿಗೆ ನಿಗಮ–ಮಂಡಳಿಯಲ್ಲಿ ಅವಕಾಶ ಕಲ್ಪಿಸುವುದಾಗಿ ಪಕ್ಷದ ನಾಯಕರು ಭರವಸೆ ನೀಡಿದ್ದರು. ಅವರಿಗೆ ಈಗ ಅವಕಾಶ ಲಭಿಸಿದೆ.

ಮೈಲ್ಯಾಕ್ (ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ) ಅಧ್ಯಕ್ಷ ಸ್ಥಾನಕ್ಕೆ ನೇಮಕವಾಗಿದ್ದ ಅಯೂಬ್ ಖಾನ್, ತಮಗೆ ನೀಡಿದ್ದ ಸ್ಥಾನದ ಬಗ್ಗೆ ಅಸಮಾಧಾನ ಹೊರಹಾಕಿದ್ದರು. ಅವರನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ (ಕೆಇಎ) ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಎಂದು ಹೇಳಲಾಗಿದೆ.

ವಿಧಾನಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀನಿವಾಸ್ ಹಾಗೂ ಸೋಮಣ್ಣ ಬೇವಿನಮರದ ಅವರಿಗೂ ಅಧ್ಯಕ್ಷ ಸ್ಥಾನ ನೀಡಲಾಗಿದೆ.

ಬಹುತೇಕ ಕಾರ್ಯಕರ್ತರಿಗೆ ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರ ಅಥವಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ (ಕಾಡಾ) ಅಧ್ಯಕ್ಷ ಸ್ಥಾನಗಳನ್ನು ನೀಡಲಾಗಿದೆ.

ಹೆಸರು	ನೇಮಿಸಲಾದ ನಿಗಮ/ಮಂಡಳಿ
ಕಾಂತಾ ನಾಯಕ	ಅಧ್ಯಕ್ಷೆ, ಕೌಶಲ್ಯಾಭಿವೃದ್ಧಿ ನಿಗಮ
ಮುಂಡರಗಿ ನಾಗರಾಜು	ಅಧ್ಯಕ್ಷ, ಬಾಬು ಜಗನ್ ಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ
ವಿನೋದ್.ಕೆ.ಅಸೂಟಿ	ಉಪಾಧ್ಯಕ್ಷ, ಕರ್ನಾಟಕ ಕ್ರೀಡಾ ಪ್ರಾಧಿಕಾರ
ಬಿ.ಎಚ್.ಹರೀಶ್	ಅಧ್ಯಕ್ಷ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ
ಡಾ.ಅಂಶುಮಂತ್	ಅಧ್ಯಕ್ಷ, ಭದ್ರಾ ಕಾಡಾ, ಶಿವಮೊಗ್ಗ
ಆಂಜನೇಯಲು ಜೆ.ಎಸ್	ಅಧ್ಯಕ್ಷ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ
ಡಾ.ಬಿ ಯೋಗೇಶ್‌ಬಾಬು	ಅಧ್ಯಕ್ಷ, ಕರ್ನಾಟಕ ದ್ರಾಕ್ಷಾರಸ ಮಂಡಳಿ
ಮರೀಗೌಡ ಯಾದಗಿರಿ	ಅಧ್ಯಕ್ಷ, ರಾಜ್ಯ ತೊಗರಿ ಅಭಿವೃದ್ಧಿ ಮಂಡಳಿ
ದೇವೇಂದ್ರಪ್ಪ ಮರ್ತೂರು	ಅಧ್ಯಕ್ಷ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ
ರಾಜಶೇಖರ್ ರಾಮಸ್ವರಂ	ಅಧ್ಯಕ್ಷ, ಕರ್ನಾಟಕ ಜೈವಿಕ ಇಂಧನ ಮಂಡಳಿ
ಕೆ.ಮರಿಗೌಡ	ಅಧ್ಯಕ್ಷ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಎಸ್.ಮನೋಹರ್	ಅಧ್ಯಕ್ಷ, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
ಆಯೂಬ್ ಖಾನ್	ಅಧ್ಯಕ್ಷ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ (ಕೆಇಎ)
ಮಮತಾ ಗಟ್ಟಿ	ಅಧ್ಯಕ್ಷೆ, ಗೇರು ಅಭಿವೃದ್ಧಿ ನಿಗಮ
ಪಲ್ಲವಿ.ಜಿ	ಅಧ್ಯಕ್ಷೆ, ಕರ್ನಾಟಕ ರಾಜ್ಯ ಸಾಂಬಾರ ಪದಾರ್ಥಗಳ ಅಭಿವೃದ್ಧಿ ಮಂಡಳಿ
ಹೆಚ್.ಸಿ.ಸುಧೀಂದ್ರ	ಅಧ್ಯಕ್ಷ, ತೆಂಗು ಅಭಿವೃದ್ಧಿ ಮಂಡಳಿ
ಡಾ.ನಾಗಲಕ್ಷ್ಮೀ ಚೌದರಿ	ಅಧ್ಯಕ್ಷೆ, ಕರ್ನಾಟಕ ರಾಜ್ಯ ಮಹಿಳಾ ಆಯೋಗ
ಎಚ್.ಎಸ್.ಸುಂದರೇಶ್	ಅಧ್ಯಕ್ಷ, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ
ಆರ್.ಎಂ.ಮಂಜುನಾಥ	ಅಧ್ಯಕ್ಷ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ
ಜಯಣ್ಣ	ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ
ಆರ್.ಸಂಪತ್ ರಾಜ್	ಅಧ್ಯಕ್ಷ, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ
ಪದ್ಮಾವತಿ	ಅಧ್ಯಕ್ಷೆ, ಮಹಿಳಾ ಅಭಿವೃದ್ಧಿ ನಿಗಮ
ಶ್ರೀನಿವಾಸ್	ಅಧ್ಯಕ್ಷ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ
ಶಾಕಿರ್ ಸನದಿ	ಅಧ್ಯಕ್ಷ, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ಸೋಮಣ್ಣ ಬೇವಿನಮರದ	ಅಧ್ಯಕ್ಷ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಮೆಹಬೂಬ್ ಪಾಷಾ	ಅಧ್ಯಕ್ಷ, ಕಂಠೀರವ ಸ್ಟುಡಿಯೋ
ಕೀರ್ತಿ ಗಣೇಶ್	ಅಧ್ಯಕ್ಷ, ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ
ಮಜರ್ ಖಾನ್	ಅಧ್ಯಕ್ಷ, ದೇವರಾಜು ಅರಸು ಟ್ರಕ್ ಟರ್ಮಿನಲ್
ಸವಿತಾ ರಘು	ಅಧ್ಯಕ್ಷೆ, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ
ಲಲಿತ್ ರಾಘವ್	ಅಧ್ಯಕ್ಷ, ಕರ್ನಾಟಕ ವಿದ್ಯುತ್ ಕಾರ್ಖಾನೆ
ಜಿ.ಎಸ್.ಮಂಜುನಾಥ್	ಅಧ್ಯಕ್ಷ, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ
ಮಾಲಾ ನಾರಾಯಣರಾವ್	ಅಧ್ಯಕ್ಷೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ
ರಿಜ್ವಾನ್ ಜಯನಗರ	ಅಧ್ಯಕ್ಷ, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ.
ಕೇಶವ ರೆಡ್ಡಿ	ಅಧ್ಯಕ್ಷ, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ತಾಜಾ ಪೀರ್	ಅಧ್ಯಕ್ಷ, ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ
ಗಂಗಾಧರ್	ಅಧ್ಯಕ್ಷ, ಮೈಸೂರು ಸಕ್ಕರೆ ಕಾರ್ಖಾನೆ
ಅಲ್ತಾಫ್	ಅಧ್ಯಕ್ಷ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
ಜಯಸಿಂಹ	ಅಧ್ಯಕ್ಷ, ಬ್ರಾಹ್ಮಣ ಅಭಿವೃದ್ಧಿ ಮಂಡಳಿ
ವಿಜಯ್.ಕೆ.ಮುಳಗುಂದ್	ಅಧ್ಯಕ್ಷ, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ
ಮರಿಸ್ವಾಮಿ ಚಾಮರಾಜನಗರ	ಅಧ್ಯಕ್ಷ, ಕಾಡಾ,ಮೈಸೂರು
ಸದಾಶಿವ್ ಉಳ್ಳಾಲ್	ಅಧ್ಯಕ್ಷ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ರಘುನಂದನ್ ರಾಮಣ್ಣ	ಅಧ್ಯಕ್ಷ, ಬೆಂಗಳೂರು ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನೆ ಪ್ರಾಧಿಕಾರ
ಬಸವರಾಜ್ ಜಾಬಶೆಟ್ಟಿ	ಅಧ್ಯಕ್ಷ, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ
ಸಾಧು ಕೋಕಿಲ	ಅಧ್ಯಕ್ಷ, ಕರ್ನಾಟಕ ಚಲನಚಿತ್ರ ಅಕಾಡೆಮಿ

ಬಿಜೆಪಿ ಮುಖಂಡ ಮಹಾಂತಪ್ಪ ಕೊಲೆ

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಸರಸಂಬಾ ಗ್ರಾಮದ ಬಿಜೆಪಿ ಮುಖಂಡ ಮಹಾಂತಪ್ಪ ಸಿದ್ದರಾಮಪ್ಪ ಆಲೂರೆ (45) ಅವರನ್ನು ದುಷ್ಕರ್ಮಿಗಳು ಗುರುವಾರ ಕೊಲೆ ಮಾಡಿ ಪರಾರಿಯಾಗಿದ್ದಾರೆ.

ಸರಸಂಬಾ ಗ್ರಾಮದಲ್ಲಿ ಧನಲಕ್ಷ್ಮಿ ಸಹಕಾರ ಸಂಘದ ಅಧ್ಯಕ್ಷರಾಗಿದ್ದ ಮಹಾಂತಪ್ಪ, ಸತತ ಮೂರು ಬಾರಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು.

ಬೆಳಿಗ್ಗೆ ಹೊಲದಲ್ಲಿ ಕಟ್ಟಿಹಾಕಿದ್ದ ಆಕಳಿನ ಹಾಲು ತೆಗೆದುಕೊಂಡು ಮನೆಯತ್ತ ಬರುತ್ತಿದ್ದರು. ಜೆಸ್ಕಾಂ ಕಚೇರಿ ಸಮೀಪ ಕಾರಿನಲ್ಲಿ ಬಂದ ದುಷ್ಕರ್ಮಿಗಳು, ಮಹಾಂತಪ್ಪ ಅವರನ್ನು ಅಡ್ಡಗಟ್ಟಿ, ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದರು.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಸೆಂಟರ್, ಮುಂಬೈ
ದೂರವಾಣಿ: 022-22820427

ಗುತ್ತಿಗೆ/ ನಿಯಮಿತ ಆಧಾರದ ಮೇಲೆ ವಿಶೇಷಜ್ಞ ವರ್ಗದ ಅಧಿಕಾರಿಗಳ ನೇಮಕಾತಿ

ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ	ಹುದ್ದೆ	ಖಾಲಿ ಹುದ್ದೆ	ಜಾಹೀರಾತು ನಂ.
1	ಸರ್ಕಲ್ ಡಿಫೆನ್ಸ್ ಬ್ಯಾಂಕಿಂಗ್ ಅಡ್ವೈಸರ್ (ಸಿಡಿಬಿಎ) ಗುತ್ತಿಗೆ ಟಿಇಜಿಎಸ್-VI ಗೆ ಸಮಾನ (ಡೆಪ್ಯುಟಿ ಜನರಲ್ ಮ್ಯಾನೇಜರ್)	01	CRPD/SCO/ 2023-24/31
2	ಸಹಾಯಕ ವ್ಯವಸ್ಥಾಪಕರು (ಸೆಕ್ಯುರಿಟಿ ಎನಲಿಸ್ಟ್) ನಿಯಮಿತ ಜೆಎಮ್‌ಜಿಎಸ್-I	23	CRPD/SCO/ 2023-24/32
3	ಉಪ ವ್ಯವಸ್ಥಾಪಕರು (ಸೆಕ್ಯುರಿಟಿ ಎನಲಿಸ್ಟ್) ನಿಯಮಿತ ಎಮ್‌ಎಮ್‌ಜಿಎಸ್-II	51	
4	ವ್ಯವಸ್ಥಾಪಕರು (ಸೆಕ್ಯುರಿಟಿ ಎನಲಿಸ್ಟ್) ನಿಯಮಿತ ಎಮ್‌ಎಮ್‌ಜಿಎಸ್-III	03	
5	ಸಹಾಯಕ ಪ್ರಧಾನ ವ್ಯವಸ್ಥಾಪಕರು (ಎಪ್ಲಿಕೇಶನ್ ಸೆಕ್ಯುರಿಟಿ) ನಿಯಮಿತ ಎಸ್‌ಎಮ್‌ಜಿಎಸ್-V	03	
6	ಉಪ ಉದರಿ ವಿಶ್ಲೇಷಕ ನಿಯಮಿತ ಎಮ್‌ಎಮ್‌ಜಿಎಸ್-III	50	CRPD/SCO/ 2023-24/33

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಆವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿರಿ https://bank.sbi/web/careers. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿರಿ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ:** 13.02.2024 **ರಿಂದ** 04.03.2024

ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: **"CONTACT US"—> "Post Your Query"** ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಸ್ಥಳ: ಮುಂಬೈ
ದಿನಾಂಕ: 13.02.2024
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)

ಯಶ್ ಅಭಿಮಾನಿಗೆ ಗಾಯ

ಬಳ್ಳಾರಿ: ನಗರದ ಹೊರವಲಯದ ಬಾಲಾಜಿ ನಗರ ಕ್ಯಾಂಪ್ ಬಳಿ ಗುರುವಾರ ನಟ ಯಶ್ ಅವರ ಬೆಂಗಾವಲು ವಾಹನವು ಅಭಿಮಾನಿ, ದ್ವಿತೀಯ ಪಿಯುಸಿ ವಿದ್ಯಾರ್ಥಿ ಉಮೇಶ್ ಎಂಬುವರ ಕಾಲ ಮೇಲೆ ಹರಿದ ಪರಿಣಾಮ ಅವರಿಗೆ ಗಾಯವಾಯಿತು.

ಕ್ಯಾಂಪ್ ಬಳಿ ಅಮೃತೇಶ್ವರ ದೇವಾಲಯದ ಉದ್ಘಾಟನೆಗೆ ಬಂದಿದ್ದ ಯಶ್ ಅವರನ್ನು ನೋಡಲು ಅಭಿಮಾನಿಗಳು ಸೇರಿದ್ದರು. ಬಳ್ಳಾರಿಯ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಉಮೇಶ್ ಚಿಕಿತ್ಸೆ ಪಡೆದಿದ್ದಾರೆ ಎಂದು ಅವರ ತಂದೆ ರಾಮಪ್ಪ ತಿಳಿಸಿದರು.

ಕರ್ನಾಟಕ ಸರ್ಕಾರ...
ಗ್ಯಾರಂಟಿ ಸರ್ಕಾರ...
ಇಂಧನ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಗೃಹ ಜ್ಯೋತಿ
ಪ್ರತಿ ಮನೆಗೆ
200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ನೋಂದಣಿಗೊಂಡ ಒಟ್ಟು ಗ್ರಾಹಕರ ಸಂಖ್ಯೆ 1.66 ಕೋಟಿ
ಫಲಾನುಭವಿಗಳ ಒಟ್ಟು ಸಂಖ್ಯೆ 1.60 ಕೋಟಿ
ಒಟ್ಟು ಸಬ್ಸಿಡಿ ಮೊತ್ತ 3,644 ಕೋಟಿ
97% ಫಲಾನುಭವಿಗಳು ಕರ್ನಾಟಕದಾದ್ಯಂತ
ನೋಂದಣಿಗೆ ಯಾವುದೇ ಅಂತಿಮ ದಿನಾಂಕ ಇರುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಇಲಾಖೆಯ ಸಭೆಯಲ್ಲಿ ಶ್ರೀ ಕೆ.ಜೆ. ಜಾರ್ಜ್, ಮಾನ್ಯ ಇಂಧನ ಸಚಿವರು ಹಾಗೂಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು

ಗೃಹ ಜ್ಯೋತಿ ಗ್ರಾಹಕರಿಗೆ ಸಿಹಿಸುದ್ದಿ! ಸಿಗಲಿದೆ ಇನ್ನಷ್ಟು ಲಾಭಗಳು:
- ಗೃಹ ಜ್ಯೋತಿ ಯೋಜನೆಯಡಿಯಲ್ಲಿ ಮಾಸಿಕ ಅರ್ಹ 48 ಯೂನಿಟ್‌ಗಿಂತ ಕಡಿಮೆ ವಿದ್ಯುತ್ ಬಳಸುವ ಗ್ರಾಹಕರಿಗೆ ಶೇ. 10 ರಷ್ಟು ಹೆಚ್ಚುವರಿ ವಿದ್ಯುತ್‌ಗೆ ಬದಲಾಗಿ 10 ಯೂನಿಟ್ ಹೆಚ್ಚುವರಿ ಉಚಿತ ವಿದ್ಯುತ್.
- ಸರಾಸರಿ 48 ಯೂನಿಟ್ ಗಿಂತ ಕಡಿಮೆ ಬಳಸುವ ಸುಮಾರು 70 ಲಕ್ಷ ಗ್ರಾಹಕರಿಗೆ ಇದರಿಂದ ಪ್ರಯೋಜನ ಸಿಗಲಿದೆ.
- ರಾಜ್ಯ ಸರ್ಕಾರದ ನಿರ್ಧಾರದಿಂದ ಅತ್ಯಂತ ಕಡಿಮೆ ವಿದ್ಯುತ್ ಬಳಸುವ ಗ್ರಾಹಕರಿಗೆ ಇನ್ನು ಮುಂದೆ ಸಂಪೂರ್ಣ ಶೂನ್ಯ ಬಿಲ್ ಸಿಗಲಿದೆ.
- ರಾಜ್ಯ ಸರ್ಕಾರ ಇದಕ್ಕೆ ವಾರ್ಷಿಕ 398 ಕೋಟಿ ರೂ.ಗಳ ಹೆಚ್ಚುವರಿ ಸಹಾಯಧನ ನೀಡಲಿದೆ.

ನುಡಿದಂತೆ ನಡೆದಿದ್ದೇವೆ...
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ 10 kg
ಗೃಹಲಕ್ಷ್ಮಿ ₹2000
ಯುವನಿಧಿ ₹3000 | ₹1500

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಕನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸುವುದು" –ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.
ವಿದ್ಯುತ್ ಸುರಕ್ಷತೆಯ ಕುರಿತು ವಾಟ್ಸ್‌ಆ್ಯಪ್ ಸಂಖ್ಯೆ 9483191212 / 9483191222
ವೆಬ್‌ಸೈಟ್‌ಗೆ ಭೇಟಿ ನೀಡಿ: https://bescom.karnataka.gov.in
BESCOM 4x7 HELPLINE 1912

'ಮಹಾರಾಷ್ಟ್ರ ಚೌಕ್' ಫಲಕ ತೆರವು

ಕರುನಾಡು ವಿಜಯಸೇನೆ ಸಂಘಟನೆ ಹೋರಾಟಕ್ಕೆ ಮಣಿದ ಪಾಲಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಅನಗೋಳದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರು ನಿರ್ಮಿಸಿದ್ದ 'ಜೈ ಮಹಾರಾಷ್ಟ್ರ ಚೌಕ್' ಎಂಬ ಫಲಕವನ್ನು ಗುರುವಾರ ರಾತ್ರಿ ಪೊಲೀಸ್ ಬಿಗಿ ಭದ್ರತೆಯಲ್ಲಿ ತೆರವುಗೊಳಿಸಲಾಯಿತು.

ಈ ಫಲಕ ತೆರವುಗೊಳಿಸಬೇಕು ಎಂದು ಆಗ್ರಹಿಸಿ ಕರುನಾಡು ವಿಜಯಸೇನೆ ಸಂಘಟನೆ ಕಾರ್ಯಕರ್ತರು ಮಹಾನಗರ ಪಾಲಿಕೆ ಕಚೇರಿ ಆವರಣದಲ್ಲಿ ಆಯುಕ್ತರ ಕಾರಿಗೆ ಗುರುವಾರ ಮುತ್ತಿಗೆ ಹಾಕಿದರು. ರಾತ್ರಿ 8.30ರವರೆಗೂ ಪಾಲಿಕೆ ಎದುರು ಧರಣಿ ಕುಳಿತರು.

'ಫಲಕ ತೆರವಿಗಾಗಿ ಹಲವು ಸಲ ಮನವಿ ಸಲ್ಲಿಸಿದರೂ ಪ್ರಯೋಜನ ಆಗಿಲ್ಲ. ಈ ಹಿಂದೆ ತಾಲ್ಲೂಕಿನ ಯಳ್ಳೂರಿನಲ್ಲಿ ಅಳವಡಿಸಲಾಗಿದ್ದ 'ಮಹಾರಾಷ್ಟ್ರ ರಾಜ್ಯಕ್ಕೆ ಸ್ವಾಗತ' ಎಂಬ ಫಲಕವನ್ನು ಅಂದಿನ ಅಧಿಕಾರಿಗಳು ಅದನ್ನು ಕಿತ್ತೊಗೆದಿದ್ದರು. ಅನ್ಯ ರಾಜ್ಯದ ಫಲಕ ಇಲ್ಲಿ ಏಕೆ ಅಳವಡಿಸಬೇಕು' ಎಂದು ಮುಖಂಡ ಸಂಪತಕುಮರ ದೇಸಾಯಿ ಪ್ರಶ್ನಿಸಿದರು.

ಕನ್ನಡ ಹೋರಾಟಗಾರರು ಪಟ್ಟು ಸಡಿಲಿಸದ ಕಾರಣ, ಪಾಲಿಕೆ ಅಧಿಕಾರಿಗಳು ಹಾಗೂ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಆಗ ಸ್ಥಳಕ್ಕೆ ಬಂದ ಎಂಇಎಸ್‌ನ ಕೆಲ ಸದಸ್ಯರು ಫಲಕ ತೆರವು ಮಾಡದಂತೆ ಬೆದರಿಕೆ ಹಾಕಿದರು. ನಂತರ ಸ್ಥಳದಲ್ಲಿ ಪೊಲೀಸ್ ಭದ್ರತೆ ನಿಯೋಜಿಸಿದ ಅಧಿಕಾರಿಗಳು, ಫಲಕ ತೆರವು ಮಾಡಿದರು.

'ಮಹಾರಾಷ್ಟ್ರ ಚೌಕ್ ಎಂಬ ಫಲಕ ಇರುವುದು ನನ್ನ ಗಮನಕ್ಕೆ ಬಂದಿದೆ. ಶೀಘ್ರ ತೆರವಿಗೆ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದೇನೆ' ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಪ್ರತಿಕ್ರಿಯೆ ನೀಡಿದ್ದರು.

'ರಾತ್ರಿ 8.30ರ ಸುಮಾರಿಗೆ ಫಲಕ ತೆರವು ಮಾಡಲಾಗಿದೆ. ಸ್ಥಳದಲ್ಲಿ ವಾತಾವರಣ ಶಾಂತವಾಗಿದೆ. ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಭದ್ರತೆ ನಿಯೋಜಿಸಲಾಗಿದೆ' ಎಂದು ಡಿಸಿಪಿ ರೋಹನ್ ಜಗದೀಶ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಭಾಷಾ ವಿಧೇಯಕ ವಿರೋಧಿಸಿ ಎಂಇಎಸ್ ಪತ್ರ

ಬೆಳಗಾವಿ: 'ಕರ್ನಾಟಕ ಸರ್ಕಾರ ಅಂಗೀಕರಿಸಿದ ಕನ್ನಡ ಭಾಷಾ ಸಮಗ್ರ ವಿಧೇಯಕವನ್ನು ಗಡಿ ಭಾಗದಲ್ಲಿ ಅನುಷ್ಠಾನ ಮಾಡದಂತೆ ಮಹಾರಾಷ್ಟ್ರ ಸರ್ಕಾರ ಒತ್ತಡ ಹೇರಬೇಕು' ಎಂದು ಕೋರಿ ಇಲ್ಲಿನ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮುಖಂಡರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಗುರುವಾರ ಪತ್ರ ಬರೆದಿದ್ದಾರೆ.

'ಬೆಳಗಾವಿ ಸೇರಿ 865 ಹಳ್ಳಿಗಳು ವಿವಾದಕ್ಕೆ ಒಳಪಟ್ಟಿವೆ. ಗಡಿ ವಿವಾದ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದೆ. ಇಂಥ ವಿವಾದಿತ ಪ್ರದೇಶದಲ್ಲಿ ಭಾಷಾ ವಿಧೇಯಕ ಜಾರಿ ಮಾಡಿದ್ದು ಸರಿಯಲ್ಲ. ಕರ್ನಾಟಕ ಸರ್ಕಾರ ಗಡಿ ಭಾಗದ ಮರಾಠಿಗರನ್ನು ಉದ್ದೇಶಪೂರ್ವಕ ತುಳಿಯುತ್ತಿದೆ' ಎಂದು ಅವರು ಪತ್ರದಲ್ಲಿ ದೂರಿದ್ದಾರೆ.

'ಬೆಳಗಾವಿಯಲ್ಲಿ ಕನ್ನಡ, ಇಂಗ್ಲಿಷ್, ಮರಾಠಿ ಭಾಷೆಯ ನಾಮಫಲಕಗಳು ಮೊದಲಿನಿಂದಲೂ ಇವೆ. ಈಗ ಶೇ 60ರಷ್ಟು ಕನ್ನಡ ಫಲಕ ಬಳಸಬೇಕು ಎಂಬ ಒತ್ತಡ ಹೇರುವ ಮೂಲಕ ಗಡಿ ಹೋರಾಟಗಾರರನ್ನು ಪ್ರಚೋದಿಸಲಾಗುತ್ತಿದೆ. ಇದನ್ನು ಈಗಲೇ ತಡೆಯಬೇಕು. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದೂ ಆಗ್ರಹಿಸಿದ್ದಾರೆ.

'ಕರ್ನಾಟಕ ಸರ್ಕಾರ ಇಲ್ಲಿನ ಕನ್ನಡ ಸಂಘಟನೆಗಳನ್ನು ಎತ್ತಿಕಟ್ಟುತ್ತಿದೆ. ಮಹಾರಾಷ್ಟ್ರ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಗಡಿ ಹೋರಾಟದಲ್ಲಿ ನಮ್ಮ ಬೆನ್ನಿಗೆ ನಿಲ್ಲಬೇಕು' ಎಂದೂ ಕೋರಿದ್ದಾರೆ.

ಮಹಾರಾಷ್ಟ್ರ ಏಕೀಕರಣ ಸಮಿತಿ ಮುಖಂಡರಾದ ದೀಪಕ್ ದಳವಿ, ಮನೋಹರ ಕಿಣೇಕರ, ಮಾಲೋಜಿ ಅಷ್ಟೇಕರ, ಪ್ರಕಾಶ ಬಿಳಗೋಜಿ ಇತರರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಮುಖ್ಯಾಂಶಗಳು

- ಯಳ್ಳೂರಿನಲ್ಲೂ ಹಿಂದೆ 'ಮಹಾರಾಷ್ಟ್ರ ರಾಜ್ಯಕ್ಕೆ ಸ್ವಾಗತ' ಫಲಕ ಅಳವಡಿಸಲಾಗಿತ್ತು
- ಸ್ಥಳಕ್ಕೆ ತೆರಳಿ ಪಾಲಿಕೆ ಅಧಿಕಾರಿಗಳು ಮತ್ತು ಪೊಲೀಸರಿಂದ ಪರಿಶೀಲನೆ
- ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಪಡೆಗಳ ನಿಯೋಜನೆ

ಬೆಳಗಾವಿ ಸಮೀಪದ ಆನಗೋಳದಲ್ಲಿ 'ಜೈ ಮಹಾರಾಷ್ಟ್ರ ಚೌಕ್' ಎಂದು ಹಾಕಿದ್ದ ಫಲಕ

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625 Web: www.federalbank.co.in

BGRR/Online Auction/2023-24 **PUBLIC NOTICE GOLD AUCTION** 29/02/2024

Notice is hereby given to the public in general and the account holders in particular that e-auction of the pledged gold ornaments in the below mentioned account/s will be conducted by Federal Bank Ltd, on 15.03.2024 through online portal, https://gold.samil.in Interested buyers may log on to the auction portal or contact the Bank at contact@federalbank.co.in for further information. In case e-auction is not materialised for any reason on the date mentioned above, with respect any or all items of the pledged ornaments, Bank shall be conducting private sale of the items on any subsequent date/s without further notice.

Br. Bangalore/Banashankari :- 17816800031478,17816800031486,17816800034308,17816800036006,17816800036196,17816800036600,17816800036956,17816800037590,17816800040149,17816800047532. **Br. Bangalore/Basavanagudi :-** 13186800017925,13186800018188,13186800018808. **Br. Bangalore/Banaswadi :-** 14716800039336,14716800040763,14716800041621,14716800041688,14716800047230,14716800050689,14716800065935. **Br. Bangalore/J P Nagar :-** 18276800068807,18276800069938,18276800070639,18276800071512,18276800072494,18276800074946,18276800075620,18276800076198,18276800076941,18276800078236,18276800078244,18276800078681,18276800078699,18276800078962,18276800080216,18276800086148,18276800092146,18276800096493. **Br. Hassan :-** 13546800013424,13546800013655. **Br. Bangalore/HSR Layout :-** 17696800045706,17696800047124,17696800047983,17696800048106,17696800048171,17696800050029,17696800050177,17696800050326,17696800055119. **Br. Bangalore/Jalahalli :-** 15826800035579,15826800036304,15826800038052,15826800038334. **Br. Bangalore/Krishnarajapuram :-** 15616800019990,15616800013076. **Br. Bangalore/Kodathi Ghate :-** 21716800001576. **Br. Bangalore/Marathahalli :-** 14546800007078,14546800008001,14546800008381. **Br. Bangalore/Thirumalasettyhalli :-** 22626800000784. **Br. Bangalore/Rajajinagar :-** 13346800043525,13346800043673,13346800047112,13346800048821,13346800049217,13346800050785,13346800051759,13346800052690,13346800056709,13346800058077,13346800061667,13346800061717. **Br. Bangalore/Raja Rajeshwari nagar :-** 23456800001114. **Br. Bangalore/R T Nagar :-** 14726800032355,14726800033676,14726800034997,14726800036489,14726800037057,14726800038527,14726800047999. **Br. Bangalore/Vijayanagar :-** 16436800061416,16436800064485,16436800064808,16436800066506,16436800067116,16436800067686,16436800069021,16436800070169. **Br. Bangalore/Thirupalya:-** 21126800003426. **Br. Bangalore/Vignana nagar :-** 16296800003721. **Br.Bangalore/Visweswaraya layout:-** 21676800001143,21676800004584,21676800004808,21676800004949,21676800006332,21676800007744,21676800008734. **Br. Bangalore/Wipro Park Koramangala :-** 21996800013686,21996800014288,21996800016184,21996800016606,21996800017596. **Br. Mysore/Jayalakshmipuram :-** 16896800014444,16896800015334,16896800016878,16896800019237. **Br. Mysore :-** 12816800015807,12816800016359.

Bangalore 29-02-2024 For The Federal Bank Ltd Senior Vice President & Zonal Head

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಶಿವರಾಜ್‌ಕುಮಾರ್

ಸುಶ್ಮಿತ

ದಮನಕನ ಜೊತೆ ಶಿವಣ್ಣ ಕರಟಕ

ಶಿವರಾಜ್‌ಕುಮಾರ್, ಪ್ರಭುದೇವ್ ಅಭಿನಯದ ‘ಕರಟಕ ದಮನಕ’ ಚಿತ್ರ ಮಾ.8ರಂದು ತೆರೆ ಕಾಣುತ್ತಿದೆ. ನಿರ್ದೇಶಕ ಯೋಗರಾಜ್ ಭಟ್ ಬತ್ತಳಿಕೆಯ ಈ ಚಿತ್ರದಲ್ಲಿನ ಪಾತ್ರದ ಕುರಿತು, ಮುಂದಿನ ಯೋಜನೆಗಳ ಬಗ್ಗೆ ಶಿವರಾಜ್‌ಕುಮಾರ್ ಮಾತನಾಡಿದ್ದಾರೆ...

ವೈದೇಹಿ ಬಾಟಿ

- **ಯೋಗರಾಜ್ ಭಟ್ಟರ ಗರಡಿಯಲ್ಲಿ ಅನುಭವ ಹೇಗಿತ್ತು?**

ಯೋಗರಾಜ್ ಭಟ್ಟರ ಜೊತೆ ಸಿನಿಮಾ ಮಾಡಬೇಕೆಂಬ ಹಂಬಲ ‘ಪರಮಾತ್ಮ’ ಸಮಯದಿಂದ ಇತ್ತು. ಅವರು ನನ್ನ ನೆಚ್ಚಿನ ನಿರ್ದೇಶಕ. ಅವರ ಸಿನಿಮಾದಲ್ಲಿ ಹ್ಯೂಮರ್ ಇರುತ್ತದೆ. ಅದರ ಜೊತೆಗೆ ಮಾನವೀಯ ಮೌಲ್ಯಗಳು ಇರುತ್ತವೆ. ಅದನ್ನು ಮನರಂಜನಾತ್ಮಕವಾಗಿ ಹೇಳುತ್ತಾರೆ. ಈ ಸಿನಿಮಾದಿಂದ ನನ್ನ ಬಯಕೆ ಪೂರ್ತಿಯಾಗಿದೆ.

- **ಚಿತ್ರದಲ್ಲಿ ನಿಮ್ಮ ಪಾತ್ರವೇನು?**

ಇದು ‘ಕರಟಕ’ ಮತ್ತು ‘ದಮನಕ’ ಎಂಬ ಎರಡು ನರಿಗಳ ಕಥೆ. ನನ್ನದು ಕರಟಕನ ಪಾತ್ರ. ಕಾಡಿನಲ್ಲಿ ಸಿಂಹ ರಾಜನಾಗಿರುತ್ತಾನೆ. ಅವನಿಗೆ ತಲೆ ಕೆಡಿಸುವುದು ನಮ್ಮ ಕೆಲಸ. ಒಂದು ಮುದಿ ಎತ್ತು ಕಾಡಿಗೆ ಬಂದಿರುತ್ತದೆ. ಅದಕ್ಕೆ ಉಬ್ಬಿಸಿ, ನಂಬಿಸಿ ಮೋಸ ಮಾಡುತ್ತೇವೆ. ಇಬ್ಬರು ಭಯಾನಕ ಕುತಂತ್ರಿಗಳ ಪಯಣವಿದು. ಕಳ್ಳತನವನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ರೀತಿಯ ಪಾತ್ರ.

- **ಈ ಸಿನಿಮಾ ನಿಮಗೆ ಏಕೆ ವಿಶೇಷ?**

‘ಟಗರು’ ಬಿಟ್ಟರೆ ಇತ್ತೀಚಿನ ಉಳಿದೆಲ್ಲ ಚಿತ್ರಗಳ ಪಾತ್ರಗಳಲ್ಲಿ ದಾಡಿ ಇತ್ತು. ಆದರೆ ಈ ಸಿನಿಮಾದಲ್ಲಿ ನನಗೆ ದಾಡಿ ಇಲ್ಲ. ‘ಇನ್‌ಸ್ಪೆಕ್ಟರ್ ವಿಕ್ರಂ’ ಸಮಯದ ಶಿವಣ್ಣ ಇಲ್ಲಿ ಕಾಣಿಸುತ್ತಾರೆ. ಪ್ರಭುದೇವ ಅವರ ಜೊತೆಗೆ ಮೊದಲ ಸಿನಿಮಾ. ಅವರದ್ದೇ ಕೋರಿಯೋಗ್ರಫಿ ಇದೆ. ಹೀಗಾಗಿ ಇಲ್ಲಿ ಮೂಮೆಂಟ್ಸ್ ಭಿನ್ನವಾಗಿವೆ. ತೂಕ ಇರುವಲ್ಲಿ ತುಳುಕಲ್ಲ, ಪ್ರಭುದೇವ ಬಹಳ ಒಳ್ಳೆಯ ವ್ಯಕ್ತಿ. ಬಹಳ ಅದ್ಭುತವಾಗಿ ಡ್ಯಾನ್ಸ್ ಕಲಿಸಿದರು.

- **ಈ ಸಿನಿಮಾದಿಂದ ಶಿವಣ್ಣ ಅಭಿಮಾನಿಗಳು ಏನು ನಿರೀಕ್ಷಿಸಬಹುದು?**

ಮನರಂಜನೆ ಇದೆ. ಅದರ ಹೊರತಾಗಿ ಏನು ತೆಗೆದುಕೊಂಡು ಹೋಗುತ್ತಿದ್ದೇವೆ ಎಂಬುದು ಮುಖ್ಯ. ‘ಜೋಗಿ’ಯಲ್ಲಿ ತಾಯಿಯ ಫೀಲ್, ‘ಟಗರು’ವಿನಲ್ಲಿ ನಾಯಕನ ಪಾತ್ರ, ‘ಮಫ್ತಿ’ಯಲ್ಲಿ ಬೈರತಿ ರಣಗಲ್‌ನ ಶಕ್ತಿ...ಹೀಗೆ ಪ್ರತಿ ಚಿತ್ರದಲ್ಲೂ ಒಂದೊಂದು ಫೀಲ್ ತೆಗೆದುಕೊಂಡು ಹೋಗಿದ್ದೇವೆ. ಇದರಲ್ಲಿ ಕಾಮಿಡಿ ಜೊತೆಗೆ ಕನ್ನಿಂಗ್ ಇರುವ ಕುತಂತ್ರಿಗಳ ಪಯಣ, ಊರು, ಅಲ್ಲಿನ ಮೌಲ್ಯಗಳನ್ನು ತೆಗೆದುಕೊಂಡು ಹೋಗುತ್ತಾರೆ. ನರಿ ಮುಖ ನೋಡಿದರೆ ಒಳ್ಳೆಯದು ಎನ್ನುತ್ತಾರೆ. ಒಳ್ಳೆಯ, ಕೆಟ್ಟ ಮುಖದ ನರಿಯನ್ನು ತೋರಿಸುವ ಇರುವ ಸಿನಿಮಾ.

- **ಬಹಳ ವರ್ಷದ ನಂತರ ರಗಡ್ ಲುಕ್‌ನಿಂದ ಆಚೆ ಬಂದಿರುವಿರಾ?**

ಹೌದು. ಮೊದಲೇ ಹೇಳಿದಂತೆ ಇದೊಂದು ಕನ್ನಿಂಗ್ ಪಾತ್ರ. ಹೀಗಾಗಿ ಇಲ್ಲಿ ರಗಡ್ ಇಲ್ಲ. ಒಂದು ರೀತಿಯಲ್ಲಿ ಕಾಮಿಡಿ ಲುಕ್‌ನಲ್ಲಿ ಕಾಣಿಸುತ್ತೇನೆ. ಹೀಗಾಗಿ ಈ ಪಾತ್ರ ಫ್ರೆಷ್ ಅನ್ನಿಸುತ್ತಿದೆ.

- **ಬಾಲಿವುಡ್‌ನಲ್ಲಿ ಸಿನಿಮಾ ಮಾಡುತ್ತಿದ್ದೀರಾ?**

ಬಾಲಿವುಡ್‌ನಿಂದ ಆಫರ್ ಬಂದಿದ್ದು ನಿಜ. ಆದರೆ ಯಾವುದೂ ಇನ್ನು ಅಂತಿಮವಾಗಿಲ್ಲ. ‘ಜೈಲರ್–2’ ಬಗ್ಗೆ ಮಾಹಿತಿ ಇಲ್ಲ. ಆದರೆ ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿದೆ. ಸದ್ಯ ‘ಬೈರತಿ ರಣಗಲ್’ ಚಿತ್ರೀಕರಣದಲ್ಲಿ ಮಗ್ನನಾಗಿರುವೆ.

ಸುದೀಪ್ ಸಾಥ್

ಈ ಚಿತ್ರದ ಪಾತ್ರಗಳ ಪರಿಚಯ ಮಾಡುವ ವಿಡಿಯೊವನ್ನು ಕಿಚ್ಚ ಸುದೀಪ್ ಬಿಡುಗಡೆ ಮಾಡಿದ್ದಾರೆ.

ಇದೇ ಸಂದರ್ಭದಲ್ಲಿ ಶಿವರಾಜ್‌ಕುಮಾರ್ ಅವರ ಜೊತೆಗಿನ ಒಡನಾಟವನ್ನು ನೆನಪಿಸಿಕೊಂಡ ಸುದೀಪ್, ‘ಶಿವಣ್ಣನ ಜೊತೆ ನಟನೆಯನ್ನೂ ಮಾಡಿದ್ದೇನೆ. ಅವರಿಗೆ ಆ್ಯಕ್ಷನ್ ಕಟ್ ಕೂಡಾ ಹೇಳಿದ್ದೇನೆ. ಪ್ರಭುದೇವ ಅವರು ನನಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಹರಿಕೃಷ್ಣ ಅವರು ನನ್ನ ಕೆಲವು ಸಿನಿಮಾಗಳಿಗೆ ಸಂಗೀತ ನೀಡಿದ್ದಾರೆ. ರಾಕ್‌ಲೈನ್ ಅವರೊಂದಿಗೆ ಸ್ನೇಹ, ಭಟ್ರ ಜೊತೆ ಸಲಿಗೆ. ಹೀಗಾಗಿ ‘ಕರಟಕ ದಮನಕ’ ಒಂದು ಫ್ಯಾಮಿಲಿ ಪ್ಯಾಕೇಜ್ ಸಿನಿಮಾ ಎಂದರೆ ತಪ್ಪಲ್ಲ. ಶಿವಣ್ಣ–ಪ್ರಭುದೇವ ಅವರು ಒಂದೇ ಫ್ರೇಮ್‌ನಲ್ಲಿ ಡ್ಯಾನ್ಸ್ ಮಾಡುವುದನ್ನು ನೋಡುವುದೇ ಅದ್ಭುತ. ಜೊತೆಗೆ ಇಬ್ಬರಲ್ಲೂ ಒಳ್ಳೆಯ ಕಾಮಿಡಿ ಟೈಮಿಂಗ್ ಇದೆ. ಇದೊಂದು ಬಹಳ ವಿರಳವಾದ ಕಾಂಬಿನೇಷನ್. ‘ಓಂ’ ಸಿನಿಮಾವನ್ನು ನಾನು ಮೊದಲ ವಾರದಲ್ಲೇ ಮೂರು ಬಾರಿ ನೋಡಿದ್ದೆ. ಈ ಸಿನಿಮಾ ಅಂದು ಗೇಮ್ ಚೇಂಜರ್ ಆಗಿತ್ತು. ‘ಸ್ಪರ್ಶ’ ಸಿನಿಮಾದ ಆಡಿಯೊ ಲಾಂಚ್ ಮಾಡಿದ್ದು ಶಿವಣ್ಣನೇ. ‘ವಿಲನ್’ನಲ್ಲಿ ಅವರೊಂದಿಗೆ ನಟನೆ ಮಾಡಲು ಅವಕಾಶ ಸಿಕ್ಕಿತ್ತು. ಅವರೊಬ್ಬರು ಮಜವಾದ, ಅದ್ಭುತವಾದ ವ್ಯಕ್ತಿ’ ಎಂದರು.

ಯೋಗರಾಜ್ ಭಟ್, ಸುದೀಪ್

‘ದೆವ್ವ’ದೊಂದಿಗೆ ಪ್ರಥಮ್ ಫಸ್ಟ್‌ನೈಟ್!

‘ಬಿಗ್ ಬಾಸ್’ ಖ್ಯಾತಿಯ ನಟ ಪ್ರಥಮ್ ನಾಯಕನಾಗಿ ಅಭಿನಯಿಸಿರುವ ‘ಫಸ್ಟ್‌ನೈಟ್ ವಿತ್ ದೆವ್ವ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪಿ.ವಿ.ಆರ್ ಸ್ವಾಮಿ ಗೂಗಾರೆದೊಡ್ಡಿ ನಿರ್ದೇಶನದ ಚಿತ್ರಕ್ಕೆ ನವೀನ್ ಬೀರಪ್ಪ ಬಂಡವಾಳ ಹೂಡಿದ್ದಾರೆ.

‘ಚಿತ್ರದಲ್ಲಿ ಮೊದಲು ಬರುವ ಸನ್ನಿವೇಶವೇ ಮದುವೆ ದೃಶ್ಯ. ಮದುವೆಯನ್ನು ಬಹಳ ಆಸೆಯಿಂದ ಆದ ಹುಡುಗನಿಗೆ ತನ್ನ ಮೊದಲರಾತ್ರಿ ನಡೆಯುತ್ತಿರುವುದು ದೆವ್ವದ ಜೊತೆಗೆ ಎಂದು ತಿಳಿದಾಗ ಏನೆಲ್ಲಾ ಆಗುತ್ತದೆ? ಎಂಬುದು ಚಿತ್ರದ ಕಥಾಸಾರಾಂಶ. ಈ ಚಿತ್ರದಲ್ಲಿ ನಗುವಿಗೆ ಬರವಿಲ್ಲ. ಹಾರರ್, ಕಾಮಿಡಿ, ಆ್ಯಕ್ಷನ್ ಹಾಗೂ ಸೆಂಟಿಮೆಂಟ್‌ಗಳ ಸಮ್ಮಿಲನ ಈ ಚಿತ್ರ’ ಎಂದರು ಪ್ರಥಮ್.

ನಿಖಿತ, ಜೀವಿತ ಹಾಗೂ ಸುಶ್ಮಿತ ಮೂವರು ನಾಯಕಿಯರು. ಹಿರಿಯ ನಟರಾದ ಶ್ರೀನಿವಾಸಮೂರ್ತಿ, ರಮೇಶ್ ಭಟ್, ಹರೀಶ್ ರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಅನೂಪ್, ಧನ್ಯಾ ‘ಹೈಡ್ ಆ್ಯಂಡ್ ಸೀಕ್’

ಅನೂಪ್, ಧನ್ಯಾ

ಅನೂಪ್ ರೇವಣ್ಣ ಹಾಗೂ ಧನ್ಯಾ ರಾಮ್‌ಕುಮಾರ್ ಜೋಡಿಯಾಗಿ ನಟಿಸಿರುವ ‘ಹೈಡ್ ಆ್ಯಂಡ್ ಸೀಕ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಮತ್ತು ಮಾಜಿ ಸಚಿವ ಎಚ್. ವಿಶ್ವನಾಥ್ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಸುನೇರಿ ಆರ್ಟ್ ಕ್ರಿಯೇಶನ್ಸ್ ಮೂಲಕ ಪುನೀತ್ ನಾಗರಾಜು ಹಾಗೂ ವಸಂತ್‌ರಾವ್ ಎಂ.ಕುಲಕರ್ಣಿ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಪುನೀತ್ ನಾಗರಾಜು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರ ಮಾರ್ಚ್ 15ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

‘ಕಿಡ್ನಾಪ್ ಕೂಡ ಹೇಗೆ ಒಂದು ಸಂಸ್ಥೆಯ ಮೂಲಕ ವ್ಯವಸ್ಥಿತವಾಗಿ ನಡೆಯುತ್ತದೆ ಎಂಬುದನ್ನು ಚಿತ್ರದಲ್ಲಿ ತೋರಿಸಿದ್ದೇವೆ. ಬೆಂಗಳೂರು, ಮಾಗಡಿ, ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಿಸಿದ್ದೇವೆ. ನಾಯಕನೇ ಕಿಡ್ನಾಪರ್ ಆಗಿದ್ದು, ಹೆಚ್ಚು ಮಾತನಾಡದ, ಯಾವುದನ್ನೂ ಮುಕ್ತವಾಗಿ ಹೇಳದ ಪಾತ್ರವಿದು’ ಎಂದು ನಿರ್ದೇಶಕ ಪುನೀತ್ ವಿವರಿಸಿದರು. ರಿಜೋ ಪಿ.ಜಾನ್ ಛಾಯಾಚಿತ್ರಗ್ರಹಣ, ಸ್ಯಾಂಡಿ ಅದಾನ್ಕಿ ಅವರ ಸಂಗೀತ ಸಂಯೋಜನೆ, ಮಧು ತುಂಬಕೆರೆ ಸಂಕಲನ ಈ ಚಿತ್ರಕ್ಕಿದೆ.

ಭಯ ಹುಟ್ಟಿಸುವ ‘ಕಬಂಧ’

ಕುಂಜಾರ ಫಿಲ್ಮ್ಸ್ ಲಾಂಛನದಲ್ಲಿ ನಿರ್ಮಾಣಗೊಂಡಿರುವ ‘ಕಬಂಧ’ ಚಿತ್ರ ಬಿಡುಗಡೆಗೆ ಸಿದ್ಧವಾಗುತ್ತಿದೆ. ಕೆಲವು ವರ್ಷಗಳ ಹಿಂದೆ ರಾಜ್ಯಾದ್ಯಂತ ಭಯಹುಟ್ಟಿಸಿದ್ದ ನೈಜ ಘಟನೆಯೊಂದನ್ನು ಆಧರಿಸಿರುವ ಈ ಚಿತ್ರವನ್ನು ಸತ್ಯನಾಥ್ ನಿರ್ದೇಶಿಸಿದ್ದಾರೆ.

ಪ್ರಸಾದ್ ವಸಿಷ್ಠ, ಪ್ರಿಯಾಂಕ ಮಲ್ಲಾದಿ ಮುಖ್ಯಭೂಮಿಕೆಯಲ್ಲಿದ್ದಾರೆ. ಸತ್ಯಜಿತ್ ಸಿದ್ಧಕಾಂತ್ ಛಾಯಾಚಿತ್ರಗ್ರಹಣ, ಸಾನಿತೇಜ್ ಸಂಗೀತ ಚಿತ್ರಕ್ಕಿದೆ. ದಾವಣಗೆರೆ, ತುಮಕೂರು ಮುಂತಾದೆಡೆಗಳಲ್ಲಿ ಚಿತ್ರೀಕರಣಗೊಂಡಿದೆ. ಕಿಶೋರ್ ಕುಮಾರ್, ಅವಿನಾಶ್, ನಿರ್ದೇಶಕ ಯೋಗರಾಜ್ ಭಟ್, ವಂದನ, ಪ್ರಶಾಂತ್ ಸಿದ್ಧಿ ಮುಂತಾದವರು ತಾರಾಗಣದಲ್ಲಿದ್ದಾರೆ.

ಪ್ರಿಯಾಂಕ, ಪ್ರಸಾದ್ ವಸಿಷ್ಠ

ಸಿನಿ ಸಮ್ಮಾನ ಎರಡನೇ ಆವೃತ್ತಿ

ಕಳೆದ ವರ್ಷ ಪ್ರಾರಂಭಗೊಂಡು ವ್ಯಾಪಕ ಪ್ರಶಂಸೆ ಪಡೆದ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಎರಡನೇ ಆವೃತ್ತಿಯೊಂದಿಗೆ ಮತ್ತೆ ಬಂದಿದೆ. 2023ನೇ ಸಾಲಿನಲ್ಲಿ ತೆರೆಕಂಡ ಚಿತ್ರಗಳ ನಾಮನಿರ್ದೇಶನ ಪ್ರಕ್ರಿಯೆ ಆರಂಭವಾಗಿದ್ದು, ನಿಮ್ಮ ಸಿನಿಮಾಗಳನ್ನು ನೋಂದಾಯಿಸಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ. ‘ಸಿನಿ ಸಮ್ಮಾನ’ ಕುರಿತಾದ ಇನ್ನಷ್ಟು ಮಾಹಿತಿಗಾಗಿ https://www.prajavani.net/cinesamman/season2 ನೋಡಿ.

2023ರ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಉದ್ಘಾಟನಾ ಸಮಾರಂಭದಲ್ಲಿ ಹರಿಪ್ರಿಯಾ, ವಸಿಷ್ಠ ಸಿಂಹ ನೃತ್ಯ ಪ್ರದರ್ಶನ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಐದು ಚಿತ್ರಗಳು ತೆರೆಗೆ

ಕಳೆದೊಂದು ತಿಂಗಳಿನಿಂದ ಸ್ಯಾಂಡಲ್‌ವುಡ್‌ನಲ್ಲಿ ವಾರಕ್ಕೆ ಆರೆಂಟು ಚಿತ್ರಗಳು ಬಿಡುಗಡೆಯಾಗುತ್ತಿದ್ದವು. ಈ ವಾರ ಆ ಸಂಖ್ಯೆ ತಗ್ಗಿದ್ದು ಐದು ಸಿನಿಮಾಗಳು ತೆರೆಗೆ ಬರುತ್ತಿವೆ.

ಸಂಯುಕ್ತ ಹೆಗ್ಡೆ

- **ಪುರುಷೋತ್ತಮನ ಪ್ರಸಂಗ:** ತುಳುನಾಡಿನ ಜನಪ್ರಿಯ ನಟ, ನಿರ್ದೇಶಕ ತೆಲಿಕೆದ ಬೊಳ್ಳಿ ದೇವದಾಸ್ ಕಾಪಿಕಾಡ್ ನಿರ್ದೇಶನದ ‘ಪುರುಷೋತ್ತಮನ ಪ್ರಸಂಗ’ ಇಂದು(ಮಾ.1) ತೆರೆ ಕಾಣುತ್ತಿದೆ. ರಾಷ್ಟ್ರಕೂಟ ಪಿಕ್ಚರ್ಸ್ ಲಾಂಛನದಲ್ಲಿ ವಿ.ರವಿ ಕುಮಾರ್ ನಿರ್ಮಿಸಿರುವ ಚಿತ್ರದಲ್ಲಿ ಅವರ ಪುತ್ರ ಅಜಯ್, ರಿಷಿಕಾ ನಾಯಕ್ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ‘ದುಬೈಗೆ ಹೋಗಲು ಪುರುಷೋತ್ತಮ ಏನೆಲ್ಲಾ ಮಾಡುತ್ತಾನೆ ಎಂಬುದನ್ನು ನಿರ್ದೇಶಕರು ಈ ಚಿತ್ರದಲ್ಲಿ ಹಾಸ್ಯದ ಮೂಲಕ ತೋರಿಸಿದ್ದಾರೆ’ ಎನ್ನುತ್ತಾರೆ ನಾಯಕ.
- **ಕ್ರೀಂ:** ‘ಕಿರಿಕ್ ಪಾರ್ಟಿ’ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಮಿಂಚಿದ ನಟಿ ಸಂಯುಕ್ತ ಹೆಗ್ಡೆ ನಟನೆಯ ‘ಕ್ರೀಂ’ ಚಿತ್ರ ಕೂಡ ಇಂದು ತೆರೆ ಕಾಣುತ್ತಿದೆ. ಪ್ರಮುಖ ಪಾತ್ರದಲ್ಲಿ ಅಗ್ನಿ ಶ್ರೀಧರ್ ನಟಿಸಿದ್ದು, ಡಿ.ಕೆ. ದೇವೇಂದ್ರ ನಿರ್ಮಿಸಿರುವ ಈ ಚಿತ್ರವನ್ನು ಅಭಿಷೇಕ್ ಬಸಂತ್ ನಿರ್ದೇಶಿಸಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಅಗ್ನಿ ಶ್ರೀಧರ್ ಬರೆದಿದ್ದಾರೆ. ಅಚ್ಯುತ್ ಕುಮಾರ್, ಅರುಣ್ ಸಾಗರ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.
- **ಜುಗಲ್ ಬಂದಿ:** ಕಾಂತಾರ ಖ್ಯಾತಿಯ ಮಾನಸಿ ಸುಧೀರ್, ಅರ್ಚನಾ ಕೊಟ್ಟಿಗೆ ಮುಖ್ಯಭೂಮಿಕೆಯಲ್ಲಿರುವ ‘ಜುಗಲ್ ಬಂದಿ’ ಇಂದು ತೆರೆ ಕಾಣುತ್ತಿದೆ. ದಿವಾಕರ್ ಡಿಂಡಿಮ ನಿರ್ಮಿಸಿ, ನಿರ್ದೇಶಿಸಿರುವ ಚಿತ್ರವಿದು. ಅಶ್ವಿನ್ ರಾವ್ ಪಲ್ಲಕ್ಕಿ, ಸಂತೋಷ್ ಆಶ್ರಯ್, ಯಶ್ ಶೆಟ್ಟಿ ತಾರಾಗಣದಲ್ಲಿದ್ದಾರೆ. ಪ್ರದ್ಯೋತ್ತನ್ ಸಂಗೀತ, ಪ್ರಸಾದ್ ಹೆಚ್ ಎಂ ಸಂಕಲನ ಚಿತ್ರಕ್ಕಿದೆ.
- **ನಮೋ ಭಾರತ್:** ದೇಶದ ಗಡಿ ಕಾಯುವ ಸೈನಿಕನ ಕಥೆ ಹೊಂದಿರುವ ‘ನಮೋ ಭಾರತ್’ ಚಿತ್ರ ತೆರೆಗೆ ಬರುತ್ತಿದೆ. ಈ ಚಿತ್ರವನ್ನು ಶ್ರೀ ಚೌಡೇಶ್ವರಿ ಫಿಲ್ಮ್ಸ್ ಮೂಲಕ ರಮೇಶ್ ಎಸ್. ಪರವಿನಾಯ್ಕರ್ ನಿರ್ಮಿಸಿ, ನಿರ್ದೇಶಿಸಿದ್ದಾರೆ. ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ಎ.ಟಿ. ರವೀಶ್ ಸಂಗೀತ, ಗೌರಿ ವೆಂಕಟೇಶ್ ಛಾಯಾಚಿತ್ರಗ್ರಹಣವಿದೆ. ಸೋನಾಲಿ ಪಂಡಿತ್, ಸುಷ್ಮಾ ರಾಜ್, ಭವ್ಯ ಮುಂತಾದವರು ಚಿತ್ರದಲ್ಲಿದ್ದಾರೆ.
- **ಛಾಯಾ:** ನ್ಯೂ ಗ್ಲೋಬಲ್ ಕ್ರಿಯೇಶನ್ಸ್ ಅಡಿಯಲ್ಲಿ ಶ್ರೀಮತಿ ನಂದ ಎಂ.ಆರ್. ಅವರು ನಿರ್ಮಿಸಿ, ನೃತ್ಯನಿರ್ದೇಶಕ ಜಗ್ಗು ಆ್ಯಕ್ಷನ್ ಕಟ್ ಹೇಳಿರುವ ‘ಛಾಯಾ’ ಇಂದು ತೆರೆ ಕಾಣುತ್ತಿದೆ. ಹಾರರ್ ಕಥೆಯುಳ್ಳ ಚಿತ್ರಕ್ಕೆ ಮಂಜು ಕವಿ ಅವರ ಸಾಹಿತ್ಯ ಮತ್ತು ಸಂಗೀತ ಸಂಯೋಜನೆಯಿದೆ. ವೀನಸ್ ನಾಗರಾಜ ಮೂರ್ತಿ ಛಾಯಾಚಿತ್ರಗ್ರಹಣ, ದುರ್ಗಾ ಪಿ.ಎಸ್.ಅವರ ಸಂಕಲನವಿದೆ.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001
Ph:+91-0821-2520512 (Off.), 2520803 (Fax)
Website: www.mmcri.karnataka.gov.in
E-mail: mmcrimysore@yahoo.com

ಸಂ.ಸರಬ/ವಿವ/392/2023-24 ಫೆಬ್ರವರಿ 19, 2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಒಂದು ವರ್ಷದ ಅವಧಿಗೆ ಶುಶ್ರೂಷಾಧಿಕಾರಿ ಮತ್ತು ವಿವಿಧ ತಂತ್ರಜ್ಞರ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸಲು ನೊಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿ: 29.02.2024 ರಿಂದ ಪಡೆಯಬಹುದಾಗಿದ್ದು, ದಿ: 14.03.2024 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್

DIPR/DDMYS/KSMCA/1197/2023-24

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ. ಇ. ಹೂರಕ ಕಟ್ಟಡ, ಕೆ. ಆರ್. ವೃತ್ತ, ಬೆಂಗಳೂರು – 560 001. ದೂರವಾಣಿ ಸಂಖ್ಯೆ : 080-2213 3370
ಇ-ಮೇಲ್ : eepwdbngdn@yahoo.com ವೆಬ್‌ಸೈಟ್ : www.kpwd.gov.in
E-portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 27/2023-24 ದಿನಾಂಕ : 27-02-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ದೇವನಹಳ್ಳಿ ಉಪ ವಿಭಾಗ, ಉಪ ವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ (ರೂ. 380.00 ಲಕ್ಷಗಳು) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 27-02-2024 ರಿಂದ. 2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 05-03-2024 ಸಂಜೆ 4.00 ಗಂಟೆಯವರೆಗೆ. 3) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ ದಿನಾಂಕ : 06-03-2024 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸುವಂತಹ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

ವಾಸಾಇ/ಲೋ.ಇ./3967/ವಾಸಂಘ/2023-24

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಹೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-01
ದೂರವಾಣಿ ಸಂಖ್ಯೆ: 080-22122856

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 10/2023-24
ದಿನಾಂಕ: 26.02.2024

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ-2000ರನ್ವಯ ಕೆಡಬ್ಲ್ಯೂ-1,2,3&4 ನಿಯಮಗಳಂತೆ ಬೆಂಗಳೂರಿನ ಕೋರಮಂಗಲದ ವಸತಿ ಗೃಹಗಳು, ಜೀವನ್ ಭೀಮಾನಗರದ ವಸತಿಗೃಹಗಳು, ಕೆ ಆರ್ ವೃತ್ತದ ಕಟ್ಟಡಗಳು, ಬೆಂಗಳೂರು ಟಿಟಿ ಸಿವಿಲ್ ಕೋರ್ಟ್ ಕಟ್ಟಡಗಳು, ತಿಮ್ಮೇನಹಳ್ಳಿ ವಸತಿಗೃಹಗಳು, ಸಿಎಂಎಂ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು ವಿಲ್ಸನ್ ಗಾರ್ಡನ್ ನಲ್ಲಿರುವ ವಸತಿಗೃಹಗಳು, ಬೆಂಗಳೂರಿನ ಕಾವಲ್ ಬೈರಸಂದ್ರ ವಸತಿಗೃಹದ ಕಾಮಗಾರಿಗಳಿಂದ (ಮೀಸಲಾತಿ ಹಂಚಿಕೆ ಕ್ರ ಸಂ: 1 ರಿಂದ 9 ರ ವರೆಗೆ ಪರಿಶಿಷ್ಟ ಜಾತಿ, ಕ್ರ ಸಂ: 10 ರಿಂದ 14 ನೇ ಕಾಮಗಾರಿಯನ್ನು ಪರಿಶಿಷ್ಟ ಪಂಗಡ, ಹಾಗೂ ಕ್ರ ಸಂ: 15 ರಿಂದ 61 ರ ವರೆಗೆ (ಇತರೆ) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿ/ಪಿಡಬ್ಲ್ಯೂಡಿಯಲ್ಲಿ ನೊಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರೋಸೆಸಿಂಗ್ ಶುಲ್ಕ ಮತ್ತು ಇಎಂಡಿ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ 26.02.2024 ರಿಂದ 04.03.2024 ರಂದು ಸಂಜೆ 4.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 04.03.2024 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ : 05.03.2024 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್ ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.

DIPR/CP/3972/Zen/2023-24

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ : 08182-222942, ಇ-ಮೇಲ್: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ: 33/2023-24 ದಿನಾಂಕ : 27.02.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೆಳಕಂಡ ಕಾಮಗಾರಿಗಳಿಗೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-1 ರನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾಗಿರುವ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಕೆ.ಪಿ.ಪಿ-ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಭದ್ರಾವತಿ ತಾಲ್ಲೂಕಿನ "3054-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ & 2059-ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ವೆಚ್ಚ, 2216- ವಸತಿ ಗೃಹಗಳ ದುರಸ್ತಿ/ನಿರ್ವಹಣೆ & 5054-03-337-0-07-154 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿ ಸರ್ಕಾರದಿಂದ ಒಟ್ಟು 06 ಕಾಮಗಾರಿಗಳಿಗೆ ಈ ಕೆಳಗಿನ ಕಾಮಗಾರಿಗಳನ್ನು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 50.97 ಲಕ್ಷ ಮತ್ತು ಕನಿಷ್ಠ ಮೊತ್ತ ರೂ. 3.99 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಠ ಮೊತ್ತ ರೂ. 1.02 ಲಕ್ಷ, & ಇ.ಎಂ.ಡಿ. ಕನಿಷ್ಠ ಮೊತ್ತ ರೂ. 0.118 ಲಕ್ಷ, ಸದರಿ ಕಾಮಗಾರಿಗೆ ಟೆಂಡರ್ ಅರ್ಜಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೀಡಲಾಗಿದೆ ಅದರಂತೆ.

ಆಸಕ್ತ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ಸೂಚನೆಗಳು) ಕ್ಲಾಸ್-1&2 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 27-02-2024 ರಿಂದ 05-03-2024 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 05-03-2024 ರ ಸಂಜೆ 5:00 ಗಂಟೆಯೊಳಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: 06-03-2024 ರಂದು ಸಂಜೆ 5.30 ಗಂಟೆಗೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 07-03-2024 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ಗಳ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿನ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ವಾಪಾಸಂಇ/ಶಿ/ಶಿ/240-02 ಡಿ/ಅ.ವ/2023-24

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ಪುರಸಭೆ ಕಾರ್ಯಾಲಯ, ಕಾರ್ಕಳ-574104, ಉಡುಪಿ ಜಿಲ್ಲೆ

ಕಛೇರಿ ಇ-ಮೇಲ್: ka.karkal.tmc@gmail.com ವೆಬ್‌ಸೈಟ್: www.karkaltown.mrc.gov.in
ಕಛೇರಿ ದೂರವಾಣಿ: 08258-235664, 08258-230292
ಕ್ರ. ಸಂ. ಕಾ.ಪು.ಸ.ಟ್ರಾ.ಎ.ಟ್ರೈ.ಮೆ.ಸಿ.ಆರ್: 5 : 2023-24 ದಿನಾಂಕ: 29-02-2024

ತಿದ್ದುಪಡಿ ಟೆಂಡರ್ ಪ್ರಕಟಣೆ

ಈ ಮೂಲಕ ಕಾರ್ಕಳ ಪುರಸಭೆಯು ತಿಳಿಯಪಡಿಸುವುದೇನೆಂದರೆ ದಿನಾಂಕ: 29.02.2024 ರಂದು ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ ಹಾಗೂ ಕರಾವಳಿ ಅಲೆ ದಿನ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಟೆಂಡರ್ ಪ್ರಕಟಣೆಯ ಕ್ರಮ ಸಂಖ್ಯೆ: 2 ರನ್ನು Supplying and Instalation of Shreder Machine ಎಂದು ಓದಿಕೊಳ್ಳತಕ್ಕದ್ದು.

ಸಹಿ/–ಮುಖ್ಯಾಧಿಕಾರಿ, ಪುರಸಭೆ, ಕಾರ್ಕಳ ಸಹಿ/–ಆಡಳಿತಾಧಿಕಾರಿ, ಪುರಸಭೆ, ಕಾರ್ಕಳ

1	All the piece and parcel of land measuring in Sy.No. 188 Hissa No. A2 of Kangrali K.H village, Belagavi city, measuring 15 guntas 03 ana, Bounded on: **East :** Sy.No 187, 189 **West :** Hindalaga Seeme **North :** Sy.No.190, 191 **South :** Kabaja Belagavi Seeme Google Map link: https://maps.app.goo.gl/nNgYtZZ1X5eYukqr5 Latitude and Longitude: 15°52'41.7"N 74°29'15.5"E	2,45,51,505/-	24,55,150/-	2,45,500/-	Clear Title by Court in order MISC No. 966/2023 and RTC stands in the name of Assistant Commissioner & Competent Authority, M/s. The Krantiveera Sangolli Rayanna Urban Co-Operative Credit Society
2	All the piece and parcel of land & red tiled building in CTS No. 3546 of Resildargalli, Belagavi city, measuring 528-43 sq.mtr (2000 Sq.ft house building & 3686 Aq.ft vacant space total 5686 sq.ft), Bounded on: **East :** Land of Sri Ghatagi & Appugol, CTS No 3545 wall **West :** CTS No. 3547 wall **North :** Bangi Passage **South :** Road Google Map link: https://maps.app.goo.gl/JYcKfgkv5kg4yBzx6 Latitude and Longitude: 15°51'43.3"N 74°30'42.3"E	2,41,65,500/-	24,16,550/-	2,41,700/-	
3	All the piece and parcel of land in Sy.No 188/C, CTS No. 2324, Kangrali K.H village, Hanuman Nagar, Belagavi City, measuring 443.04 Sq.ft (out of 9398.62 Sq.mtr) Bounded on: **East :** Re. Sy No.187 **West :** Road **North :** Re Sy.No.188/B **South :** Re Sy.No.188/D Google Map link: https://maps.app.goo.gl/Nog4s7bCy5dGwccZ8 Latitude and Longitude: 15°52'42.7"N 74°29'16.9"E	1,00,14,648/-	10,01,465/-	1,00,300/-	
4	All the piece and parcel of land in Re Sy.No 78/4, measuring 0-14 guntas of Ambadagatti Village, Kitturu Hobli, Kitturu Taluk (previously Bylahongala Taluk) Belagavi District. Bounded on: **East :** Land belonging to SathappaJavali **West :** Land belonging to ErappaKotagi **North :** By Government Road **South :** Land belonging to SathappaJavali Google Map link: https://maps.app.goo.gl/9LpJUtn9dXEMvAfF9 Latitude and Longitude: 15°37'55.2"N 74°45'10.9"E	8,75,000/-	87,500/-	8,750/-	
5	All the piece and parcel of land in Re Sy.No. 163/2, measuring 5 Acre 01 guntas of Tadasaluru Village, Murugodu Hobli, Savadatthi Taluk Belagavi District. Bounded on: **East :** Land of Sri Parameshwara Kattimani **West :** Land of Sri Basappa C Gowdra **North :** By Road **South :** By Road Google Map link: https://maps.app.goo.gl/NnzUJViU1ukRvmURA Latitude and Longitude: 15°55'28.0"N 74°54'14.3"E	1,40,70,000/-	14,07,000/-	1,40,700/-	
6	All the piece and parcel of land measuring 04 Acres 03 Guntas in Sy.No. 191/1+2K in Ambadagatti Village, Kitur Taluk (Previously named as Bylahongala Taluk), Belagavi District. Bounded on: **East :** Land belonging to Udaya Kalappa Pattara(Hittalu) **West :** Land belonging to gangayya Guruvaiah **North :** Land belonging to chidananda Pattara **South :** Land belonging to Rayappa Dasthikoppa Google Map link: https://maps.app.goo.gl/3vF74ythrwT85R3N6 Latitude and Longitude: 15°38'00.6"N 74°43'39.5"E	40,75,000/-	4,07,500/-	40,750/-	

Sl. No.	DETAILS OF THE PROPERTY	RESERVE PRICE (Rs.)	EMD (Rs.)	Bid Increase Value (Rs.)	Clear Title
7	All the Piece and Parcel of land measuring 03 Acres 14 Guntas in Sy.No 119/1 in K.K Koppa Village, Bagevadi Hobli, Belagavi Taluk, Belagavi District. Bounded on: **East :** Land belonging to Siddappa Somayya keshappagola **West :** Cart Track **North :** Land belonging to Chambappa Kalabhavi **South :** Land belonging to Somayya Kambi Google Map link: https://maps.app.goo.gl/bbQn7XuEWo74xkX9A Latitude and Longitude:15°46'34.5"N 74°34'60.0"E	26,80,000/-	2,68,000/-	26,800/-	Clear Title by Court in order MISC No. 557/2023 and RTC stands in the name of Assistant Commissioner & Competent Authority, M/s. The Krantiveera Sangolli Rayanna Urban Co-Operative Credit Society
8	All the Piece and Parcel of land measuring 01 acres 25 Guntas in Sy.No 10/1A/1 in Ankalagi Village, Bagevadi Hobli, Belagavi District. Bounded on: **East :** Property belonging to Shivappa Jakkati **West :** Property belonging to Portdhar Avaroli **North :** Government Naala **South :** Property belonging to Shivappa Jakkati Google Map link: https://maps.app.goo.gl/SvQQqd89BTLuffPTA Latitude and Longitude:15°44'06.9"N 74°35'10.0"E	16,25,000/-	1,62,500/-	16,250/-	
9	All the Piece and Parcel of land measuring 01 Acres 29 Guntas in Sy.No. 115/1+5+6/2/3 in K.K Koppa Village, Belagavi Taluk, Belagavi District, Bounded on: **East :** Land belonging to Suresh Dotre **West :** Land belonging to Bassu Bavantha Godala Kundaragi **North :** Land belonging to Balappa Chandrappa Godala Kundaragi **South :** Land belonging to Neelakanta Godala Kundaragi Google Map link: https://maps.app.goo.gl/XF6RpfTu6UkBENi96 Latitude and Longitude: 15°46'40.7"N 74°35'16.5"E	17,25,000/-	1,72,500/-	17,250/-	
10	All the piece and parcel of land in Re Sy. No. 237/4 of Chikkalagudda village, Sankewara Hobli, Hukkeri Taluk, Belagavi District measuring 1 Acre 34 guntas Bounded on: **East :** Water pond **West :** By NH-4 Road **North :** Land of Paras Bharamappa Gadi **South :** Land of Tayavva Shankar Karasutti Google Map link: https://maps.app.goo.gl/pjCjBLxUVYJdkFE87 Latitude and Longitude: 16°11'08.2"N 74°31'11.2"E	55,50,000/-	5,55,000/-	55,500/-	Clear Title by Court in order MISC No.965/ 2023 and RTC stands in the name of Assistant Commissioner & Competent Authority, M/s. The Krantiveera Sangolli Rayanna Urban Co-Operative Credit Society
11	All the piece and parcel of agricultural land bearing R.S.No. 633 of Belagavi Village, Belagavi Taluk, Belagavi District totally measuring 03 acres 04 guntas 11.81 guntas, bounded as stated below: **East :** R.S. No.637 **West :** National High Way Service Road **North :** R.S.No.634 **South :** R.S.No.622 Google Map link: https://maps.app.goo.gl/Z7YRsNHBt47zKnmj7 Latitude and Longitude: 15°50'26.5"N 74°32'35.1"E	7,75,00,000/-	77,50,000/-	7,75,000/-	Clear Title by Court in order MISC No. 209/2023

ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ ಹಾಗೂ ಸ್ಥಳ	ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಇ.ಎಂ.ಡಿ ಸಲ್ಲಿಸುವಿಕೆ	ಇ–ಹರಾಜಿನ ದಿನಾಂಕ ಮತ್ತು ಸಮಯ
2ನೇ ಏಪ್ರಿಲ್ 2024, ಮಧ್ಯಾಹ್ನ 3.00 ರಿಂದ 4.00 ಗಂಟೆವರೆಗೆ ಸ್ಥಳ: ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು – 560001	3ನೇ ಏಪ್ರಿಲ್ 2024 ರ ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆವರೆಗೆ	4ನೇ ಏಪ್ರಿಲ್ 2024 ರ ಸಂಜೆ 5.00 ಗಂಟೆಯೊಳಗೆ	5ನೇ ಏಪ್ರಿಲ್ 2024 ರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆವರೆಗೆ

For Registration & Online Auction, you can login to: **https://kppp.karnataka.gov.in (Helpdesk No: 080 - 46010000, 080 - 68948777).** The interested bidders who require auction related information can contact **Joint Secretary, Office of the Special Officer & Competent Authority,** 3rd Floor, Podium Block, Visveswariah Towers, Dr. Ambedkar Veedhi, Bengaluru - 560001, e-mail ID: **splocaeauction@gmail.com** or Contact Mobile No: **8217203930.**

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 28–02–2024 ವಾಸಾಸಂಇ/ವಾ.ಪ್ರ/3957/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಶೈಕ್ಷಣಿಕವಾಗಿ ತತ್ವಜ್ಞಾನಿ ಆಗುವುದು ಸುಲಭ, ಆದರೆ ಜೀವನದಲ್ಲಿ ತತ್ವಜ್ಞಾನಿ ಆಗುವುದು ಅತ್ಯಂತ ಕಷ್ಟ.

–ಆ್ಯಂಟನ್ ಚೆಕೊವ್

ಬಾಹ್ಯಾಕಾಶ ವಲಯದಲ್ಲಿ ಎಫ್‌ಡಿಐ ಮಹತ್ವಾಕಾಂಕ್ಷೆಗೆ ಪೂರಕವಾದ ತೀರ್ಮಾನ

ದೇಶದ ಬಾಹ್ಯಾಕಾಶ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ತೀರ್ಮಾನ ಕೈಗೊಂಡಿರುವುದು ಸ್ವಾಗತಾರ್ಹ ಹೆಜ್ಜೆ. ಇದು ಈಚಿನ ದಿನಗಳಲ್ಲಿ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ನೀತಿಯ ಸಹಜ ಫಲ. ಉಪಗ್ರಹ ತಯಾರಿಕೆ, ಉಪಗ್ರಹ ನಿರ್ವಹಣೆ ಹಾಗೂ ಉಪಗ್ರಹ ದತ್ತಾಂಶಕ್ಕೆ ಸಂಬಂಧಿಸಿದ ಉತ್ಪನ್ನಗಳ ವಲಯದಲ್ಲಿ ಶೇ 74ರಷ್ಟು ವಿದೇಶಿ ಬಂಡವಾಳದ ನೇರ ಹೂಡಿಕೆಗೆ ಹೊಸ ನೀತಿಯು ಅವಕಾಶ ಕಲ್ಪಿಸುತ್ತದೆ. ಉಪಗ್ರಹ ಉಡಾವಣಾ ವಾಹನಗಳ ವಲಯದಲ್ಲಿ ಶೇ 49ರಷ್ಟು ವಿದೇಶಿ ನೇರ ಬಂಡವಾಳಕ್ಕೆ ಹಾಗೂ ಉಪಗ್ರಹ ವಲಯದ ಬಿಡಿಭಾಗಗಳ ತಯಾರಿಕೆಯಲ್ಲಿ ಶೇ 100ರವರೆಗೆ ಎಫ್‌ಡಿಐಗೆ ಇದು ಅವಕಾಶ ನೀಡುತ್ತದೆ. ಬಾಹ್ಯಾಕಾಶ ವಲಯದಲ್ಲಿ ಖಾಸಗಿ ಕಂಪನಿಗಳಿಗೆ ಅವಕಾಶ ಕಲ್ಪಿಸಿದ ಸುಧಾರಣಾ ಕ್ರಮಗಳ ಮುಂದುವರಿದ ಭಾಗ ಇದು. ಅಲ್ಲದೆ, ಇದು ಈ ವಲಯದಲ್ಲಿ ಸರ್ಕಾರದ ಹಿಡಿತವನ್ನು ತಗ್ಗಿಸುವ ಒಂದು ಕ್ರಮವೂ ಹೌದು. 2023ರ ಭಾರತೀಯ ಬಾಹ್ಯಾಕಾಶ ನೀತಿಯು 'ಬಾಹ್ಯಾಕಾಶ ವಲಯದಲ್ಲಿ ವಾಣಿಜ್ಯಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ' ಪ್ರಸ್ತಾವ ಹೊಂದಿದೆ ಹಾಗೂ ಆ ನೀತಿಯು ಬಾಹ್ಯಾಕಾಶಕ್ಕೆ ಸಂಬಂಧಿಸಿದ ಆರ್ಥಿಕ ಚಟುವಟಿಕೆಗಳಲ್ಲಿ ಖಾಸಗಿ ವಲಯವನ್ನು ಮತ್ತಷ್ಟು ಪಾಲುದಾರ ಎಂದು ಗುರುತಿಸುತ್ತದೆ. ನೀತಿಯ ಅನುಷ್ಠಾನಕ್ಕೆ ಶಾಸನಾತ್ಮಕವಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತಾವನೆಗೆ ಒಂದೇ ಕಡೆಯಲ್ಲಿ ಅನುಮೋದನೆ ನೀಡಲು ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನ ಮತ್ತು ದೃಢೀಕರಣ ಕೇಂದ್ರದ ಪರಿಕಲ್ಪನೆಯನ್ನು ರೂಪಿಸಲಾಗಿದೆ.

ಯುದ್ಧತಂತ್ರಗಳ ದೃಷ್ಟಿಯಿಂದಲೂ ಮಹತ್ವದ್ದಾಗಿರುವ ಕೆಲವು ವಲಯಗಳಲ್ಲಿ ದೇಶವು ದೊಡ್ಡ ಶಕ್ತಿಯಾಗಿ ಹೊರಹೊಮ್ಮಲು ಇದು ನೆರವಾಗಬಲ್ಲದು

ಹೊಸ ನೀತಿಯು ಬಾಹ್ಯಾಕಾಶ ವಲಯಕ್ಕೆ ಹೊಸ ತಂತ್ರಜ್ಞಾನ ಹಾಗೂ ಹೊಸ ಬಂಡವಾಳವನ್ನು ಆಕರ್ಷಿಸುವ ನಿರೀಕ್ಷೆ ಇದೆ. ಈ ವಲಯವು ಹೆಚ್ಚಿನ ಬಂಡವಾಳವನ್ನು ಬಯಸುವಂಥದ್ದು ಹಾಗೂ ಇಲ್ಲಿಗೆ ಅಗತ್ಯವಿರುವ ತಂತ್ರಜ್ಞಾನಗಳು ಬಹಳ ಸಂಕೀರ್ಣವಾದವೂ ಹೌದು. ದೇಶದ ಬಾಹ್ಯಾಕಾಶ ಚಟುವಟಿಕೆಗಳಲ್ಲಿ ಜಗತ್ತಿನ ಪ್ರಮುಖ ಕಂಪನಿಗಳು ತೊಡಗಿಸಿಕೊಳ್ಳಬೇಕು ಎಂಬುದು ಈ ನೀತಿಯ ಉದ್ದೇಶ. ಅಂದರೆ, ದೊಡ್ಡ ಹಾಗೂ ಸಣ್ಣ ಕಂಪನಿಗಳು, ಹೂಡಿಕೆದಾರರು, ತಂತ್ರಜ್ಞಾನ ಅಭಿವೃದ್ಧಿಪಡಿಸುವವರು ಇಲ್ಲಿಗೆ ಬರಬೇಕು ಎಂಬುದು ನೀತಿಯ ಅನುಷ್ಠಾನದ ಹಿಂದಿನ ಬಯಕೆ. ಉಪಗ್ರಹಗಳ ಉಡ್ಡಯನಕ್ಕೆ ಬಳಸುವ ವಾಹನಗಳ ತಯಾರಿಕೆ ಹಾಗೂ ಆ ವಾಹನಗಳ ಬಿಡಿಭಾಗಗಳ ತಯಾರಿಕೆಯು ಇನ್ನು ಮುಂದೆ ದೇಶದಲ್ಲಿ ಹೆಚ್ಚು ಚುರುಕು ಪಡೆದುಕೊಳ್ಳಬಹುದು ಎಂಬ ನಿರೀಕ್ಷೆ ಇದೆ. ಈ ವಲಯದ ಕಂಪನಿಗಳು ಇನ್ನು ಮುಂದೆ ವಿದೇಶಿ ಬಂಡವಾಳವನ್ನು ಪಡೆಯಲು ಸಾಧ್ಯವಾಗುತ್ತದೆ. ಅದನ್ನು ಬಳಸಿ ತಮ್ಮ ತಯಾರಿಕಾ ಸಾಮರ್ಥ್ಯವನ್ನು ಹೆಚ್ಚುಮಾಡಿಕೊಳ್ಳಲು ಅವಕಾಶ ಇರುತ್ತದೆ. ಉಡ್ಡಯನ ವಾಹನ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಶೇ 49ಕ್ಕೆ ಮಿತಿಗೊಳಿಸಿರುವುದು, ವಿದೇಶಿ ಹೂಡಿಕೆ ಆಕರ್ಷಿಸುವ ಅಗತ್ಯ ಹಾಗೂ ದೇಶದ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಅಗತ್ಯವನ್ನು ಬಿಂಬಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ. ಈ ಪ್ರಮಾಣದ ವಿದೇಶಿ ನೇರ ಬಂಡವಾಳದಿಂದ ದೇಶದ ಕಂಪನಿಗಳು ನಿರ್ಣಯ ಕೈಗೊಳ್ಳುವ ವಿಚಾರದಲ್ಲಿ ಸ್ವಾತಂತ್ರ್ಯ ಹೊಂದಿರುವುದು ಸಾಧ್ಯವಾಗುತ್ತದೆ; ಅದರ ಜೊತೆಯಲ್ಲೇ, ಕಂಪನಿಗಳಿಗೆ ವಿದೇಶಿ ಹೂಡಿಕೆ, ವಿದೇಶಿ ತಂತ್ರಜ್ಞಾನ ಹಾಗೂ ವಿದೇಶಿ ಕಂಪನಿಗಳ ಪರಿಣತಿಯ ನೆರವು ಪಡೆಯುವ ಅವಕಾಶ ಸಿಗುತ್ತದೆ.

ಜಾಗತಿಕ ಮಟ್ಟದಲ್ಲಿ ಬಾಹ್ಯಾಕಾಶ ಚಟುವಟಿಕೆಗಳ ಸುತ್ತ ನಿರ್ಮಾಣ ಆಗಿರುವ ಮಾರುಕಟ್ಟೆಯಲ್ಲಿ ಭಾರತದ ಪಾಲು ಈಗ ಶೇಕಡ 2ರಷ್ಟು ಇದೆ. ಇದನ್ನು 2032ರ ಸುಮಾರಿಗೆ ಐದು ಪಟ್ಟು ಹೆಚ್ಚು ಮಾಡಬೇಕು ಎಂಬ ಗುರಿಯನ್ನು ಕೇಂದ್ರವು ಹೊಂದಿದೆ. ಈ ಗುರಿಗೆ ಅನುಗುಣವಾಗಿ, ಈ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಬಾಹ್ಯಾಕಾಶ ಚಟುವಟಿಕೆಗಳ ಸುತ್ತಲಿನ ಆರ್ಥಿಕ ವ್ಯವಸ್ಥೆಯು ಆ ಹೊತ್ತಿಗೆ 47.3 ಬಿಲಿಯನ್ ಡಾಲರ್ (ಅಂದಾಜು ₹ 3.92 ಲಕ್ಷ ಕೋಟಿ) ಆಗಲಿದೆ ಎಂಬ ನಿರೀಕ್ಷೆ ಇದೆ. ಕೇಂದ್ರವು ಈಗ ಕೈಗೊಂಡಿರುವ ತೀರ್ಮಾನವನ್ನು ಉದ್ಯಮ ವಲಯವು ಸ್ವಾಗತಿಸಿದೆ. ಅಲ್ಲದೆ, ಮುಂದಿನ ಕೆಲವು ವರ್ಷಗಳಲ್ಲಿ ಈ ತೀರ್ಮಾನದ ಕಾರಣದಿಂದಾಗಿ ಹೊಸದಾಗಿ ₹ 2 ಲಕ್ಷ ಕೋಟಿಯಷ್ಟು ಬಂಡವಾಳ ಹರಿದುಬರಬಹುದು ಎಂದು ಅಂದಾಜು ಮಾಡಿದೆ. ಕೆಲವು ವಲಯಗಳಲ್ಲಿ ಶೇ 74ರಷ್ಟು ಮಾತ್ರ ಎಫ್‌ಡಿಐ ಹೂಡಿಕೆಗೆ ಅವಕಾಶ ಕಲ್ಪಿಸಿರುವುದು ಜಾಗತಿಕ ಬಂಡವಾಳ ಆಕರ್ಷಣೆಗೆ ಸಹಾಯವಾಗುವುದಿಲ್ಲ ಎಂಬ ಅಭಿಪ್ರಾಯ ಒಂದೆಡೆ ಇದೆ. ಅದೇನೇ ಇದ್ದರೂ, ಕೇಂದ್ರವು ತೆಗೆದುಕೊಂಡಿರುವ ತೀರ್ಮಾನದ ವಿಚಾರವಾಗಿ ಒಟ್ಟಾರೆ ಅಭಿಪ್ರಾಯವು ಸಕಾರಾತ್ಮಕವಾಗಿಯೇ ಇದೆ. ಈ ತೀರ್ಮಾನವು ವಾಣಿಜ್ಯ ಉದ್ದೇಶಗಳನ್ನು ಮಾತ್ರ ಗಮನದಲ್ಲಿ ಇರಿಸಿಕೊಂಡಿದೆ ಎಂದು ಭಾವಿಸಬೇಕಿಲ್ಲ. ಯುದ್ಧತಂತ್ರಗಳ ದೃಷ್ಟಿಯಿಂದಲೂ ಮಹತ್ವದ್ದಾಗಿರುವ ಕೆಲವು ವಲಯಗಳಲ್ಲಿ ದೇಶವು ದೊಡ್ಡ ಶಕ್ತಿಯಾಗಿ ಹೊರಹೊಮ್ಮಲು ಇದು ನೆರವಾಗಬಲ್ಲದು. ಮುಂದಿನ ಕೆಲವು ವರ್ಷಗಳವರೆಗೆ ಭಾರತವು ಮಹತ್ವಾಕಾಂಕ್ಷೆಯ ಹಲವು ಬಾಹ್ಯಾಕಾಶ ಯೋಜನೆಗಳನ್ನು ಹಮ್ಮಿಕೊಂಡಿದೆ. ಆ ಯೋಜನೆಗಳಿಗೆ ಬೆಂಬಲವಾಗಿ ನಿಲ್ಲುವ ನೀತಿಗಳು ಇಡೀ ವಲಯದ ಶಕ್ತಿಯನ್ನು ಹೆಚ್ಚಿಸುತ್ತವೆ.

ದಿನದ ಟ್ವೀಟ್

ಯಾವುದೆಂಬುದು ಸ್ಪಷ್ಟವಾಗಲಿ

ಹತ್ತು ವರ್ಷಗಳ ಸುದೀರ್ಘ ವನವಾಸದ ಬಳಿಕ ಹಿಂದುಳಿದ ವರ್ಗಗಳ ಆಯೋಗದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವೀಕರಿಸಿರುವ ವರದಿಯ ಸ್ವರೂಪ ಏನೆಂಬುದು ಮೊದಲು ನಿರ್ಧಾರ ಆಗಬೇಕಿದೆ. ಇದು ಜಾತಿಗಣತಿಯೋ? ಶೈಕ್ಷಣಿಕ ಸಮೀಕ್ಷೆಯೋ? ಅಥವಾ ಆರ್ಥಿಕ ಸಮೀಕ್ಷೆಯೋ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು.

ಸುನಿಲ್ ಕುಮಾರ್, ಬಿಜೆಪಿ ಶಾಸಕ

ಕಿಡಿನುಡಿ

ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ, ಗುಜರಾತ್‌ನಿಂದ ತೆರಿಗೆ ಸಂಗ್ರಹವನ್ನೇ ಮಾಡಬೇಡಿ ಅಥವಾ ನಮ್ಮ ತೆರಿಗೆಯಲ್ಲಿ ಶೇ 50 ಪಾಲು ನಮಗೆ ಕೊಡಿ ಎಂದು ಕೇಳಿದ್ದರು. ಈಗ ನಾವು ನಮ್ಮ ಪಾಲಿನ ತೆರಿಗೆ ಕೇಳಿದರೆ ಒಕ್ಕೂಟ ವ್ಯವಸ್ಥೆಗೆ ವಿರುದ್ಧ ಎನ್ನುತ್ತಾರೆ. ಇದ್ಯಾವ ಸೀಮೆಯ ನ್ಯಾಯ? #ನಮ್ಮಬಜೆಟ್2024

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಸೋಮವಾರ, 1-3-1999

• ರಸ್ತೆ ಅಪಘಾತ: 12 ಜನರ ಸಾವು

ಸಂಕೇಶ್ವರ, ಫೆ. 28– ಬೆಳಗಾವಿ– ಚಿಕ್ಕೋಡಿ ರಸ್ತೆಯಲ್ಲಿ ಬೋರಗಲ್ ಬಳಿ ಇಂದು ಬೆಳಿಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 12 ಜನರು ಸತ್ತು ಇತರ ಐವರು ಗಾಯಗೊಂಡರು.

ಮಹಾರಾಷ್ಟ್ರದವರಾದ ಈ ಕೂಲಿಕಾರರು ಡಂಪರ್‌ವೊಂದರಲ್ಲಿ ಚಿಕ್ಕೋಡಿ ರಸ್ತೆಯಲ್ಲಿನ ಅಮ್ಮಣಗಿಯ ರಸ್ತೆ ಡಾಂಬರೀಕರಣಕ್ಕೆ ಹೊರಟಿದ್ದರು. ಎದುರಿನಿಂದ ಬರುತ್ತಿದ್ದ ಜಿಲ್ಲಾ ಪಂಚಾಯಿತಿ ಎಂಜಿನಿಯರಿಂಗ್ ಇಲಾಖೆಯ ಲಾರಿಯೊಂದಕ್ಕೆ ಡಂಪರ್ ಡಿಕ್ಕಿ ಹೊಡೆದು ಉರುಳಿ ಬಿತ್ತು. ಕುದಿಸಿದ ಡಾಂಬರಿನಲ್ಲಿ ಮಿಶ್ರ ಮಾಡಿದ ಜಲ್ಲಿ ಕಲ್ಲುಗಳನ್ನು ಡಂಪರ್‌ನಲ್ಲಿ ತುಂಬಲಾಗಿತ್ತು. ಅದರ ಮೇಲೆ ಮರದ ಹಲಗೆಗಳನ್ನಿಟ್ಟು ಕೂಲಿಕಾರರು ಕುಳಿತಿದ್ದರು. ಡಂಪರ್ ಉರುಳಿ ಬಿದ್ದ ಕೂಡಲೇ ಕೂಲಿಕಾರರು ನೆಲಕ್ಕುರುಳಿದರು. ಅವರ ಮೇಲೆ ಜಲ್ಲಿ ಕಲ್ಲುಗಳು ಬಿದ್ದವು.

• 'ಭಯದ ವಾತಾವರಣದಲ್ಲಿ ಅಲ್ಪಸಂಖ್ಯಾತರು'

ಬೆಂಗಳೂರು, ಫೆ. 28– ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಸೂಕ್ತ ರಕ್ಷಣೆ ನೀಡುವಲ್ಲಿ ವಿಫಲವಾಗಿರುವ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕು ಕಳೆದುಕೊಂಡಿದೆ ಎಂದು ಕಾಂಗ್ರೆಸ್ ಮುಖಂಡರು ಪ್ರತಿಪಾದಿಸಿದರು.

'ದಲಿತರು, ಅಲ್ಪಸಂಖ್ಯಾತರು ಭಯದ ವಾತಾವರಣದಲ್ಲಿ ಬದುಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಎಐಸಿಸಿ ಕಾರ್ಯದರ್ಶಿ ಗುಲಾಂ ನಬಿ ಆಜಾದ್, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ರಾಜೇಶ್ ಪೈಲಟ್, ಕೆಪಿಸಿಸಿ ಅಧ್ಯಕ್ಷ ಎಸ್.ಎಂ. ಕೃಷ್ಣ ಅವರು ಆತಂಕ ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 1-3-1974

• ಬೆಲೆ ಏರಿಕೆಯ ಗಾಯಕ್ಕೆ ಅರ್ಥ ಮಂತ್ರಿಯ ಕ್ರೂರ ಕರ ಪ್ರಹಾರ

ನವದೆಹಲಿ, ಫೆ. 28– ಅಗಾಧ ಬೆಲೆ ಏರಿಕೆಯಿಂದ ಈಗಾಗಲೇ ತತ್ತರಿಸುತ್ತಿರುವ ಶ್ರೀಸಾಮಾನ್ಯನು, ಕೇಂದ್ರ ಹಣಕಾಸು ಸಚಿವ ಶ್ರೀ ವೈ.ಬಿ. ಚವಾಣರು 74–75ನೇ ಸಾಲಿನ ಮುಂಗಡ ಪತ್ರದಲ್ಲಿ ಸೂಚಿಸಿರುವ 212 ಕೋಟಿ ರೂ.ಗಳ ಹೊಸ ತೆರಿಗೆಯ ಭಾರಿ ಪೆಟ್ಟಿಗೆ ಒಳಗಾಗಿದ್ದಾನೆ.

ಅರ್ಥ ಸಚಿವರು ಸೂಚಿಸಿರುವ ಹೊಸ ತೆರಿಗೆ ಸಲಹೆಗಳಿಂದಾಗಿ ಇನ್ನು ಮುಂದೆ ಬಟ್ಟೆ, ಅಂಚೆಕಾರ್ಡು, ಕವರು, ತಂತಿ, ಟೆಲಿಫೋನ್, ಸಿಗರೇಟು, ಕಾಗದ ಮೊದಲಾದ ದಿನನಿತ್ಯದ ಎಲ್ಲ ವಸ್ತುಗಳಿಗೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ. ಇಂದು ಸಂಸತ್ತಿನಲ್ಲಿ ಮಂಡಿಸಿದ ಮುಂಗಡ ಪತ್ರದಲ್ಲಿ ವಿಸ್ಕಿ, ಬ್ರಾಂದಿ, ಜಿನ್, ಮೋಟಾರ್ ವಾಹನಗಳು, ಸ್ಕೂಟರುಗಳು, ಟೆಲಿವಿಷನ್ ಸೆಟ್‌ಗಳು, ಸೂಪರ್‌ಫೈನ್, ಫೈನ್ ಹಾಗೂ ಮಧ್ಯಮ ದರ್ಜೆ ಬಟ್ಟೆ, ಏರ್ ಕಂಡೀಷನರುಗಳು, ರೆಫ್ರಿಜರೇಟರುಗಳು ಮೊದಲಾದವುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗಿದೆ.

ಹೊಸ ಪೀಳಿಗೆಯ ಸಲುವಾಗಿ ಕನ್ನಡ ಸಿನಿಮೋತ್ಸವಗಳು ನಿಯತವಾಗಿ ನಡೆಯಬೇಕು

ಸ್ಥಳೀಯ ಸಿನಿಮಾ ಸಂಸ್ಕೃತಿಗೆ ಬೇಕು ಆದ್ಯತೆ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ ನಡೆಯುತ್ತಿರುವ ಸಂದರ್ಭದಲ್ಲೇ ಕನ್ನಡ ವಾಕ್ಚಿತ್ರಕ್ಕೆ ತೊಂಬತ್ತು ವರ್ಷಗಳಾಗುತ್ತಿರುವುದು ಒಂದು ವಿಶೇಷ. ಇದು ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಸಿನಿಮಾ ಸಂಸ್ಕೃತಿಗಳನ್ನು ಒಟ್ಟಿಗೆ ನೆನಪಿಸುವ ಸಂದರ್ಭ. 'ಅಂತರ ರಾಷ್ಟ್ರೀಯ' ಎಂಬ ಆಕರ್ಷಣೆಯಲ್ಲಿ 'ಸ್ಥಳೀಯ'ವನ್ನು ಮರೆಯಬಾರದೆನ್ನುವ ಜಾಗೃತಿಯ ಸಂಕೇತವಾಗಿಯೂ ಈ ಸಂದರ್ಭವನ್ನು ಗಮನಿಸಬಹುದು. ಹಾಗೆ ನೋಡಿದರೆ, ನಾವು ಯಾವುದನ್ನು 'ಅಂತರ ರಾಷ್ಟ್ರೀಯ' ಎಂದು ಕರೆಯುತ್ತೇವೋ ಆ ಸಿನಿಮಾಗಳೆಲ್ಲ ಆಯಾ ದೇಶಗಳಲ್ಲಿ 'ಸ್ಥಳೀಯ'ವೇ ಆಗಿರುತ್ತವೆ. ಸ್ಥಳೀಯ ಸಿನಿಮಾಗಳೇ ಬೇರೆ ದೇಶದ 'ಉತ್ಸವ'ಗಳ ಭಾಗವಾದಾಗ 'ಅಂತರರಾಷ್ಟ್ರೀಯ' ಆಗುತ್ತವೆ!

ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುವ ಸಿನಿಮಾಗಳನ್ನು ಉತ್ತಮವಾದವುಗಳೆಂದು ಆಯ್ಕೆ ಮಾಡಲಾಗಿರುತ್ತದೆ. ಅಂದರೆ 'ಆಯ್ಕೆಯ ಮಾನದಂಡ'ದಲ್ಲಿ ಆ ಸಿನಿಮಾಗಳು ಆಯಾ ದೇಶದ ಪ್ರಾತಿನಿಧಿಕ ಕೃತಿಗಳಾಗಿರುತ್ತವೆ. ಆದರೆ ಆಯಾ ದೇಶಗಳ ಸಿನಿಮಾಗಳೆಲ್ಲ ಇದೇ ರೀತಿಯ ಗುಣಮಟ್ಟವನ್ನು ಹೊಂದಿರುತ್ತವೆಯೆಂದೇನೂ ಅಲ್ಲ, ಅಲ್ಲಿಯೂ ನಮ್ಮಲ್ಲಿ ಇರುವಂತೆ ಉತ್ತಮ ಹಾಗೂ ಉತ್ತಮವಲ್ಲದ ಸಿನಿಮಾಗಳೂ ಇರುತ್ತವೆ. ಅಷ್ಟೇಕೆ, ಚಿತ್ರೋತ್ಸವಕ್ಕೆ ಆಯ್ಕೆಯಾದ ಸಿನಿಮಾಗಳಲ್ಲಿ ಎಲ್ಲರ ಮೆಚ್ಚುಗೆಗೂ ಪಾತ್ರವಾಗದೆ ಇರುವ ಕೆಲವು ಸಿನಿಮಾಗಳೂ ಇರಬಹುದು.

ಇಷ್ಟಾಗಿಯೂ ಅಂತರರಾಷ್ಟ್ರೀಯ ಚಿತ್ರೋತ್ಸವಗಳು ವಿವಿಧ ದೇಶದ ಸಿನಿಮಾ ಮಾದರಿಗಳನ್ನಂತೂ ಪರಿಚಯಿಸುತ್ತವೆ. ಹೀಗೆ ಪರಿಚಯ ಮಾಡಿಕೊಳ್ಳುವುದು ಪ್ರೇಕ್ಷಕರ ಪ್ರತಿಷ್ಠೆಯ ವಿಷಯವಾಗಬಾರದು. ನಮ್ಮ ಕನ್ನಡ ಸಿನಿಮಾಗಳ ವೀಕ್ಷಣೆಯಂತೆಯೇ ಬೇರೆ ದೇಶದ ಸಿನಿಮಾಗಳನ್ನೂ ನೋಡುವ ಮನಃಸ್ಥಿತಿ ಮುಖ್ಯ. ಇಲ್ಲವಾದರೆ ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಕಾಣಿಸಿಕೊಳ್ಳುವುದು, ನೋಡುವುದು ಸಹಜ ಸಂಭ್ರಮವಾಗದೆ, ವ್ಯಕ್ತಿ ಪ್ರತಿಷ್ಠೆಯ ಭ್ರಮೆಗಳಿಗೂ ಕಾರಣವಾಗಬಹುದು.

ಕನ್ನಡದಂತೆಯೇ ಅಲ್ಲಿಯೂ ಒಂದು ಸಿನಿಮಾ ನೋಡುತ್ತೇವೆಂಬ ಸಹಜ ಸ್ವಭಾವವಿದ್ದರೆ ಮಾತ್ರ ವೀಕ್ಷಣೆ ಮತ್ತು ವಿಮರ್ಶೆಗೆ ಬೇಕಾದ 'ಪೂರ್ವಗ್ರಹ ಪ್ರತಿಷ್ಠೆ' ಇಲ್ಲದ ಮಾನಸಿಕತೆ ಸಾಧ್ಯವಾಗುತ್ತದೆ. 'ಸ್ಥಳೀಯ' ಮತ್ತು 'ಅಂತರ ರಾಷ್ಟ್ರೀಯ'ಗಳ ನೈಜ ಸಂಬಂಧ ಬೆಸೆಯುತ್ತದೆ.

ಜನಮಾಧ್ಯಮವಾಗಿರುವ ಸಿನಿಮಾದ ಸೃಷ್ಟಿ ಸ್ವರೂಪವೇ ವಿಶಿಷ್ಟವಾದುದು. ಸಿನಿಮಾ–ಒಂದು ಒಕ್ಕೂಟ ಕಲೆ (ಫೆಡರಲ್ ಆರ್ಟ್). ನಮ್ಮ ದೇಶದಲ್ಲಿ ಪ್ರತಿ ರಾಜ್ಯಕ್ಕೂ ತನ್ನದೇ ಆದ ಅಸ್ತಿತ್ವವಿದ್ದು, ಅವುಗಳೆಲ್ಲ ಒಂದಾಗಿ ಒಕ್ಕೂಟ ರಾಜ್ಯವಾದಂತೆ, ಸಿನಿಮಾವು ವಿವಿಧ ಕಲಾ ಪ್ರಕಾರಗಳೊಂದಾದ 'ಒಕ್ಕೂಟ ಕಲೆ'ಯಾಗಿದೆ. ಸಿನಿಮಾವು ಸಾಹಿತ್ಯ, ಸಂಗೀತ, ಛಾಯಾಗ್ರಹಣ, ಸಂಕಲನ, ಅಭಿನಯ, ಮೇಕಪ್, ವಸ್ತ್ರವಿನ್ಯಾಸ, ಕಲಾವಿನ್ಯಾಸ, ಅಗತ್ಯವಿದ್ದಾಗ ನೃತ್ಯ ಸಂಯೋಜನೆ ಮತ್ತು ಸಾಹಸ ಸಂಯೋಜನೆ- ಹೀಗೆ ವಿವಿಧ ಕಲಾ ಪ್ರಕಾರಗಳಿಗೆ ತಮ್ಮದೇ ಸ್ವತಂತ್ರ ಅಸ್ತಿತ್ವವಿದ್ದೂ ಸಿನಿಮಾ ಸೃಷ್ಟಿಯಲ್ಲಿ 'ನಿರ್ದೇಶನ'ದ ಆಶಯಕ್ಕನುಗುಣವಾಗಿ ಒಂದಾಗುತ್ತವೆ. ನಮ್ಮ ದೇಶಕ್ಕೆ ಅನ್ವಯಿಸುವ 'ವಿವಿಧತೆಯಲ್ಲಿ ಏಕತೆ' ಎಂಬ ಉಕ್ತಿಯು ಸಿನಿಮಾ ಸೃಷ್ಟಿಗೂ ಹೊಂದಿಕೊಳ್ಳುತ್ತದೆ.

ಶ್ರಮ ಮತ್ತು ಸೃಜನಶೀಲತೆ ಒಂದಾಗಿರುವುದು ಸಿನಿಮಾ ಸೃಷ್ಟಿಯ ಇನ್ನೊಂದು ವಿಶೇಷ. ಇಲ್ಲಿ ಲೈಟ್ ಬಾಯ್ಸ್, ಪ್ರೊಡಕ್ಷನ್ ಬಾಯ್ಸ್‌ನಂತಹ ಶ್ರಮಜೀವಿಗಳು ಇರುತ್ತಾರೆ. ಸೃಜನಶೀಲ ಕ್ಷೇತ್ರದವರೂ ಇರುತ್ತಾರೆ. ಶ್ರಮಜೀವಿಗಳ ಸಹಕಾರವಿಲ್ಲದೆ ಸೃಜನಶೀಲತೆ ಪೂರ್ಣಗೊಳ್ಳುವುದಿಲ್ಲ, ಅಂತೆಯೇ ಸಿನಿಮಾದಲ್ಲಿ ತಂತ್ರಜ್ಞಾನವೂ ಪ್ರಮುಖ ಪಾತ್ರ ವಹಿಸುತ್ತದೆ. ಹೀಗೆ ವೈರುಧ್ಯಗಳನ್ನು ಒಂದಾಗಿಸಿಕೊಂಡು ರೂಪುಗೊಳ್ಳುವ ಸಿನಿಮಾ, ಉದ್ಯಮದ ಒತ್ತಾಸೆಗಳನ್ನೂ ಒಳಗೊಂಡಿದೆ.

ನನ್ನ ದೃಷ್ಟಿಯಲ್ಲಿ ಸಿನಿಮಾ ಎನ್ನುವುದು ಒಂದು 'ಕಲೋದ್ಯಮ'. ಇದು ಕಲೆಯೂ ಹೌದು, ಬಂಡವಾಳ ತೊಡಗಿಸುವಿಕೆಯು ಅನಿವಾರ್ಯವಾದ್ದರಿಂದ 'ಉದ್ಯಮ'ವೂ ಹೌದು. ಉದ್ಯಮಕ್ಕೆ 'ಸಂಪಾದನೆ' ಮುಖ್ಯ, ಕಲೆಗೆ 'ಸಂವೇದನೆ' ಮುಖ್ಯ. ಸಂಪಾದನೆ ಮತ್ತು ಸಂವೇದನೆಗಳೊಂದಾಗುವ ಬಿಕ್ಕಟ್ಟನ್ನು ಎದುರಿಸಿ ಉತ್ತಮವಾದದ್ದನ್ನು ಕೊಡುವುದು ಒಂದು ಸವಾಲೂ ಹೌದು. ಕನ್ನಡ ಚಿತ್ರರಂಗವು ಈ ಬಿಕ್ಕಟ್ಟನ್ನು ಎದುರಿಸಿ ತನ್ನದೇ ಮಾದರಿಗಳ ಮೂಲಕ ಅಭಿವ್ಯಕ್ತಗೊಂಡಿದೆ.

ಉದ್ಯಮದ ಆಶಯಗಳು ಪ್ರಧಾನವಾದ 'ಮುಖ್ಯ ವಾಹಿನಿ' ಸಿನಿಮಾಗಳು ಕಲೆಗೆ ಜನಪ್ರಿಯ ಸ್ವರೂಪವನ್ನು ತಂದುಕೊಂಡರೆ, ಕಲೆಯ ಆಶಯವು ಪ್ರಧಾನವಾದ 'ಪ್ರಯೋಗಾತ್ಮಕ' ಸಿನಿಮಾಗಳು ಪರ್ಯಾಯ ಕಲಾವಿನ್ಯಾಸವನ್ನು ತೆರೆದಿಟ್ಟಿವೆ. ಎರಡೂ ಮಾದರಿಗಳು ನಮ್ಮ ಚಿತ್ರ ಜಗತ್ತನ್ನು ತಂತಮ್ಮ ವಿಧಾನದಲ್ಲಿ ಜೀವಂತವಾಗಿಟ್ಟಿವೆ.

ಕನ್ನಡವನ್ನೂ ಒಳಗೊಂಡಂತೆ ಜಾಗತಿಕ ಸಿನಿಮಾದ ಆರಂಭಿಕ ಕಥನಗಳು ಪುರಾಣಕಾವ್ಯ ಹಾಗೂ ಐತಿಹ್ಯಗಳನ್ನು ಒಳಗೊಂಡಿವೆ. ಇದಕ್ಕೆ ಹಾಲಿವುಡ್‌ನವರು ಕೊಟ್ಟ ಸಮರ್ಥನೆಯೆಂದರೆ, ಪುರಾಣ ಮೂಲ ಕಥನಗಳು 'ಸಾಬೀತಾದ ಸಾಮಗ್ರಿ' ಎಂಬುದು. ಈಗಾಗಲೇ ಜನಮಾನಸದಲ್ಲಿ ನೆಲೆಗೊಂಡ ಪುರಾಣ ಕಥನಗಳು ಜನಪ್ರಿಯವೂ ಲಾಭದಾಯಕವೂ ಆಗಿರುತ್ತವೆಯೆಂಬ ಭರವಸೆಯು ನಿರ್ಮಾಪಕರಲ್ಲಿತ್ತು.

1934ರಲ್ಲಿ ಬಿಡುಗಡೆಗೊಂಡ 'ಸತಿ ಸುಲೋಚನ'ದಿಂದ ಆರಂಭವಾದ ಕನ್ನಡ ವಾಕ್ಚಿತ್ರವು ಕಡೇಪಕ್ಷ ಕಾಲು ಶತಮಾನದವರೆಗೆ ಪುರಾಣ ಕಥನಗಳನ್ನೇ ಒಳಗೊಂಡಿದೆ. ಈ ಕಾಲು ಶತಮಾನದ ಕನ್ನಡ ಸಿನಿಮಾವು ಪುರಾಣ ಕಥನಗಳ 'ಪ್ರಧಾನ' ವಸ್ತುಗಳಿಗೆ ಬದಲಾಗಿ 'ಉಪಧಾರೆ'ಯ ಹಾದಿ ಹಿಡಿದದ್ದು ಅಧ್ಯಯನಶೀಲ ಆಯಾಮವಾಗಿದೆ. ಈಗ ಗಮನಿಸಿ: ರಾಮಾಯಣದಲ್ಲಿ ಕನ್ನಡದ ಮೊದಲ ವಾಕ್ಚಿತ್ರವು ಆಯ್ಕೆ ಮಾಡಿಕೊಂಡದ್ದು ರಾವಣನ ಮಗನಾದ ಇಂದ್ರಜಿತುವಿನ ಪತ್ನಿ ಸುಲೋಚನೆ ಕೇಂದ್ರಿತವಾದ ಕಥನವನ್ನು ಎಂಬುದೇ ಒಂದು ವಿಶೇಷ ಆರಂಭ. ಮುಂದಿನ ಬಹಳಷ್ಟು ಕನ್ನಡ ಸಿನಿಮಾಗಳು ರಾಮಾಯಣ ಮತ್ತು ಮಹಾಭಾರತದ ಪ್ರಧಾನಧಾರೆಗೆ ಬದಲಾಗಿ ಪುರಾಣಕಾವ್ಯ ಹಾಗೂ ಐತಿಹ್ಯಗಳ 'ಉಪಧಾರೆ'ಯ ವಸ್ತುಗಳನ್ನೇ ಒಳಗೊಂಡಿವೆ. ಈ ವ್ಯಾಖ್ಯಾನಕ್ಕೆ ಉದಾಹರಣೆಯಾಗಿ 1960ರೊಳಗಿನ ಕೆಲವು ಸಿನಿಮಾಗಳನ್ನು ಸಾಂಕೇತಿಕವಾಗಿ ಗಮನಿಸಬಹುದು. ಸತಿ ಸುಲೋಚನ, ಭಕ್ತಧ್ರುವ, ಚಿರಂಜೀವಿ, ಭಕ್ತಪ್ರಹ್ಲಾದ, ಹರಿಶ್ಚಂದ್ರ, ಭಕ್ತಕುಂಬಾರ, ಶ್ರೀಕೃಷ್ಣ, ಶಿವಪಾರ್ವತಿ, ಸಂತ ಸಕ್ಕು, ಹೇಮರೆಡ್ಡಿ ಮಲ್ಲಮ್ಮ, ಹರಿಭಕ್ತ, ರೇಣುಕಾ ಮಹಾತ್ಮೆ, ನಳದಮಯಂತಿ, ಮಹಾಕವಿ ಕಾಳಿದಾಸ, ಶ್ರೀಕೃಷ್ಣ ಲೀಲಾ, ಶ್ರೀರಾಮಾಂಜನೇಯ ಯುದ್ಧ, ಭೂಕೈಲಾಸ, ಕೃಷ್ಣ ಸುಧಾಮ, ಗುಣಸಾಗರಿ, ಶ್ರೀಕೃಷ್ಣ ಗಾರುಡಿ, ಬೇಡರ ಕಣ್ಣಪ್ಪ, ಭಕ್ತವಿಜಯ, ಓಹಿಲೇಶ್ವರ- ಹೀಗೆ ಅನೇಕ ಸಿನಿಮಾಗಳನ್ನು ಉದಾಹರಿಸಬಹುದು.

ಇನ್ನೊಂದು ವಿಶೇಷವೆಂದರೆ, ಈ ಕಾಲು ಶತಮಾನದ ಬಹುಪಾಲು ಸಿನಿಮಾಗಳಲ್ಲಿ 'ಭಕ್ತಿ'ಯೇ ಪ್ರಧಾನ ವಸ್ತು, ರಾಜಪ್ರಭುತ್ವ ಕೇಂದ್ರಿತವಾದ ಕನ್ನಡ ಸಿನಿಮಾಗಳು ಆಗ ಬರಲೇ ಇಲ್ಲ. ಬ್ರಿಟಿಷ್ ರಾಜರ ಎದುರು ನಮ್ಮ ರಾಜರ ಪ್ರಶಂಸೆ ಕಷ್ಟವಾಗಿ, ಜನಮನಕೇಂದ್ರಿತ ಭಕ್ತಿಯೇ ಮುಖ್ಯ ವಸ್ತುವಾಗಿರಬಹುದು. ಸ್ವಾತಂತ್ರ್ಯಾನಂತರದ ಆರಂಭದಲ್ಲಿ ಸ್ವಲ್ಪ ಕಾಲ ಅದೇ ಪರಂಪರೆ ಮುಂದುವರಿದು, ಪ್ರಜಾಪ್ರಭುತ್ವದ ಫಲವಾಗಿ ಪ್ರಜಾಕೇಂದ್ರಿತ ಸಾಮಾಜಿಕ ಸಿನಿಮಾಗಳು ಬರಲಾರಂಭಿಸಿದವು. ಆನಂತರ ನಮ್ಮ ಚಾರಿತ್ರಿಕ ಅಸ್ಮಿತೆಯ ಸಿನಿಮಾಗಳು ನಿರ್ಮಾಣಗೊಂಡಿವೆ. ಹೊಸ ಪ್ರಯೋಗಗಳು ಅಭಿವ್ಯಕ್ತಗೊಂಡಿವೆ.

ಎಲ್ಲಾ ದೇಶ ಭಾಷೆಗಳ ಸಿನಿಮಾಗಳಿಗೂ ಆಯಾ ದೇಶ-ಪ್ರದೇಶಗಳ ಸ್ಥಳೀಯ ಸನ್ನಿವೇಶದ ಪ್ರೇರಣೆ, ಪ್ರಭಾವಗಳ ಪಾತ್ರವೇ ಪ್ರಮುಖ ಎಂಬ ತಿಳಿವಳಿಕೆ ಮುಖ್ಯ. ಆಗ ಸ್ಥಳೀಯ ಕನ್ನಡ ಸಿನಿಮಾ ಕ್ಷೇತ್ರದ ವಿಕಾಸ ಮತ್ತು ಒಳಿತಿನ ಹಾದಿ ಅರ್ಥವಾಗುತ್ತದೆ.

ಎಪ್ಪತ್ತು-ಎಂಬತ್ತರ ದಶಕದಲ್ಲಿ ಪ್ರಯೋಗಾತ್ಮಕ ಚಿತ್ರಗಳನ್ನು ವೀಕ್ಷಿಸಲು ಬರುತ್ತಿದ್ದವರ ಸಂಖ್ಯೆ ಇವತ್ತು ಕ್ಷೀಣಿಸಿದೆ. ಪುಸ್ತಕಗಳ ವಾಚನಾಭಿರುಚಿ ಮೂಡಿಸುವಂತೆ ಸಿನಿಮಾಗಳ ವೀಕ್ಷಣಾಭಿರುಚಿಯನ್ನು ಮೂಡಿಸುವ ಕಾರ್ಯಕ್ರಮಗಳನ್ನು ಚಲನಚಿತ್ರ ಅಕಾಡೆಮಿ ಹಮ್ಮಿಕೊಳ್ಳಬೇಕು. ಸ್ಥಳೀಯ ಸಿನಿಮಾ ಪರಂಪರೆಯನ್ನು ಹೊಸ ಪೀಳಿಗೆಗೆ ಪರಿಚಯಿಸಲು ಕನ್ನಡ ಸಿನಿಮೋತ್ಸವಗಳು ನಿಯತವಾಗಿ ನಡೆಯಬೇಕು. ಭಾರತೀಯ ಸಿನಿಮೋತ್ಸವಗಳನ್ನು ಆಯೋಜಿಸಬೇಕು. ರಾಜ್ಯದ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ಚಿತ್ರಮಂದಿರಗಳನ್ನು ಸರ್ಕಾರವೇ ನಿರ್ಮಾಣ ಮಾಡಿ ಪ್ರದರ್ಶನ ಸಮಸ್ಯೆಯನ್ನು ಪರಿಹರಿಸಬೇಕು.

ಇವುಗಳ ಉಸ್ತುವಾರಿಯನ್ನೂ ಒಳಗೊಂಡಂತೆ ಕನ್ನಡ ಚಿತ್ರರಂಗದ ಅಭಿವೃದ್ಧಿಗಾಗಿ ದೇವರಾಜ ಅರಸು ಅವರ ಆಡಳಿತಾವಧಿಯಲ್ಲಿದ್ದ 'ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮ'ವನ್ನು ಮತ್ತೆ ಸ್ಥಾಪಿಸಬಹುದು. ಒಟ್ಟಾರೆ, ಸ್ಥಳೀಯ ಸಿನಿಮಾ ಸಂಸ್ಕೃತಿ ನಮ್ಮ ಆದ್ಯತೆಯಾಗಬೇಕು. ಅದಕ್ಕಾಗಿ ಸಮಾಲೋಚನೆ, ಚಿಂತನೆ, ಕ್ರಿಯಾಯೋಜನೆ ಅಗತ್ಯ.

ಚುರುಮುರಿ

ಆತ್ಮವೂ ಸಾಕ್ಷಿಯೂ..

• ಬಿ.ಎನ್. ಮಲ್ಲೇಶ್

'ಏನ್ರಲೆ ಹೊಸ ಸುದ್ದಿ?' ಹರಟೆಕಟ್ಟೇಲಿ ದುಬ್ಬೀರ ಚಾ ಕುಡಿಯುತ್ತ ಕೇಳಿದ.

'ಹೊಸ ಸುದ್ದಿನಾ? ಕರೆಂಟ್ ದರ ಇಳಿಕೆ, ಅಕ್ಕಿ ದರ ಏರಿಕೆ' ಎಂದ ತೆಪರೇಸಿ.

'ಕರೆಂಟ್ ನಮಿಗೆಲ್ಲ ಫ್ರೀ ಸಿಗ್ತಾ ಐತಿ, ಅದು ಬಿಡು, ಈ ಅಕ್ಕಿಗೇನಾತು ಅಂತ?'

'ಅಗಲಗಲ ಈರುಳ್ಳಿ ಒಂದೇ ಏನು ಏರೋದು, ನಾನೂ ಒಂದ್ಸಲ ಏರ್ತೀನಿ ಅಂತ ಅಕ್ಕಿನೂ ಏರಿಬೇಕು' ಗುಡ್ಡೆ ನಕ್ಕ.

'ಅದು ಬಿಡ್ರಲೆ, ಈಗ ಈ ಆತ್ಮಸಾಕ್ಷಿ ಅಂದ್ರೆ ಏನು?' ಕೊಟ್ರ ವಿಷಯ ಬದಲಿಸಿದ.

'ಅದಾ? ಆತ್ಮ ಒಪ್ಪೋ ತರ ನಡ್ಕಳೋದು'.

'ಮತ್ತೆ ಆತ್ಮ ಅಂದ್ರೇನು? ಎಲ್ಲಿರ್ತತಿ ಅದು? ನಾವು ಸತ್ತಾಗ ಮೇಲಿಂದ ನೋಡ್ತಿರ್ತತಿ ಅಂತಾರಲ್ಲ, ಅದಾ?'

'ಏನೋಪ್ಪ, ಮೋಸ್ಟ್ಲೀ ಅದೇ ಇರ್ಬೇಕು' ಗುಡ್ಡೆ ಗಡ್ಡ ಕೆರ್ಕಂಡ.

'ಅದ್ಕೆ ಸಾಕ್ಷಿ ಏನು? ಆತ್ಮನ ಯಾರು ನೋಡಿದಾರೆ?'

'ಲೇಯ್, ಆತ್ಮಾನ ಯಾರೂ ನೋಡೋಕಾಗಲ್ಲ, ಅದು ಅವರವರ ದೇಹದಲ್ಲಿರುತ್ತೆ, ಸತ್ತ ಮೇಲೆ ಮೇಲೋಗುತ್ತೆ' ದುಬ್ಬೀರ ರೇಗಿದ.

'ಹಂಗಾದ್ರೆ ಆತ್ಮವು ದೇಹದ ಯಾವ ಭಾಗದಲ್ಲಿರುತ್ತೆ?' ಕೊಟ್ರ ಬಿಡಲಿಲ್ಲ.

'ಕಿಡ್ನೀಲಿರುತ್ತೆ ಅನ್ನೋ, ಏನೀಗ?' ತೆಪರೇಸಿ ನಕ್ಕ.

'ಕೆಲವರತ್ರ ಆತ್ಮಾನೇ ಇರಲ್ಲಪ್ಪ, ಸಾಕ್ಷಿ ಎಲ್ಲಿಂದ ಕೊಡೋದು?'

'ಸಾಕ್ಷಿ ಯಾರ್ಗೂ ಕೊಡ್ಬೇಕಾಗಿಲ್ಲ, ಅವರವರೇ ಕೊಟ್ಕಂಡ್ರೆ ಸಾಕು'.

'ಆತ್ಮಕ್ಕೆ ಮೋಸ ಮಾಡೋಕಾಗಲ್ವ?'

'ಮಾಡಬೋದು, ಅದು ಆತ್ಮವಂಚನೆ'.

'ಮೊನ್ನೆ ಒಬ್ರು ಅಡ್ಡಮತದಾನ ಮಾಡಿದ್ರಲ್ಲ, ಅದು ಆತ್ಮವಂಚನೆ ಅಲ್ವಾ?'

'ಅವರು ಹಿಂದೆ ಹಳೇ ಪಕ್ಷದಲ್ಲಿದ್ರಲ್ಲ, ಮೋಸ್ಟ್ಲೀ ಅವರ ಆತ್ಮ ಅಲ್ಲೇ ಇತ್ತು ಅನ್ಸುತ್ತೆ, ಅದ್ಕೆ ಅದು ಅಡ್ಡ ಮತದಾನ ಮಾಡ್ಸಿದೆ'.

'ಆಮೇಲೆ, ಈ ಪ್ರೇತಾತ್ಮ ಅಂತಾರಲ್ಲ, ಪ್ರೇತಕ್ಕೂ ಆತ್ಮ ಇರುತ್ತಾ?'

'ಲೇಯ್ ಕೊಕ್ಕೆ ಕೊಟ್ರ, ಎದ್ದು ನಡಿಯಲೆ ಆಚೆಗೆ' ರೇಗಿದಳು ಮಂಜಮ್ಮ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಚಿಕಿತ್ಸೆಯಷ್ಟೇ ಸಾಲದು, ಸಮಯವೂ ಬೇಕು!

ಸೇವಾ ಮನೋಭಾವದ ವೈದ್ಯರು ಈ ಹೊತ್ತಿನ ತುರ್ತು

• ಸದಾಶಿವ್ ಸೊರಟೂರು

ಮೊನ್ನೆಯಷ್ಟೇ ಅನಾರೋಗ್ಯದ ನಿಮಿತ್ತ ಮಗಳನ್ನು ಕರೆದುಕೊಂಡು ವೈದ್ಯರ ಬಳಿ ಹೋಗಿದ್ದೆ. ₹ 350 ಸಂದರ್ಶನ ಶುಲ್ಕ. ಓಪಿಡಿಯಲ್ಲಿ ಡಾಕ್ಟರ್ ಎರಡು ನಿಮಿಷದ ಮೇಲೆ ನಮಗೆ ಸಮಯ ಕೊಡಲಿಲ್ಲ. 'ಆಯ್ತು ಆಯ್ತು' ಎನ್ನುತ್ತಾ ಔಷಧಿ ಬರೆದರು. ನಾವು ಹೇಳಬೇಕೆಂದುಕೊಂಡದ್ದು ಹಾಗೆಯೇ ಉಳಿಯಿತು. ಪೂರ್ತಿ ಕೇಳಿಸಿಕೊಳ್ಳದೇ ಕೊಟ್ಟ ಅವರ ಔಷಧಿಯನ್ನು ತೆಗೆದುಕೊಳ್ಳುವುದೋ ಬೇಡವೋ ಎಂಬ ಚಿಂತೆ ಕಾಡಿತು.

ಅವರು ನಮ್ಮನ್ನು ಬೇಗನೇ ಆಚೆ ಕಳುಹಿಸಿದ್ದಕ್ಕೆ ಅದಾಗಲೇ ಬಹಳಷ್ಟು ರೋಗಿಗಳು ಸರತಿಯಲ್ಲಿ ಕಾಯುತ್ತಿದ್ದುದು ಕಾರಣವಾಗಿರಬಹುದು. ಅವರೆಲ್ಲರಿಗೂ ಅವರು ಸಮಯ ಕೊಡಬೇಕಾಗಿರುತ್ತದೆ. ಹಾಗೆಂದು, ಒಬ್ಬ ರೋಗಿ ತಾನು ಹೇಳಬೇಕಾದುದನ್ನು ಹೇಳದೇ ಬಂದರೆ, ಸಂದೇಹ ಉಳಿಸಿಕೊಂಡು ಬಂದರೆ ರೋಗ ಗುಣವಾಗುವುದು ಹೇಗೆ?

ಹೆಚ್ಚು ರೋಗಿಗಳನ್ನು ನೋಡುವುದು ಒಂದು ಸೇವೆಯಾದರೂ ಅದಕ್ಕೆ ಪ್ರತಿಯಾಗಿ ಹಣ ಪಡೆಯುತ್ತಾರೆ. ಒಬ್ಬ ರೋಗಿ ತಾನು ಸಂದರ್ಶನ ಶುಲ್ಕ ಪಾವತಿಸಿ ಬಂದರೆ ಅವನಿಗೆ ದತ್ತಕವಾಗುವ ಓಪಿಡಿ ಸಮಯ ಎಷ್ಟು? ಹೀಗೊಂದು ಪ್ರಶ್ನೆಯೂ ಮೂಡುತ್ತದೆ. ಎಲ್ಲರಿಗೂ ಇಷ್ಟೇ ಎಂದು ಸಮಯ ನೀಡಲಾಗುವುದಿಲ್ಲ ನಿಜ. ಅವರವರ ಆರೋಗ್ಯ ಸ್ಥಿತಿಯ ಮೇಲೆ ಅದು ನಿರ್ಧಾರವಾಗಬಹುದು. ಆದರೂ ಎಷ್ಟೋ ಬಾರಿ ರೋಗಿ ತನ್ನ ಮಾತುಗಳನ್ನು ಉಳಿಸಿಕೊಂಡೇ ಆಚೆ ಬರುತ್ತಾನೆ.

ಕೆಲವೊಮ್ಮೆ ವೈದ್ಯರ ಐದು ನಿಮಿಷದ ಸಂದರ್ಶನಕ್ಕೆ ರೋಗಿ ಸಂಪೂರ್ಣವಾಗಿ ಒಂದು ದಿನವನ್ನೇ ವ್ಯಯಿಸಬೇಕಾಗುತ್ತದೆ. ವೈದ್ಯರು ಸಕಾಲಕ್ಕೆ ಲಭ್ಯವಾಗದೇ ಇರುವುದು, ಅವರ ವೃತ್ತಿಯ ವ್ಯಾಪ್ತಿ, ಅಳತೆ ಮೀರಿ ನೀಡಲಾಗುವ ಸಂದರ್ಶಕರ ಸಂಖ್ಯೆ... ಇಂಥದ್ದೇ ಹತ್ತು ಹಲವು ಕಾರಣಗಳಿರಬಹುದು. ಆ ಮಾಹಿತಿ ರೋಗಿಗೆ ಲಭ್ಯವಾಗದೆ ಆತ ಆಸ್ಪತ್ರೆಯ ಬಾಗಿಲು ಕಾಯುತ್ತಾ ಕೂರಬೇಕಾಗುತ್ತದೆ. ವೈದ್ಯರಿಗೆ ಸಮಯ ಮುಖ್ಯವಾದಂತೆ ರೋಗಿಗೂ ಅವನದೇ ಆದ ಒಂದು ಸಮಯ ಎಂಬುದಿರುತ್ತದೆ. ಅದೂ ಮುಖ್ಯವಾಗಬೇಕು. ನಮ್ಮ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಎಷ್ಟರಮಟ್ಟಿಗೆ ಲಭ್ಯವಾಗುತ್ತದೆ ಎಂಬುದರ ಬಗೆಗಿನ ಆತಂಕ ಹಾಗೂ ಕಾಳಜಿಯ ಕಾರಣದಿಂದ ಇದು ಮುಖ್ಯವಾಗುತ್ತದೆ. ವರದಿಯೊಂದರ ಅಂದಾಜಿನ ಪ್ರಕಾರ, ಭಾರತದಲ್ಲಿ ಒಬ್ಬ ರೋಗಿಗೆ ಓಪಿಡಿಯಲ್ಲಿ ದತ್ತಕವಾಗುವ ಅವಧಿ ಸುಮಾರು ಎರಡು ನಿಮಿಷ. ಸ್ವೀಡನ್‌ನಲ್ಲಿ ಒಬ್ಬ ರೋಗಿಗೆ ವೈದ್ಯರ ಬಳಿ ಮಾತನಾಡಲು 22.5 ನಿಮಿಷ ಸಿಗುತ್ತದೆ ಎಂಬ ಉಲ್ಲೇಖ ಅದೇ ವರದಿಯಲ್ಲಿದೆ.

'ಸಾವಿರ ಜನರಿಗೆ ಒಬ್ಬ ವೈದ್ಯರು ಇರಬೇಕಾದದ್ದು ಅವಶ್ಯ ಮತ್ತು ಇದೊಂದು ಸರಿಯಾದ ಅನುಪಾತ ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯುಎಚ್‌ಒ) ಹೇಳಿದೆ. ವಿಶೇಷವೆಂದರೆ, ಭಾರತದಲ್ಲಿ ಈಗ 834 ಜನರಿಗೆ ಒಬ್ಬ ವೈದ್ಯರಿದ್ದಾರೆ. ಇದು ಡಬ್ಲ್ಯುಎಚ್‌ಒ ಅನುಪಾತಕ್ಕಿಂತ ತುಂಬಾ ಸಮಾಧಾನಕರ ಅಂಕಿಅಂಶ. ಆದರೂ ಭಾರತದಲ್ಲಿ ವೈದ್ಯರು ಓಪಿಡಿಯಲ್ಲಿ ರೋಗಿಗೆ ಹೆಚ್ಚು ಸಮಯ ಕೊಡಲಾರರು ಎಂಬ ದೂರಿದೆ.

ದೇಶದಲ್ಲಿ ಆರೋಗ್ಯ ಮತ್ತು ಶಿಕ್ಷಣವು ಕ್ಷಿಪ್ರವಾಗಿ ಬೆಳೆಯುತ್ತಿರುವ ಆರ್ಥಿಕ ಕ್ಷೇತ್ರಗಳಾಗಿ ಬದಲಾಗಿವೆ. ಅವು ಸೇವೆಯ ಗಡಿಯನ್ನು ಎಂದೋ ಮೀರಿವೆ. ವಿಪರ್ಯಾಸವೆಂದರೆ, ಆಸ್ಪತ್ರೆಗಳು ಜಾಹೀರಾತು ನೀಡಿ ರೋಗಿಗಳನ್ನು ಆಹ್ವಾನಿಸುತ್ತವೆ. ಪರಸ್ಪರ ಸ್ಪರ್ಧೆಗೆ ಇಳಿಯುತ್ತವೆ. ಹಣದ ಹೊಳೆ ಹರಿಯುತ್ತದೆ. ಒಬ್ಬ ವ್ಯಕ್ತಿ ತನ್ನ ಆದಾಯದ ಶೇ 30ರಷ್ಟು ಭಾಗವನ್ನು ಆಸ್ಪತ್ರೆಗೆ ಸುರಿಯುತ್ತಿದ್ದಾನೆ. ತನ್ನ ಹಣಕ್ಕೆ ಸರಿಯಾದ ಚಿಕಿತ್ಸೆ ಸಿಗುವುದೇ ಎಂಬುದು ಇಂದಿಗೂ ಅವನಿಗೆ ಖಚಿತವಿಲ್ಲ.

ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳ ದೊಡ್ಡ ಸವಾಲು ಅಲ್ಲಿನ ಪ್ರಜೆಗಳ ಆರೋಗ್ಯ. ಆರೋಗ್ಯವಂತ ಪ್ರಜೆಗಳಿಂದ ಮಾತ್ರ ದೇಶ ಬೆಳೆಯಬಲ್ಲದು. ದುಡಿಯುವ ಕೈಗಳು ರೋಗಮುಕ್ತವಾದರೆ ಅದಕ್ಕೆ ಬಲ ಹೆಚ್ಚು. ಈ ವಿಚಾರದಲ್ಲಿ ಭಾರತವೇನೂ ಹೊರತಲ್ಲ. ವೈದ್ಯರ ಬಳಿಯ ಒಂದು ಸಂದರ್ಶನಕ್ಕೆ ದಿನವಿಡೀ ಕಾಯುವ, ತನ್ನ ಆದಾಯದ ಬಹುಭಾಗವನ್ನು ಆಸ್ಪತ್ರೆಗೆ ಸುರಿಯುವ ಮತ್ತು ಆರೋಗ್ಯ ಕ್ಷೇತ್ರ ಒಂದು ವ್ಯವಸ್ಥಿತ ಉದ್ಯಮ ಆಗಿರುವ ಈ ಹೊತ್ತಿನಲ್ಲಿ, ರೋಗಿಗೆ ಸಮಾಧಾನಕರ ಚಿಕಿತ್ಸೆ ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆ ಮೂಡುತ್ತದೆ.

ಇದರ ಹೊರತಾಗಿಯೂ ಹಗಲು ರಾತ್ರಿ ತನ್ನ ರೋಗಿಗಳಿಗಾಗಿ ದುಡಿಯುವ ವೈದ್ಯರನ್ನು ನೋಡಿದ್ದೇವೆ. ಸಮೂಹ ಸಹಭಾಗಿತ್ವದಲ್ಲಿ ದೇಣಿಗೆ ಸಂಗ್ರಹಿಸಿ ಬಡವರಿಗೆ ಉಚಿತ ಚಿಕಿತ್ಸೆ ಕೊಡುವ ಆಸ್ಪತ್ರೆಗಳನ್ನು ನೋಡಿದ್ದೇವೆ. ಅದೇ ಓಪಿಡಿಯಲ್ಲಿ ರೋಗಿಗೆ ಬಹಳಷ್ಟು ಸಮಯಾವಕಾಶ ಕೊಟ್ಟು, ಅವರ ಅನುಮಾನವನ್ನು ಇಲ್ಲವಾಗಿಸುವ ಹೃದಯವಂತ ವೈದ್ಯರನ್ನೂ ಕಂಡಿದ್ದೇವೆ. ಅಷ್ಟರಮಟ್ಟಿಗೆ ಒಂದು ಸಣ್ಣ ನೆಮ್ಮದಿ.

ನಮ್ಮ ಆರೋಗ್ಯ ಕ್ಷೇತ್ರ ಬಹಳಷ್ಟು ಬದಲಾಗಬೇಕಾಗಿದೆ. ಪ್ರತಿ ರೋಗಿಗೂ ಗುಣಾತ್ಮಕ ಚಿಕಿತ್ಸೆ ಸಿಗಬೇಕಾಗಿದೆ. ಉಳ್ಳವರಿಗೆ ದಕ್ಕುವ ಚಿಕಿತ್ಸೆಗಳು ಇಲ್ಲದವರಿಗೂ ದಕ್ಕಬೇಕು. ಉತ್ತಮ ವೈದ್ಯರು ಬೇಕು. ಸೇವಾ ಮನೋಭಾವದ ವೈದ್ಯರು ಈ ಹೊತ್ತಿನ ತುರ್ತು. ಗೆಳೆಯನೊಬ್ಬ ಹೇಳುತ್ತಿದ್ದ, ಆಸ್ಪತ್ರೆಗೆ ಹೋಗದಿದ್ದರೆ ಪ್ರಾಣ ಮಾತ್ರ ಹೋಗಬಹುದು, ಆದರೆ ಈ ಆಸ್ಪತ್ರೆಗಳು ಒಮ್ಮೊಮ್ಮೆ ಹಣ ಮತ್ತು ಪ್ರಾಣ ಎರಡನ್ನೂ ಕಿತ್ತುಕೊಂಡು ಬಿಡುತ್ತವೆ ಎಂದು. ಅದು ಬಹುತೇಕರ ಅನುಭವ ಆಗದೇ ಇರಲಿ. ದೇವರಂತಹ ವೈದ್ಯರ ಸಂತತಿ ಹೆಚ್ಚಾಗಲಿ.

ವಾಚಕರ ವಾಣಿ

ಸ್ಟೈಪೆಂಡ್ ತಡೆಯಲು ಹಲವು ಮಾರ್ಗ

ಬಹುತೇಕ ವೈದ್ಯಕೀಯ ಕಾಲೇಜುಗಳು ಪ್ರಭಾವಿಗಳ, ರಾಜಕಾರಣಿಗಳ ಬಿಗಿ ಮುಷ್ಟಿಯಲ್ಲಿವೆ. ಹೆಚ್ಚಿನ ಕಾಲೇಜುಗಳು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನ್ಯಾಯಯುತವಾಗಿ ಕೊಡಬೇಕಾದ ಸ್ಟೈಪೆಂಡ್ ಕೊಡದೆ ಅವರನ್ನು ಬೇಕಾಬಿಟ್ಟಿಯಾಗಿ ದುಡಿಸಿಕೊಳ್ಳುತ್ತವೆ. ಒಂದು ವೇಳೆ ಕೊಟ್ಟರೂ ದುಬಾರಿ ಹಾಸ್ಟೆಲ್ ಶುಲ್ಕ ಅಥವಾ ಡೊನೇಷನ್ ಅನ್ನು ವಿದ್ಯಾರ್ಥಿಗಳ ಮೇಲೆ ಹೇರಿ, ಅದನ್ನು ಅವರಿಂದ ವಾಪಸ್ ವಸೂಲು ಮಾಡುತ್ತವೆ. ಹೀಗೆ ಮೊದಲು ವಿದ್ಯಾರ್ಥಿಗಳ ಬ್ಯಾಂಕ್ ಅಕೌಂಟಿಗೆ ಹಣ ಜಮಾ ಮಾಡಿ, ಅದನ್ನು ಪರೋಕ್ಷವಾಗಿ ಹಿಂದಕ್ಕೆ ಪಡೆಯುವ ಹಲವು ಮಾರ್ಗಗಳನ್ನು ಕಾಲೇಜು ಆಡಳಿತ ಮಂಡಳಿಗಳು ಕಂಡುಕೊಂಡಿವೆ.

ಇನ್ನು ತಮ್ಮ ಶೈಕ್ಷಣಿಕ ಭವಿಷ್ಯ ಅತಂತ್ರಗೊಳ್ಳುವ ಭಯದಿಂದ ವಿದ್ಯಾರ್ಥಿಗಳು ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಲಾಗದೆ ಅಸಹಾಯಕರಾಗಿದ್ದಾರೆ. ರಾಜ್ಯ ಮತ್ತು ಕೇಂದ್ರದ ಸಂಬಂಧಿಸಿದ ಸಚಿವರು, ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಭಾರತೀಯ ವೈದ್ಯಕೀಯ ಮಂಡಳಿಯು ನಿಯಮಾವಳಿಗಳನ್ನು ರೂಪಿಸುವುದು ಮಾತ್ರ ತನ್ನ ಜವಾಬ್ದಾರಿ ಎಂದು ನಂಬಿದಂತಿದೆ.

ಡಾ. ಅನಿಲ್ ಎಮ್. ಚಟ್ನಳ್ಳಿ, ಕಲಬುರಗಿ

ಮುದ್ರಾಂಕ ಶುಲ್ಕ ಹೆಚ್ಚಳ ಅಸಮಂಜಸ

ರಾಜ್ಯ ಸರ್ಕಾರ ಕೆಲ ದಿನಗಳ ಹಿಂದೆ ಮುದ್ರಾಂಕ ಶುಲ್ಕವನ್ನು ಅವೈಜ್ಞಾನಿಕವಾಗಿ ಏರಿಸಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿದೆ. ಸರ್ಕಾರದ ವಿವಿಧ ಯೋಜನೆಗಳು ಸೇರಿದಂತೆ ಕೃಷಿ ಉಪಕರಣಗಳಿಗೆ ಸಹಾಯಧನ, ಮುಚ್ಚಳಿಕೆ ಪತ್ರ, ಪ್ರಮಾಣಪತ್ರಗಳನ್ನು ₹ 20ರ ಅಫಿಡವಿಟ್‌ನಲ್ಲಿ ಸಲ್ಲಿಸಲಾಗುತ್ತಿತ್ತು. ಆದರೆ, ಈ ದರವನ್ನು ಈಗ ಏಕಾಏಕಿ ಅವೈಜ್ಞಾನಿಕವಾಗಿ ಐದು ಪಟ್ಟು ಅಂದರೆ ₹ 100ಕ್ಕೆ ಹೆಚ್ಚಳ ಮಾಡಿದ್ದು, ಕನಿಷ್ಠ ದರ ಇದಾಗಿದೆ.

ಸಾಲ, ಆಸ್ತಿ ಖರೀದಿ ಪತ್ರಗಳ ಮೇಲೆ ಹೆಚ್ಚಳ ಮಾಡಲಿ, ಆದರೆ ರೈತಾಪಿ ಮತ್ತು ಮಧ್ಯಮ ವರ್ಗದವರೇ ಹೆಚ್ಚಾಗಿ ಉಪಯೋಗಿಸುವಂತಹ ಅಫಿಡವಿಟ್ ದರವನ್ನು ಹಳೆಯ ದರಕ್ಕೆ ಇಳಿಸಲು ರಾಜ್ಯ ಸರ್ಕಾರ ಚಿಂತಿಸಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

ಹೀಗೂ ನಡೆಯುತ್ತದೆ ಶಸ್ತ್ರಚಿಕಿತ್ಸೆ!

ಪಾವಗಡದ ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಂತರ ಮೂವರು ಮಹಿಳೆಯರು ಮೃತಪಟ್ಟಿದ್ದು ಬಹಳ ನೋವಿನ ಸಂಗತಿ. ಈ ಸಂದರ್ಭದಲ್ಲಿ, ನಾನು 2021ರಲ್ಲಿ ಸರ್ಕಾರಿ ಜಿಲ್ಲಾ ಆಸ್ಪತ್ರೆಯೊಂದರಲ್ಲಿ ನನ್ನ ತಂಗಿಗೆ ಸಿಸೇರಿಯನ್ ಶಸ್ತ್ರಚಿಕಿತ್ಸೆ ಮಾಡಿಸಲು ಮುಂದಾಗಿದ್ದು ನೆನಪಾಗುತ್ತದೆ. ಆಗ ಆಸ್ಪತ್ರೆಯಲ್ಲಿ ಸುಮಾರು 8 ಮಹಿಳೆಯರಿಗೆ ಶಸ್ತ್ರಚಿಕಿತ್ಸೆ ನಡೆಸಿ, ನಂತರ ಕೊನೆಯದಾಗಿ ನನ್ನ ತಂಗಿಗೆ ಶಸ್ತ್ರಚಿಕಿತ್ಸೆಯನ್ನು ಆರಂಭಿಸಲಾಯಿತು. ಆದರೆ, ಅದನ್ನು ಅರ್ಧಕ್ಕೇ ನಿಲ್ಲಿಸಿ ಹೊರಬಂದ ವೈದ್ಯರೊಬ್ಬರು 'ನಿನ್ನ ತಂಗಿ ಶಸ್ತ್ರಚಿಕಿತ್ಸೆಗೆ ಸ್ಪಂದಿಸುತ್ತಿಲ್ಲ. ಇಲ್ಲಿ ಸರಿಯಾದ ಎಕ್ಯುಪ್‌ಮೆಂಟ್‌ಗಳು ಇಲ್ಲ. ಹಾಗಾಗಿ ಆಕೆಯನ್ನು ನನ್ನ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಬಾ. ಅಲ್ಲಿ ಎಲ್ಲಾ ತರಹದ ಎಕ್ಯುಪ್‌ಮೆಂಟ್‌ಗಳೂ ಇವೆ' ಎಂದು ಹೇಳಿ ಹೊರಟುಹೋದರು. ಆಗ ನಾನು ನನ್ನ ತಂಗಿಯನ್ನು ಆಂಬುಲೆನ್ಸ್ ಮುಖಾಂತರ ವೈದ್ಯರ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದ ಮೇಲೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿ, ನಮ್ಮಿಂದ ₹ 25,000 ದುಡ್ಡು ಕಟ್ಟಿಸಿಕೊಂಡಿದ್ದನ್ನು ಮರೆಯುವಂತಿಲ್ಲ. ಇದು ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ದಂಧೆ ಎಂದರೂ ತಪ್ಪಾಗದು.

ಚನ್ನಪ್ಪ ಯಾದವ್, ಗುರುಮಠಕಲ್

ಪ್ರಜ್ಞಾವಂತರ 'ಪ್ರಜ್ಞೆ' ಎಲ್ಲಿ ಹೋಯಿತು?

ವಿಧಾನಪರಿಷತ್ ಸದಸ್ಯರಾಗಿ ಬುದ್ಧಿಜೀವಿಗಳು ಮತ್ತು ಪ್ರಜ್ಞಾವಂತರನ್ನು ಆಯ್ಕೆ ಮಾಡಲಾಗುತ್ತಿತ್ತು. ಎಲ್ಲ ಪಕ್ಷದವರೂ ಅಂತಹವರನ್ನೇ ಆಯ್ಕೆ ಮಾಡುತ್ತಿದ್ದುದು ವಿಶೇಷ. ಉತ್ತಮವಾದ ಚರ್ಚೆಗಳಿಂದ ಒಡಗೂಡಿದ ಕಲಾಪ ನಡೆಯುತ್ತಿದ್ದರೆ ಸಾರ್ವಜನಿಕರು ಆಸಕ್ತಿಯಿಂದ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಆದರೆ, ಇಂದು ಆ ಪವಿತ್ರ ಮನೆಯಲ್ಲಿ ಕೆಲವು ಜನಪ್ರತಿನಿಧಿಗಳು ರೌಡಿಗಳಂತೆ ವರ್ತಿಸುತ್ತಿರುವುದು ಕಂಡುಬರುತ್ತದೆ. ಇತ್ತೀಚೆಗಿನ ಕಲಾಪದಲ್ಲಿ ಏಕವಚನದಲ್ಲಿ ನಿಂದಿಸಿದರು ಎಂಬ ಕಾರಣಕ್ಕೆ ಇಬ್ಬರು ಸದಸ್ಯರು ತೊಡೆ ತಟ್ಟಿ ಜಗಳಕ್ಕೆ ಹೋಗುವವರಂತೆ ನಡೆದುಕೊಂಡಿದ್ದು ವಿಷಾದನೀಯ. ಬಸವರಾಜ ಹೊರಟ್ಟಿ ಅವರಂತಹ ಅನುಭವಿ, ಚಿಂತಕ ಸಭಾಪತಿ ಸ್ಥಾನದಲ್ಲಿ ಕುಳಿತಿದ್ದರೂ ಅವರಿಗೆ ಕಿಂಚಿತ್ ಗೌರವವನ್ನೂ ಕೊಡದಂತೆ ನಡೆದುಕೊಳ್ಳುತ್ತಿರುವುದು ಶೋಚನೀಯ.

ಇದರಿಂದ ಮೇಲ್ಮನೆ ತನ್ನ ಘನತೆಯನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತದೆ. ವಿಷಯಗಳ ಬಗ್ಗೆ ಶಾಂತಚಿತ್ತರಾಗಿ, ಸಮಾಧಾನದಿಂದ ಚರ್ಚೆ ಮಾಡಲು ಸಾಧ್ಯವಿಲ್ಲವೇ? ಕೂಗಾಡಿದರೆ, ಕಿರುಚಾಡಿ ತಮ್ಮ ಅರ್ಭಟ ತೋರಿಸಿದರಷ್ಟೇ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಪಡೆಯಬಹುದು ಎಂಬ ಧೋರಣೆಯೇ? ಕೋಟ್ಯಂತರ ಜನ ತಮ್ಮನ್ನು ಗಮನಿಸುತ್ತಿರುತ್ತಾರೆ ಎಂಬ ಬಗ್ಗೆ ಸಣ್ಣ ಮಟ್ಟಿಗಿನ ಪ್ರಜ್ಞೆಯಾದರೂ ಇರಲಿ.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಎಫ್‌ಎಸ್‌ಎಲ್ ವರದಿಗೆ ಕಾಯಬೇಕಿಲ್ಲ...

ಇತ್ತೀಚೆಗಿನ ರಾಜ್ಯಸಭೆ ಚುನಾವಣೆ ಸಂದರ್ಭದಲ್ಲಿ ವಿಧಾನಸೌಧದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿರುವುದು ಸಾಬೀತಾದರೆ ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ಬಂದ ನಂತರ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿದೆ. ಆರೋಪ ಸಾಬೀತಾಗುವುದು ನ್ಯಾಯಾಲಯದಲ್ಲಿಯೇ ವಿನಾ ಪೊಲೀಸರ ತನಿಖೆಯಿಂದಲ್ಲ. ಅಲ್ಲದೆ, ಆಪಾದಿತರ ವಿರುದ್ಧ ಕ್ರಮ ಕೈಗೊಳ್ಳಲು ಎಫ್‌ಎಸ್‌ಎಲ್ ವರದಿ ಬರುವವರೆಗೂ ಕಾಯಬೇಕಾಗಿಲ್ಲ. ಆರೋಪಪಟ್ಟಿ ಸಲ್ಲಿಸಲು ಎಫ್‌ಎಸ್‌ಎಲ್ ವರದಿ ಅವಶ್ಯ. ಆದರೆ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲು ಈ ವರದಿ ಕಡ್ಡಾಯವಲ್ಲ.

ಎಫ್‌ಎಸ್‌ಎಲ್ ವರದಿಯಲ್ಲಿ ವಿಡಿಯೊ ನಕಲಿ ಎಂದು ಕಂಡುಬಂದರೆ 'ಬಿ' ರಿಪೋರ್ಟ್ ಸಲ್ಲಿಸುವುದರ ಜೊತೆಗೆ ನಕಲಿ ವಿಡಿಯೊ ಸೃಷ್ಟಿ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬಹುದು. ಎಫ್‌ಎಸ್‌ಎಲ್ ವರದಿ ಬಂದ ನಂತರ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎನ್ನುವುದು ಸರಿಯಲ್ಲ. ಕೊಲೆ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಪೋಸ್ಟ್‌ಮಾರ್ಟಂ ವರದಿಗಾಗಿ ಕಾಯಲಾಗುವುದೇ? ಖಂಡಿತಾ ಇಲ್ಲ!

ಪಿ.ಜೆ.ರಾಘವೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿರತೆಗಳ ಸಂಖ್ಯೆ ಏರುತ್ತಿದೆ ಜತೆಗೆ ಸಂಘರ್ಷವೂ

ಪ್ರಜಾವಾಣಿ ವಾರ್ತೆ

ಐದನೇ ಆವೃತ್ತಿಯ ‘ಚಿರತೆಗಳ ಸ್ಥಿತಿಗತಿ ವರದಿ–2022’ ಗುರುವಾರ ಬಿಡುಗಡೆಯಾಗಿದೆ. ನಾಲ್ಕು ವರ್ಷಗಳಿಗೆ ಒಮ್ಮೆ ಬರುವ ಈ ವರದಿಯು ಕಳೆದ ಬಾರಿ 2018ರಲ್ಲಿ ಬಂದಿತ್ತು. ಹಿಂದಿನ ಬಾರಿಯ ಹೋಲಿಕೆಯಲ್ಲಿ ದೇಶದಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಳವಾಗಿದೆ.

2018ರಲ್ಲಿ ದೇಶದಲ್ಲಿ ಒಟ್ಟು 12,852 ಚಿರತೆಗಳಿದ್ದವು. ಈ ಸಂಖ್ಯೆಯು ಈ ಬಾರಿ 13,874ಕ್ಕೆ ಏರಿಕೆಯಾಗಿದೆ. ಮಧ್ಯ ಪ್ರದೇಶದಲ್ಲಿ 3,907 ಚಿರತೆಗಳಿವೆ. ಆದ್ದರಿಂದ, ಮಧ್ಯಪ್ರದೇಶವು ಹೆಚ್ಚು ಚಿರತೆಗಳಿರುವ ರಾಜ್ಯ ಎನಿಸಿಕೊಂಡಿದೆ. ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ (1,985), ಮೂರನೇ ಸ್ಥಾನದಲ್ಲಿ ಕರ್ನಾಟಕ (1,879) ಹಾಗೂ ನಾಲ್ಕನೇ ಸ್ಥಾನದಲ್ಲಿ ತಮಿಳುನಾಡು (1,070) ಇವೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಹಾಗೂ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಜೊತೆಗೂಡಿ ಈ ವರದಿಯನ್ನು ಸಿದ್ಧಪಡಿಸಿವೆ. ಇವರೊಂದಿಗೆ ಆಯಾ ರಾಜ್ಯಗಳ ಅರಣ್ಯ ಇಲಾಖೆಗಳೂ ಕೈಜೋಡಿಸಿವೆ. ಈ ವರದಿಯನ್ನು ಸಿದ್ಧಪಡಿಸಲು ಒಟ್ಟು 20 ರಾಜ್ಯಗಳನ್ನು ಸುತ್ತಾಡಲಾಗಿದೆ. ಒಟ್ಟು 6.41 ಲಕ್ಷ ಚದರ ಕಿ.ಮೀ. ಉದ್ದವನ್ನು ನಡಿಗೆಯಲ್ಲಿ ಕ್ರಮಿಸಲಾಗಿದೆ. 32,803 ಕಡೆಗಳಲ್ಲಿ ಕ್ಯಾಮೆರಾಗಳನ್ನು ಇಡಲಾಗಿತ್ತು. ಜೊತೆಗೆ, ಈ ಎಲ್ಲ ಕಾರ್ಯಕ್ಕಾಗಿ 6.41 ಲಕ್ಷ ಮಾನವ ದಿನಗಳನ್ನು ತೆಗೆದುಕೊಳ್ಳಲಾಗಿದೆ. ವನ್ಯಜೀವಿಗಳ ಸಂಬಂಧ ವರದಿಯೊಂದನ್ನು ಸಿದ್ಧಪಡಿಸಲು ಇಷ್ಟೊಂದು ಹೆಚ್ಚಿನ ಅವಧಿ ತೆಗೆದುಕೊಂಡ ಮೊದಲ ವರದಿ ಇದಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಚಿರತೆಗಳು, ಅವುಗಳ ವರ್ತನೆಗಳು, ಇತಿಹಾಸಗಳ ಕುರಿತು ಹೆಚ್ಚಿನ ಅಧ್ಯಯನ ನಡೆಸಬೇಕು ಎಂಬುದನ್ನು ವರದಿಯಲ್ಲಿ ಮುಖ್ಯವಾಗಿ ಹೇಳಲಾಗಿದೆ. ಮಾನವ–ಚಿರತೆ ಸಂಘರ್ಷವು ಅಧಿಕಗೊಳ್ಳುತ್ತಿದೆ. ಚಿರತೆ ದಾಳಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮನುಷ್ಯರು ಚಿರತೆಗಳನ್ನು ಕೊಲ್ಲುತ್ತಿದ್ದಾರೆ. ಜನರಿಗೆ ಚಿರತೆಯ ಕುರಿತು ಹೆಚ್ಚಿನ ಮಾಹಿತಿಗಳಿಲ್ಲ. ಇದೇ ಕಾರಣಕ್ಕೆ ಅವುಗಳನ್ನು ಕೊಲ್ಲಲಾಗುತ್ತಿದೆ. ಇದು ನಿಲ್ಲಬೇಕು ಎಂದರೆ, ಚಿರತೆಗಳ ಕುರಿತು ಹೆಚ್ಚು ಅಧ್ಯಯನ ನಡೆಯಬೇಕು ಮತ್ತು ಜನರಿಗೆ ಚಿರತೆಗಳ ವರ್ತನೆ ಕುರಿತು ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದು ವರದಿಯಲ್ಲಿ ಹೇಳಲಾಗಿದೆ.

ದೇಶವನ್ನು ನಾಲ್ಕು ವಲಯಗಳಲ್ಲಿ ವಿಭಜಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ. ಶಿವಾಲಿಕ್ ಪರ್ವತ ಮತ್ತು ಗಂಗಾ ನದಿ ಬಯಲು ಪ್ರದೇಶ, ಮಧ್ಯ ಭಾರತ ಮತ್ತು ಪೂರ್ವಘಟ್ಟಗಳು, ಪಶ್ಚಿಮ ಘಟ್ಟಗಳು ಹಾಗೂ ಈಶಾನ್ಯ ಪರ್ವತ ಮತ್ತು ಬ್ರಹ್ಮಪುತ್ರ ಬಯಲು ಪ್ರದೇಶ– ಇವೇ ಆ ನಾಲ್ಕು ವಲಯಗಳು. ಗಂಗಾ ನದಿ ಬಯಲು ಪ್ರದೇಶವನ್ನು ಹೊರತುಪಡಿಸಿ ಉಳಿದೆಲ್ಲಾ ವಲಯಗಳಲ್ಲೂ ಚಿರತೆಗಳ ಸಂಖ್ಯೆಯು ಅಧಿಕಗೊಂಡಿದೆ. ದೇಶದ ಎಲ್ಲ ಹುಲಿ ಸಂರಕ್ಷಿತ ಪ್ರದೇಶ ಗಳಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಾಗಿದೆ. ಹುಲಿ ಸಂರಕ್ಷಿತ ಯೋಜನೆಗಳ ಅನುಷ್ಠಾನವು ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ಚಿರತೆಗಳೂ ಅಧಿಕಗೊಂಡಿವೆ.

ಅಧಿಕಗೊಂಡ ಮಾನವ–ಚಿರತೆ ಸಂಘರ್ಷ: ಚಿರತೆಗಳ ಸಂಖ್ಯೆ ಅಧಿಕಗೊಂಡಿದೆ ಎನ್ನುವುದು ನಿಜವಾದರೂ ಚಿರತೆಗಳನ್ನು ಬೇಟೆಯಾಡುವುದು, ಅವುಗಳನ್ನು ಕೊಲ್ಲುವ ಮನೋವೃತ್ತಿ ಹಾಗೆಯೇ ಇದೆ. ಮಧ್ಯ ಭಾರತದ ಪ್ರದೇಶದಲ್ಲಿ ಚಿರತೆಗಳನ್ನು ಬೇಟೆಯಾಡುವ ಪ್ರವೃತ್ತಿಯು ಅಧಿಕಗೊಂಡಿದೆ. ಜೊತೆಗೆ, ನಾಲ್ಕೂ ವಲಯಗಳಲ್ಲಿ ಮಾನವ–ಚಿರತೆ ಸಂಘರ್ಷವು ಭಾರಿ ಸಂಖ್ಯೆಯಲ್ಲಿದೆ.

ಅರಣ್ಯಗಳಲ್ಲಿ ಮಾನವ ಚಟುವಟಿಕೆಗಳು ಅಧಿಕಗೊಳ್ಳುತ್ತಾ, ಕಾಡು ಸಣ್ಣದಾಗ ತೊಡಗಿದೆ. ಇದೇ ಕಾರಣಕ್ಕೆ ಚಿರತೆಗಳು ಕಾಡು ಅಂಚಿನ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳತೊಡಗಿದೆ. ಸಂರಕ್ಷಿತ ಪ್ರದೇಶಗಳ ಒಳಗೆ ಇರುವ ಚಿರತೆಗಳ ಸಂಖ್ಯೆಗಿಂತ, ಈ ಪ್ರದೇಶಗಳ ಹೊರವಲಯಗಳಲ್ಲಿ ಇರುವ ಚಿರತೆಗಳ ಸಂಖ್ಯೆಯೇ ಅಧಿಕವಾಗಿದೆ. ಇದೇ ಸಂಘರ್ಷಕ್ಕೆ ಮುಖ್ಯ ಕಾರಣ. ಉತ್ತರಾಖಂಡ, ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಚಿರತೆಗಳು ಗ್ರಾಮಗಳನ್ನು ಬಿಟ್ಟು ನಗರ ಪ್ರದೇಶಕ್ಕೂ ತಮ್ಮ ಓಡಾಟವನ್ನು ಆರಂಭಿಸಿವೆ. ಉತ್ತರ ಪ್ರದೇಶದ ಸಮಸ್ಯೆ ಬೇರೆಯದೇ ಇದೆ. ಸಂರಕ್ಷಿತ ಪ್ರದೇಶದ ವಿಸ್ತೀರ್ಣವು ಕಡಿಮೆ ಇರುವ ಕಾರಣ, ಜನವಸತಿಯು ಸಂರಕ್ಷಿತ ಪ್ರದೇಶದ ಅಂಚಿಗೆ ಬರುತ್ತವೆ. ಈ ಕಾರಣಕ್ಕಾಗಿ ಸಂಘರ್ಷ ಏರ್ಪಡುತ್ತಿದೆ.

ಮಧ್ಯ ಭಾರತ ವಲಯದಲ್ಲಿನ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಾಗಿದೆ. ಹುಲಿ ಸಂರಕ್ಷಿತ ಯೋಜನೆಯ ಪರಿಣಾಮಕಾರಿ ಅನುಷ್ಠಾನದಿಂದ ಇದು ಸಾಧ್ಯವಾಗಿದೆ. ಹಾಗಿದ್ದರೂ, ಚಿರತೆಗಳ ಸಾವಿನ ಸಂಖ್ಯೆಯೂ ಅಧಿಕವಾಗಿಯೇ ಇದೆ. ಚಿರತೆಗಳ ಆವಾಸಸ್ಥಾನ ಕುಗ್ಗಿದೆ. ಕಲ್ಲಿದ್ದಲು ಗಣಿಗಾರಿಕೆಯು ಹೆಚ್ಚಾಗಿದೆ. ಈ ವಲಯದಲ್ಲಿ ಅಧಿಕ ಆರ್ಥಿಕ ಪ್ರದೇಶಗಳಿವೆ. ಇವುಗಳ ಮಧ್ಯೆ ಸಂಪರ್ಕ ಸಾಧಿಸಲು ದೊಡ್ಡ ದೊಡ್ಡ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ. ಇದರಿಂದಾಗಿ ಚಿರತೆಗಳು ರಸ್ತೆ ಅಪಘಾತಗಳಲ್ಲಿ ಹೆಚ್ಚಾಗಿ ಮೃತಪಡುತ್ತಿವೆ.

ಈಶಾನ್ಯ ಪರ್ವತ ಮತ್ತು ಬ್ರಹ್ಮಪುತ್ರ ಬಯಲು ಪ್ರದೇಶಗಳಲ್ಲಿ ಕಾಡುಗಳು ಹೆಚ್ಚು ಚದುರಿದಂತಿವೆ. ಕಾಡಿನ ಮಧ್ಯೆಯೇ ಜನವಸತಿಯೂ ಇದೆ. ಇದೇ ಕಾರಣಕ್ಕಾಗಿ ಈ ವಲಯದಲ್ಲಿ ಮಾನವ–ಚಿರತೆ ಸಂಘರ್ಷ ಹೆಚ್ಚಿನ ಸಂಖ್ಯೆಯಲ್ಲಿದೆ.

ಚಿರತೆಗಳ ಸಂಖ್ಯೆ (ಆವರಣದಲ್ಲಿರುವುದು 2018ರಲ್ಲಿ ಇದ್ದ ಚಿರತೆಗಳ ಸಂಖ್ಯೆ)



ರಕ್ಷಣೆಗೆ ಏನು ಕ್ರಮ?

- ಚಿರತೆಗಳ ಆವಾಸಸ್ಥಾನಗಳನ್ನು ಮರುಸ್ಥಾಪಿಸಬೇಕು ಮತ್ತು ಅವುಗಳನ್ನು ಸಂರಕ್ಷಿಸಬೇಕು
- ಸಂರಕ್ಷಿತ ಪ್ರದೇಶಗಳ ಹೊರವಲಯಗಳಲ್ಲಿ ರಕ್ಷಣೆ ವ್ಯವಸ್ಥೆ ರೂಪಿಸಬೇಕು
- ಮಾನವ–ಚಿರತೆ ಸಂಘರ್ಷವನ್ನು ತಗ್ಗಿಸಲು ಕ್ರಮ ಕೈಗೊಳ್ಳಬೇಕು
- ಅರಣ್ಯ ಪ್ರದೇಶಗಳ ಸುತ್ತಮುತ್ತ ವಾಸಿಸುವ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರೊಂದಿಗೆ ಕೈಜೋಡಿಸಿ, ಜಾಗೃತಿ ಕಾರ್ಯ ಕ್ರಮಗಳನ್ನು ರೂಪಿಸಬೇಕು ಮತ್ತು ಸಹಬಾಳ್ವೆಯ ಕುರಿತೂ ಅರಿವು ಮೂಡಿಸಬೇಕು
- ಚಿರತೆಗಳ ಪರಿಸರ, ವರ್ತನೆ, ಚಿರತೆಗಳ ಎಲ್ಲೆಲ್ಲಿ ಎಷ್ಟು ಸಂಖ್ಯೆಯಲ್ಲಿದ್ದಾವೆ ಎನ್ನುವ ನಿಖರ ಮಾಹಿತಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಆಗ ಮಾತ್ರವೇ ಅವುಗಳ ಸಂರಕ್ಷಣೆಗೆ ಯೋಜನೆಗಳನ್ನು ರೂಪಿಸಬಹುದು

ಕರ್ನಾಟಕ: ಸಂರಕ್ಷಿತ ಪ್ರದೇಶಗಳಾಚೆಯೇ ಚಿರತೆಗಳು ಹೆಚ್ಚು



549 ರಾಜ್ಯದ ಐದು ಸಂರಕ್ಷಿತ ಪ್ರದೇಶಗಳ ಒಳಗೆ ಇರುವ ಚಿರತೆಗಳ ಅಂದಾಜು ಸಂಖ್ಯೆ

847 ರಾಜ್ಯದ ಐದು ಸಂರಕ್ಷಿತ ಪ್ರದೇಶಗಳ ಹೊರಗೆ ಇರುವ ಚಿರತೆಗಳ ಅಂದಾಜು ಸಂಖ್ಯೆ

483 ರಾಜ್ಯದ ಇತರ ಪ್ರದೇಶಗಳಲ್ಲಿ ಇರುವ ಚಿರತೆಗಳ ಅಂದಾಜು ಸಂಖ್ಯೆ

ರಾಜ್ಯದಲ್ಲಿನ ಸಂರಕ್ಷಿತ ಪ್ರದೇಶಗಳಲ್ಲಿ ಚಿರತೆಗಳು ದೊಡ್ಡ ಸಂಖ್ಯೆಯಲ್ಲಿ ಇವೆಯಾದರೂ, ಸಂರಕ್ಷಿತ ಪ್ರದೇಶಗಳ ಹೊರಗೇ ಹೆಚ್ಚು ಚಿರತೆಗಳಿವೆ ಎನ್ನುತ್ತದೆ ಈ ವರದಿ. ಅಲ್ಲದೆ, ಈ ಹಿಂದೆ ಚಿರತೆಗಳು ಅಪರೂಪಕ್ಕೆ ಕಾಣಿಸಿಕೊಳ್ಳುತ್ತಿದ್ದ ಪ್ರದೇಶಗಳಲ್ಲೂ ಈಗ ಚಿರತೆಗಳು ಹೆಚ್ಚು ಕಾಣಿಸಿಕೊಳ್ಳುತ್ತಿವೆ ಎಂದು ವರದಿಯಲ್ಲಿ ವಿವರಿಸಲಾಗಿದೆ. ಚಿರತೆಗಳ ಆವಾಸಸ್ಥಾನ ವಿಸ್ತರಿಸುತ್ತಿರುವುದನ್ನು ಇದು ಸೂಚಿಸುತ್ತದೆ.

ಸಂರಕ್ಷಿತ ಪ್ರದೇಶಗಳು ಮತ್ತು ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಚಿರತೆಗಳು ಆಹಾರಕ್ಕಾಗಿ ಕಾಡು ಪ್ರಾಣಿಗಳನ್ನೇ ಅವಲಂಬಿಸಿವೆ. ಆದರೆ ಅರೆಮಲೆನಾಡು ಮತ್ತು ಬಯಲುಸೀಮೆಯ ಜಿಲ್ಲೆಗಳಲ್ಲಿ ಚಿರತೆಗಳು ತಮ್ಮ ಆಹಾರಕ್ಕಾಗಿ ಪ್ರಧಾನವಾಗಿ ಜಾನುವಾರುಗಳು ಮತ್ತು ನಾಯಿಗಳನ್ನೇ ಅವಲಂಬಿಸಿವೆ. 2018ಕ್ಕೆ ಹೋಲಿಸಿದರೆ, 2022ರಲ್ಲಿ ಇಂತಹ ಅವಲಂಬನೆ ಹೆಚ್ಚಾಗಿದೆ.

ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ತುಮಕೂರು, ಮಂಡ್ಯ ಮತ್ತು ಮೈಸೂರಿನಲ್ಲಿ ಇಂತಹ ಪ್ರವೃತ್ತಿ ಢಾಳಾಗಿ ಕಾಣುತ್ತಿದೆ. ಕೋಲಾರ, ಕೊಪ್ಪಳ ಮತ್ತು ಬಳ್ಳಾರಿಯಲ್ಲಿ ಚಿರತೆಗಳು ಈ ರೀತಿ ವರ್ತಿಸುತ್ತಿರಲಿಲ್ಲ. ಆದರೆ ಈಚಿನ ವರ್ಷಗಳಲ್ಲಿ ಇಲ್ಲೂ ಅದೇ ರೀತಿಯ ವರ್ತನೆ ತಲೆದೋರುತ್ತಿದೆ. ಈ ಕಾರಣದಿಂದಲೇ ಈ ಪ್ರದೇಶಗಳಲ್ಲಿ ಚಿರತೆ–ಮಾನವ ಸಂಘರ್ಷ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ.

ಇದಕ್ಕೆ ಅಭಿವೃದ್ಧಿ ಚಟುವಟಿಕೆಗಳೇ ಪ್ರಮುಖ ಕಾರಣ. ಗಣಿಗಾರಿಕೆ, ರಸ್ತೆ–ಹೆದ್ದಾರಿ ನಿರ್ಮಾಣ, ಜಲಾಶಯ–ಕಿರುಜಲಾಶಯಗಳ ನಿರ್ಮಾಣದಿಂದ ಚಿರತೆಗಳ ಬಲಿ ಪ್ರಾಣಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಿದೆ. ಬಲಿ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿರುವ ಕಾರಣ ಚಿರತೆಗಳು ಆಹಾರ ಅರಸುತ್ತಾ ಮಾನವ ವಸತಿ ಪ್ರದೇಶಗಳತ್ತ ಬರುತ್ತಿವೆ. ಜಾನುವಾರುಗಳು ಮತ್ತು ನಾಯಿಗಳನ್ನು ಬೇಟೆಯಾಡುತ್ತಿವೆ (2019–2022ರ ನಡುವೆ ಮಂಡ್ಯ ಜಿಲ್ಲೆಯೊಂದರಲ್ಲೇ ಚಿರತೆಗಳು 516 ಜಾನುವಾರುಗಳನ್ನು ಬಲಿ ಪಡೆದಿವೆ). ಇದೇ ಸಂದರ್ಭದಲ್ಲಿ ಚಿರತೆ–ಮಾನವ ಸಂಘರ್ಷ ನಡೆಯುತ್ತಿದೆ. ದೇಶದಲ್ಲಿ ಅತಿಹೆಚ್ಚು ಚಿರತೆ–ಮಾನವ ಸಂಘರ್ಷ ಪ್ರಕರಣಗಳು ದಾಖಲಾಗಿರುವುದು ಕರ್ನಾಟಕದಲ್ಲಿ. 2018–2023ರ ಮಧ್ಯೆ ರಾಜ್ಯದಲ್ಲಿ ಇಂತಹ 100ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಇಂತಹ ಸಂಘರ್ಷಗಳನ್ನು ತಪ್ಪಿಸಲು ಪರಿಣಾಮಕಾರಿಯಾದ ಪರಿಹಾರ ಕ್ರಮವನ್ನು ರೂಪಿಸಬೇಕಿದೆ. ಅಂತಹ ಕೆಲಸಗಳು ತುರ್ತಾಗಿ ಆಗಬೇಕಿದೆ ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಆಧಾರ: ಭಾರತದಲ್ಲಿ ಚಿರತೆ ಸ್ಥಿತಿಗತಿ ವರದಿ–2022

‘ವಿದ್ಯಾಪತಿ’ಗೆ ಜೋಡಿಯಾದ ಮಲೈಕಾ

ಮಲೈಕಾ

ಚಿಕ್ಕಣ್ಣ ನಾಯಕರಾಗಿ ನಟಿಸಿರುವ ಚೊಚ್ಚಲ ಚಿತ್ರ ‘ಉಪಾಧ್ಯಕ್ಷ’ದ ಮೂಲಕ ತಮ್ಮ ಚಂದನವನದ ಪಯಣ ಆರಂಭಿಸಿದ್ದ ಮಲೈಕಾ ಟಿ. ವಸುಪಾಲ್ ಮತ್ತೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ.

ಕಿರುತೆರೆಯಲ್ಲಿ ‘ಹಿಟ್ಲರ್ ಕಲ್ಯಾಣ’ ಎಂಬ ಧಾರಾವಾಹಿಯಲ್ಲಿ ಮಿಂಚಿದ ದಾವಣಗೆರೆಯ ಮಲೈಕಾ ಇದೀಗ, ‘ಇಕ್ಕಟ್’, ‘ಟಗರುಪಲ್ಯ’ ಸಿನಿಮಾ ಖ್ಯಾತಿಯ ನಾಗಭೂಷಣ್ ನಟನೆಯ ‘ವಿದ್ಯಾಪತಿ’ ಸಿನಿಮಾದಲ್ಲಿ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ಸಿನಿಮಾದಲ್ಲಿ ಮಲೈಕಾ ‘ವಿದ್ಯಾ’ ಎಂಬ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದು, ಸರಳ ವ್ಯಕ್ತಿತ್ವದ ಹುಡುಗಿಯಾಗಿ ಕಾಣಿಸಿಕೊಳ್ಳಲಿದ್ದಾರಂತೆ. ‘ಡಾಲಿ’ ಧನಂಜಯ ತಮ್ಮ ಡಾಲಿ ಪಿಕ್ಚರ್ಸ್ ಮೂಲಕ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಸಿನಿಮಾದಲ್ಲಿ ಕರಾಟೆ ಕಿಂಗ್ ಆಗಿ ನಾಗಭೂಷಣ್ ಕಾಣಿಸಿಕೊಳ್ಳಲಿದ್ದಾರೆ. ‘ವಿದ್ಯಾಪತಿ’ ಡಾಲಿ ಪಿಕ್ಚರ್ಸ್‌ನ 4ನೇ ಸಿನಿಮಾವಾಗಿದ್ದು, ಈ ಹಿಂದೆ ನಾಗಭೂಷಣ್ ನಟನೆಯ ‘ಇಕ್ಕಟ್’ ಸಿನಿಮಾ ನಿರ್ದೇಶಿಸಿದ್ದ ಇಶಾಂ ಖಾನ್ ಹಾಗೂ ಹಸೀಂ ಖಾನ್ ಅವರೇ ಇದರ ಸಾರಥಿಗಳಾಗಿದ್ದಾರೆ. ಈ ಚಿತ್ರದ ಸಂಕಲನದ ಜವಾಬ್ದಾರಿಯನ್ನೂ ಅವರು ಹೊತ್ತುಕೊಂಡಿದ್ದಾರೆ.

ಆ್ಯಕ್ಷನ್ ಕಾಮಿಡಿ ಕಥಾಹಂದರ ಹೊಂದಿರುವ ‘ವಿದ್ಯಾಪತಿ’ ಚಿತ್ರಕ್ಕೆ ಲವಿತ್ ಛಾಯಾಚಿತ್ರಗ್ರಹಣವಿದೆ. ಇದೇ ತಿಂಗಳು ಸಿನಿಮಾದ ಚಿತ್ರೀಕರಣದಲ್ಲಿ ಮಲೈಕಾ ಭಾಗಿಯಾಗಲಿದ್ದಾರೆ ಎಂದಿದೆ ಚಿತ್ರತಂಡ.

‘ಸಾಮ್ರಾಟ್ ಮಂಧಾತ’ನ ಕಥೆ

ಸಾಯಿ ಪ್ರಕಾಶ್ ಅವರೊಂದಿಗೆ ಚಿತ್ರತಂಡ

ಸೂರ್ಯವಂಶದ ಸಾಮ್ರಾಟ್ ಮಂಧಾತನ ಕಥೆಯನ್ನು ಹೊಂದಿರುವ ‘ಸಾಮ್ರಾಟ್ ಮಂಧಾತ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಹೇಮಂತ್ ಕುಮಾರ್ ಈ ಚಿತ್ರವನ್ನು ನಿರ್ದೇಶಿಸಿ, ಹೇಮಂತ್ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣವನ್ನೂ ಮಾಡಿದ್ದಾರೆ.

‘ಇದು ಪೌರಾಣಿಕ ಚಿತ್ರ. ಅಭಿನಯಿಸಿರುವ ಎಲ್ಲರೂ ರಂಗಭೂಮಿ ಕಲಾವಿದರು. ಐದಾರು ತಿಂಗಳ ತರಬೇತಿ ಬಳಿಕ ಕ್ಯಾಮೆರಾ ಮುಂದೆ ಅಭಿನಯಿಸಿದ್ದಾರೆ. ಕರೋನಾ ಸಮಯದಲ್ಲಿ ಚಿತ್ರೀಕರಣ ಆರಂಭಿಸಿದ್ದೆವು. ವಿಎಫ್‌ಎಕ್ಸ್ ಜಾಸ್ತಿ ಇರುವುದರಿಂದ ಚಿತ್ರ ಮೂರು ವರ್ಷ ತೆಗೆದುಕೊಂಡಿತು. ಏಪ್ರಿಲ್‌ನಲ್ಲಿ ಬಿಡುಗಡೆ ಮಾಡುವ ಯೋಜನೆಯಿದೆ’ ಎಂದರು ನಿರ್ದೇಶಕರು.

‘ತ್ರೇತಾಯುಗದ ಆದಿಭಾಗದಲ್ಲಿ ಭೂಲೋಕದಲ್ಲಿ ಅಧರ್ಮ ಹೆಚ್ಚಾದಾಗ ಧರ್ಮದೇವ ಶನಿ ಮಹಾತ್ಮನ ಮೊರೆ ಹೋಗುತ್ತಾನೆ. ಆ ಸಂದರ್ಭದಲ್ಲಿ ಶನಿ ಮತ್ತು ಲಕ್ಷ್ಮಿಯ ನಡುವೆ ಯಾರು ಶ್ರೇಷ್ಠರೆಂದು ನಿರ್ಧರಿಸುವ ಕಥೆಯೇ ಈ ಚಿತ್ರ’ ಎಂದು ಅವರು ತಿಳಿಸಿದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮಾರ್ಚ್ 1, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಪಂಚಮಿ ಗಂ. 06-23 ನಕ್ಷತ್ರ: ಸ್ವಾತಿ ಗಂ. 12-49 ಯೋಗ: ಧ್ರುವ ಗಂ. 18-15 ಕರಣ: ತೈತಿಲ ಗಂ. 06-23, ಕುಂಭ ಮಾಸದ 17 ನೇ ದಿನ, ಮಳೆನಕ್ಷತ್ರ: ಶತಭಿಷ 4.

ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-50 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 19 ಶಬನ್
ಅದೃಷ್ಟ ಸಂಖ್ಯೆ : 2, 8

ಮೇಷ: ಅಧಿಕಾರಿಗಳೊಂದಿಗೆ ಹೊಂದಿಕೊಳ್ಳುವ ಗುಣ ಹಾಗೂ ಬುದ್ಧಿವಂತಿಕೆಯ ಸಾಮರ್ಥ್ಯ ಏಳಿಗೆಯಲ್ಲಿ ಮುಖ್ಯ ಪಾತ್ರವಹಿಸುವುದು. ಎಂಜಿನಿಯರ್‌ಗಳಿಗೆ ಉದ್ಯೋಗದಲ್ಲಿ ಉತ್ತಮ ಬದಲಾವಣೆಯ ಅವಕಾಶವಿದೆ.

ವೃಷಭ: ಒಡನಾಡಿಗಳ ಪ್ರೀತಿ, ವಿಶ್ವಾಸ ಸಹಕಾರದಿಂದ ಕಾರ್ಯಗಳನ್ನು ಸುಲಭದಲ್ಲಿ ಸಾಧಿಸುವಿರಿ. ಸ್ವಂತವಾಗಿ ವ್ಯಾಪಾರ ಮಾಡಲು ಯೋಚಿಸಿದ ನಿಮಗೆ ತಂದೆಯವರು ನೆರವಿಗೆ ನಿಲ್ಲಲಿದ್ದಾರೆ.

ಮಿಥುನ: ಧರ್ಮದ ವಿಚಾರದ ಬರವಣಿಗೆಗಾರರಿಗೆ, ಅಂಕಣಕಾರರಿಗೆ ಕೀರ್ತಿ ಲಭ್ಯವಾಗುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದೇಶ ಅಧ್ಯಯನದ ಯೋಗ ಸಿಗಲಿದೆ. ಕಾನೂನಿಗೆ ಸಂಬಂಧಪಟ್ಟ ಕೆಲಸಗಳಲ್ಲಿ ಜಯ ಸಿಗುವುದು.

ಕರ್ಕಾಟಕ: ಕಳೆದು ಹೋದ ಆಸ್ತಿಯ ಬಗ್ಗೆ ಯೋಚಿಸದೆ ವೃತ್ತಿಯಲ್ಲಿ ಶ್ರಮಪಡುವ ಮನೋಭಾವ ಬೆಳೆಸಿಕೊಳ್ಳಿರಿ. ಬುದ್ಧಿವಂತಿಕೆ ಮತ್ತು ಶೀಘ್ರ ಪ್ರತಿಕ್ರಿಯೆ ನೀಡುವ ಗುಣವನ್ನು ನಿಮ್ಮ ಮೇಲಧಿಕಾರಿಗಳು ಗುರುತಿಸುತ್ತಾರೆ.

ಸಿಂಹ: ಕಹಿ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕೇವಲ ಕ್ಷಣಿಕವಾದದ್ದು. ಗೃಹ ನಿರ್ಮಾಣ ಮಾಡುವ ಆಲೋಚನೆಯು ಕುಟುಂಬ ಸದಸ್ಯರ ಸಂತಸಕ್ಕೆ ಕಾರಣವಾಗುತ್ತದೆ.

ಕನ್ಯಾ: ಕಷ್ಟಬಂದರೂ ನೀವು ನಿಮ್ಮ ಗುರಿಯನ್ನು ಸಾಧಿಸಿಯೇ ತೀರುತ್ತೀರಿ. ಅದರ ಪರಿಣಾಮ ಜೀವನದ ಮುಂದಿನ ಹಾದಿಯು ಸುಗಮವಾಗಲಿದೆ. ಸಮಯದ ಅಭಾವವು ನಷ್ಟವನ್ನು ಒಪ್ಪಿಕೊಳ್ಳಬೇಕಾಗುವಂತೆ ಮಾಡುವುದು.

ತುಲಾ: ಹಲವು ದಿನಗಳಿಂದ ಇರುವ ಕಷ್ಟಕರ ಪರಿಸ್ಥಿತಿಯು ಆಹ್ಲಾದಕರ ರೀತಿಯಲ್ಲಿ ಮುಗಿದು ಹೋಗುವುದು. ನಿಮ್ಮ ಸಲಹೆಗಳಿಗಾಗಿ ಜನರು ನಿಮ್ಮನ್ನು ಸಂದರ್ಶಿಸುವಂತಾಗಲಿದೆ. ಆರ್ಥಿಕ ಪರಿಸ್ಥಿತಿಗಳು ಸದ್ಯದಲ್ಲೇ ಸುಧಾರಿಸಲಿದೆ.

ವೃಶ್ಚಿಕ: ರಿಯಲ್ ಎಸ್ಟೇಟ್ ವ್ಯವಹಾರದವರು ಉತ್ತಮ ಹಾಗೂ ಧನಾತ್ಮಕವಾದ ವ್ಯವಹಾರವೊಂದನ್ನು ತಮ್ಮದಾಗಿಸಿಕೊಳ್ಳುವರು. ಬದುಕನ್ನು ಒಂದು ವ್ಯವಸ್ಥೆಗೆ ತರಲು ದಿನದ ಅಲ್ಪ ಸಮಯವನ್ನು ಮೀಸಲಿಡಿ.

ಧನು: ಸಾಧು ಸಂತರ ದರ್ಶನ ಭಾಗ್ಯದಿಂದ ಎಲ್ಲಾ ಕೆಲಸಗಳು ಗುರಿ ತಲುಪಲಿವೆ. ಮಾತೃ ಸಹಕಾರ ಕೂಡ ಈ ದಿನ ನಿಮಗೆ ದೊರೆಯಲಿದೆ. ಸಿಹಿತಿನಿಸು ಮಾರಾಟಗಾರರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಮಕರ: ಅದ್ಭುತವಾದ ಆಲೋಚನೆಗಳಿವೆ. ಅದನ್ನು ಕಾರ್ಯರೂಪಕ್ಕೆ ತರಲು ಸೃಜನಶೀಲ ಗೆಳೆಯರನ್ನು ಆರಿಸಿಕೊಳ್ಳಬೇಕಷ್ಟೆ. ಮಹಾಗಣಪತಿಯನ್ನು ಆರಾಧಿಸುವುದರಿಂದ ಶುಭಫಲ ಪ್ರಾಪ್ತಿಯಾಗುತ್ತದೆ.

ಕುಂಭ: ಇಂದು ಬಹಳ ಶಾಂತರೀತಿಯಿಂದ ವರ್ತಿಸುವುದು ಅನಿವಾರ್ಯ. ಅದರಿಂದಾಗಿ ಮನೆಯಲ್ಲಿ ಸಂತಸದ ವಾತವರಣ ಸೃಷ್ಟಿಯಾಗಲಿದೆ. ಸಿನಿಮಾ ರಂಗದವರಿಗೆ ಹೆಚ್ಚಿನ ಅವಕಾಶ ಲಭಿಸುವುದು.

ಮೀನ: ಮಹತ್ವದ ಕಾರ್ಯಾಚರಣೆಗಾಗಿ ಅಥವಾ ದೇವರ ದರ್ಶನಕ್ಕಾಗಿ ದೂರ ಪ್ರಯಾಣ ಕಂಡುಬರುವುದು. ಶೈಕ್ಷಣಿಕ ರಂಗದ ಉನ್ನತ ಅಧಿಕಾರಿಗಳಿಗೆ ವರ್ಗಾವಣೆ ಸಾಧ್ಯತೆಗಳಿವೆ. ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ವಹಿಸಿರಿ.

ನುಡಿ ಬೆಳಗು

ಪ್ರೊ. ಎಂ. ಕೃಷ್ಣೇಗೌಡ

ಕಪ್ಪೆಂದರೆ ಕನಿಷ್ಠವೇ?

ಬಿಳುಪಿನ ಹುಚ್ಚು ಹಿಡಿದಿದೆ ಜನಕ್ಕೆ...

ಮೊನ್ನೆ ಅಯೋಧ್ಯೆಯಲ್ಲಿ ಪ್ರತಿಷ್ಠಾಪಿತವಾದ ಬಾಲರಾಮನ ಮೂರ್ತಿ ಅರಳಿರುವುದೇ ಕಪ್ಪು ಶಿಲೆಯಲ್ಲಿ. ರಾಮ, ಕೃಷ್ಣರೆಲ್ಲ ನಮ್ಮ ಪೌರಾಣಿಕ ಕಲ್ಪನೆಯಲ್ಲಿ ಕಪ್ಪು ಸುಂದರರೇ. ಶಕ್ತಿದೇವತೆ ಕಾಳಿಯೂ ಕಪ್ಪೇ. ಕೃಷ್ಣ ಮತ್ತು ಕಾಳಿ ಎಂಬ ಶಬ್ದಗಳ ಅರ್ಥವೇ ಕಪ್ಪು. ಬಹುಶಃ ನಮ್ಮ ದೇವತೆಗಳ ರೂಪಕಲ್ಪನೆ ಮಾಡಿದ ಕಾಲದಲ್ಲಿ ಕಪ್ಪು ಎಂದರೆ ಕನಿಷ್ಠ, ಬಿಳುಪು ಎಂದರೆ ಶ್ರೇಷ್ಠ ಎಂಬ ಈ (ಅ) ಸಾಂಸ್ಕೃತಿಕ ಅಭಿಪ್ರಾಯವೇ ಇರಲಿಲ್ಲ. ಅದೆಲ್ಲಾ ಕಾಲಾನಂತರದಲ್ಲಿ ಆದ ಪ್ರಮಾದ.

ನಮ್ಮ ಜನಕ್ಕೆ ಬಿಳುಪೆಂದರೆ ಅದೇನೋ ಮೋಹ. ಕಪ್ಪಗಿರುವ ಹುಡುಗ ಬಿಳಿಯ ಹುಡುಗಿಯನ್ನೇ ಮದುವೆಯಾಗಬೇಕು. ಕಪ್ಪು ಹುಡುಗಿಗೂ ಬಿಳಿಯ ಹುಡುಗನೇ ಬೇಕು. ನಮ್ಮ ಬಿಳಿಯ ಚರ್ಮದ ಮೋಹವನ್ನೇ ಬಂಡವಾಳ ಆಗಿಸಿಕೊಂಡ ಕಂಪನಿಗಳು ಮೂರು ವಾರದಲ್ಲೋ, ಆರು ವಾರದಲ್ಲೋ ನಮ್ಮ ಕಪ್ಪು ಚರ್ಮವನ್ನು ಬಿಳಿಯಾಗಿಸುವ ಆಸೆ ಹುಟ್ಟಿಸಿ, ಬಗೆ ಬಗೆ ಕ್ರೀಮ್, ಲೋಷನ್‌ಗಳನ್ನು ತಯಾರಿಸಿ, ಸಹಜ ಚರ್ಮಕ್ಕೆ ಕೆಮಿಕಲ್ ಮೆತ್ತಿಸಿ ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿ ಬಾಚಿಕೊಳ್ಳುತ್ತವೆ.

ಇನ್ನು ನಮ್ಮ ಬಟ್ಟೆಗಳನ್ನೂ ಬೆಳ್ಳಗೆ...ಇನ್ನೂ ಬೆಳ್ಳಗೆ ಝಗಮಗಿಸುವಂತೆ ಒಗೆಯಲು ರಾಸಾಯನಿಕಗಳನ್ನು ಸುರಿದು ‘ಎಕ್ಸ್ ಟ್ರಾ ವೈಟ್’, ‘ಅಲ್ಟ್ರಾ ವೈಟ್", ಡಿಟರ್ಜೆಂಟ್ ಪುಡಿ, ಸಾಬೂನುಗಳನ್ನು ತಯಾರಿಸುತ್ತವೆ. ಬಾತ್ ರೂಂಗಳನ್ನು ಬೆಳ್ಳಗೆ ಲಕಲಕ ಹೊಳೆಯುವಂತೆ ಮಾಡಲು ಈ ರಾಸಾಯನಿಕಗಳೇ ಬೇಕು. ಅದರಿಂದಾಗಿ ನಮ್ಮ ಒಳಚರಂಡಿಯ ತುಂಬಾ ರಾಸಾಯನಿಕವೇ ಹರಿಯುತ್ತದೆ. ಆ ನೀರನ್ನು ಉಪಯೋಗಿಸಿ ಬೆಳೆಯುವ ಸೊಪ್ಪು ತರಕಾರಿಗಳಲ್ಲೂ ಆ ರಾಸಾಯನಿಕಗಳೇ ತುಂಬಿಕೊಂಡಿರುತ್ತವೆ. ಆ ಮೂಲಕವಾಗಿ ನಮ್ಮ ದೇಹದೊಳಕ್ಕೂ ಬಂದು ತುಂಬಿಕೊಳ್ಳುತ್ತವೆ. ಒಟ್ಟಿನಲ್ಲಿ ನಮಗೆ ಬೆಳ್ಳಗಿದ್ದುದೆಲ್ಲಾ ಹಾಲು.

ನಮ್ಮ ಸಮಾಜದಲ್ಲಿ ಅದು ಯಾಕೋ, ಹೇಗೋ, ಯಾವಾಗಲೋ ಬೆಳ್ಳಗಿರುವ ಜನ ಶ್ರೇಷ್ಠರು ಕಪ್ಪಗಿರುವವರು ಕನಿಷ್ಠರು ಎಂದೂ ಆಗಿಹೋಯಿತು. ಬರುಬರುತ್ತಾ ಕಪ್ಪು ಎನ್ನುವುದು ಅಜ್ಞಾನ, ಅನಕ್ಷರತೆ, ಬಡತನ, ಎಂದೂ ಬಿಳುಪು ಎನ್ನುವುದು ಜ್ಞಾನ, ವಿದ್ಯೆ, ಸಿರಿವಂತಿಕೆ ಎಂದೂ ಸಂಕೇತಗೊಂಡಿತು.

ಸೌಂದರ್ಯವೆನ್ನುವುದು ಬಿಳಿಯ ಬಣ್ಣದಲ್ಲಿದೆ, ಕಪ್ಪಿನಲ್ಲಿರುವುದು ಕುರೂಪ ಎಂಬುದು ಅನ್ಯಾಯದ ತಿಳಿವಳಿಕೆ. ಬಣ್ಣಕ್ಕಿಂತ ಗುಣ, ಜ್ಞಾನ, ಅಂತಃಕರಣ ಮುಖ್ಯ ಎಂಬ ಅರಿವಿರುವುದು ಪ್ರಬುದ್ಧ ಸಮಾಜದ ಲಕ್ಷಣ. ಕಪ್ಪು ಅಥವಾ ಕಂದು ಬಣ್ಣದ ಚರ್ಮ ಇರುವ ಭಾರತೀಯರು ಬಿಳಿಯ ತ್ವಚೆ ಎಂಬುದೇ ಸುಂದರ, ಶ್ರೇಷ್ಠ ಎಂದು ಭಾವಿಸುವುದು ಕೂಡಾ ನಮ್ಮನ್ನು ನಾವೇ ಅವಮಾನಿಸಿಕೊಂಡಂತೆ ಅನ್ನಿಸುವುದಿಲ್ಲವೆ?

ಪದಬಂಧ 5607

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶ್ರೇಷ್ಠವಾದುದು ಇದು (3)
3.ಇಂಪಾದ ಧ್ವನಿ (3)
5.ಜನಪ್ರಿಯನಾದವ ರಾಗಿ ಹಿಡಿದಿದ್ದಾನಲ್ಲಾ? (5)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ನೆನಪಿನಿಂದ ಮಾಸದ ತಿಂಗಳು! (2)
9.ಕಠೋರ ಕೈ! (2)
10.ಕನಸು ಕಾಣುತ್ತಾ ತೋರಿದ ಬಲ! (2)
14.ಅಂತರಂಗಸ್ಪರ್ಶಿಯಾದುದು (5)
15.ಬಲಶಾಲಿ ನುಡಿಸುತ್ತಿರುವ ಚರ್ಮವಾದ್ಯ (3)
16.ಅನೇಕ ಚಿಕ್ಕ ಚಿಕ್ಕ ಮನೆಗಳ ಆವಾರ (3)

ಮೇಲಿಂದ ಕೆಳಕ್ಕೆ

1.ಯೋಗವಿದ್ದಾಗಲೇ ಇದು ಪ್ರಯೋಜನ! (4)
2.ಮಜವಾಗಿ ಕಾಣುತ್ತಿರುವ ಹಂತ (3)
3.ಅಭಿಪ್ರಾಯವನ್ನು ಹೀಗೆನ್ನಿ (3)
4.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
7.ಹೆಂಡತಿಯನ್ನು ಕಳೆದುಕೊಂಡವನು (3)
8.ಅಳೆಯುವ ಸಾಧನವಿದು (3)
9.ಉಗುರು ತೋರಿಸಿದ ಶಿಷ್ಯ! (4)
11.ಕೋಮಲವಾದ ಶರೀರವುಳ್ಳವನು (4)
12.ನೈದಿಲೆ ಇಲ್ಲಿದೆ (3)
13.ಈತ ಬಲು ಪೆದ್ದ (3)



5606ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಸರ್ವನಾಶ 5.ಸಮಯ
6.ವರ್ತಮಾನ 8.ಯಮಭಾರ
12.ಅಂತರಿಕ್ಷ 14.ಅನುರಾಗ
15.ಪಗಾರ1 6.ಸಭಾತ್ಯಾಗ

ಮೇಲಿಂದ ಕೆಳಕ್ಕೆ:
1.ಅಸಹಕಾರ 2.ಆಯವ್ಯಯ
3.ಸರೋವರ 4.ಶಮನ
7.ಮಾಫಿ 9.ಭಾರತ
10.ಗೊಡ್ಡುಹರಟೆ
11.ಪಾನು 12.ಅಂಗರಾಗ
13.ಕ್ಷಮಾಪಣೆ 14.ಅಗಸ

ಸುಡೊಕು 5992

2		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5991 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,951
ಇಂದಿನ ಅಂತ್ಯ	21,982
▲	31
ದಿನದ ಗರಿಷ್ಠ	22,060

ವಿನಿಮಯ ದರ

$ ಡಾಲರ್	82.89
£ ಪೌಂಡ್	105.03
€ ಯುರೊ	89.99
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100ಕ್ಕೆ	₹520
12 ಕ್ಕೆ	₹70

ಮೈಸೂರು

100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1520 (1510)
ಸೋಯಾ (ರಿಫೈನ್ಡ್)	₹930 (940)
ಸೂರ್ಯಕಾಂತಿ (ರಿಫೈನ್ಡ್)	₹925 (927)
ಪಾಮೋಲಿನ್	₹875 (870)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹339-460

ದ್ವಿತಳಿ (ಬಿ.ವಿ) ₹288-576

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹163.50

ಆರ್‌ಎಸ್‌ಎಸ್-5 ₹158.50

ಗುಡ್ ಲಾಟ್ ₹144

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8600-8600
ಪುತ್ತೂರು	₹5500-9500
ತಿಪಟೂರು	₹7500-8600

ಸುಧಾ, ಮಯೂರ ಓದಿ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಮೊದಲ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ತುಳಸಮ್ಮ

ಜನನ: 10.11.1937 ಮರಣ: 11.02.2023

ನಿಮ್ಮ ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸ್ಮರಿಸುವ

ದುಃಖತಪ್ತ ಕುಟುಂಬ

ಬಿ ವೀರ ಕುಮಾರ್ ಕುಟುಂಬದವರು ಹಾಗು ಸಹೋದರರು

ಪ್ರಥಮ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ವೆಂಕಟಮ್ಮ

(ಶ್ರೀ ಎಂ. ಪುಟ್ಟಪ್ಪನವರ ಧರ್ಮಪತ್ನಿ ಮಾಜಿ ಉಪಾಧ್ಯಕ್ಷರು, ಮುಳ್ಳೂರು)

" ನೀವು ನಮ್ಮನ್ನಗಲಿ ಇಂದಿಗೆ ವರುಷ ಕಳೆದರೂ ನಿಮ್ಮ ನೆನಪು ನಮ್ಮ ಮನೆ ಮನಗಳಲ್ಲಿ ಸದಾ ಚಿರಸ್ಮರಣೀಯ ಸದಾ ನಿಮ್ಮ ನೆನಪಿನಲ್ಲಿರುವ "

ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕುಟುಂಬದವರು.

9448138565

5ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಮುದ್ದುಲಕ್ಷ್ಮಮ್ಮ

(ಲೇಟ್ ಜಿ.ಅಶ್ವಥಯ್ಯನವರ ಧರ್ಮಪತ್ನಿ)

ಯಲಹಂಕ, ಬೆಂಗಳೂರು-560064

ನೀವು ನಮ್ಮನ್ನಗಲಿ 5 ವರ್ಷ ಕಳೆಯಿತು. ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ. ನಿಮ್ಮ ಆದರ್ಶಗಳೇ ನಮಗೆ ದಾರಿದೀಪ.

ಇಂತಿ ಶ್ರೀ ವೈ.ಎ.ಶ್ರೀನಿವಾಸಮೂರ್ತಿ ಮತ್ತು ಸಹೋದರರು.

ಮೊ.9845278780, 9845538678

LOOKING TO BUILD, BUY OR SELL A PROPERTY

Please refer Classifieds on Sunday

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)

ಕೋಕ	18000-28500
ಹೊಸತು	28500-34000
ಹಳತು	34000-42500
ಕಾರ್ಕಳ	
ಹೊಸತು	25000-34500
ಹಳತು	30000-43500
ಕುಮಟ	
ಚಿಪ್ಪು	23769-27466
ಕೋಕ	13769-26767
ಹಳೆಚಾಲಿ	33559-35699
ಹೊಸಚಾಲಿ	28869-33279
ಪುತ್ತೂರು	
ಕೋಕ	11500-26000
ಹೊಸತು	26500-34000
ಸಾಗರ	
ಬಿಳಿಗೋಟು	18099-23811
ಚಾಲಿ	24699-34301
ಕೋಕ	16011-26099
ಕೆಂಪುಗೋಟು	20111-33109
ರಾಶಿ	27299-47949
ಸಿಪ್ಪೆಗೋಟು	7119-17329
ಶಿವಮೊಗ್ಗ	
ಬೆಟ್ಟೆ	42000-54569
ಗೊರಬಲು	15111-34119
ರಾಶಿ	30009-47800
ಸರಕು	50100-83396

ರಿಲಯನ್ಸ್ ಷೇರು ಏರಿಕೆ

ನವದೆಹಲಿ (ಪಿಟಿಐ): ವಾಲ್ಟ್ ಡಿಸ್ನಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಜಂಟಿ ಉದ್ಯಮ ಒಪ್ಪಂದಕ್ಕೆ ಸಹಿ ಹಾಕಿರುವ ಬೆನ್ನಲ್ಲೇ ರಿಲಯನ್ಸ್ ಷೇರಿನ ಮೌಲ್ಯ ಗುರುವಾರ ಶೇ 1ರಷ್ಟು ಏರಿಕೆ ಕಂಡಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್‌ನಲ್ಲಿ ಷೇರಿನ ಮೌಲ್ಯ ಶೇ 0.54 ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿಯಲ್ಲಿ ಶೇ 0.66ರಷ್ಟು ಏರಿಕೆ ಆಗಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹2,924.75 ಮತ್ತು ₹2,930.75ಕ್ಕೆ ತಲುಪಿದೆ.

ದಿನದ ವಹಿವಾಟಿನಲ್ಲಿ ಷೇರಿನ ಮೌಲ್ಯವು ಶೇ 2ರಷ್ಟು ಏರಿಕೆಯಾಗಿತ್ತು. ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ ₹19.78 ಲಕ್ಷ ಕೋಟಿಗೆ ಮುಟ್ಟಿದೆ.

ಷೇರು ಸೂಚ್ಯಂಕಗಳು ಏರಿಕೆ: ಸೆನ್ಸೆಕ್ಸ್ 195 ಅಂಶ ಏರಿಕೆಯಾಗಿ 72,500ಕ್ಕೆ ಸ್ಥಿರಗೊಂಡಿತು. ನಿಫ್ಟಿ 31 ಅಂಶ ಏರಿಕೆ ಕಂಡು 21,982ಕ್ಕೆ ಅಂತ್ಯಗೊಂಡಿತು.

ತಗ್ಗಿದ ಎಫ್‌ಡಿಐ ಒಳಹರಿವು

ನವದೆಹಲಿ (ಪಿಟಿಐ): 2023-24ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಭಾರತಕ್ಕೆ ವಿದೇಶಿ ನೇರ ಬಂಡವಾಳದ (ಎಫ್‌ಡಿಐ) ಒಳಹರಿವು ಶೇ13ರಷ್ಟು ಕಡಿಮೆಯಾಗಿದೆ. ಈ ಅವಧಿಯಲ್ಲಿ ಒಟ್ಟು ₹2.65 ಲಕ್ಷ ಕೋಟಿಯಷ್ಟೇ ಹರಿದು ಬಂದಿದೆ.

2022-23ರ ಇದೇ ಅವಧಿಯಲ್ಲಿ ₹3.04 ಲಕ್ಷ ಕೋಟಿ ಎಫ್‌ಡಿಐ ಭಾರತಕ್ಕೆ ಬಂದಿತ್ತು. ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್‌ವೇರ್, ದೂರಸಂಪರ್ಕ, ಆಟೊ ಮತ್ತು ಫಾರ್ಮ್ ವಲಯದಲ್ಲಿ ಹೂಡಿಕೆ ಕಡಿಮೆ ಆಗಿರುವುದೇ ಇಳಿಕೆಗೆ ಕಾರಣವಾಗಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ತಿಳಿಸಿದೆ.

2022-23ರ ಮೂರನೇ ತ್ರೈಮಾಸಿಕದಲ್ಲಿ ₹81,500 ಕೋಟಿ ಎಫ್‌ಡಿಐ ಹರಿವು ಬಂದಿತ್ತು. ಇದಕ್ಕೆ ಹೋಲಿಸಿದರೆ ಡಿಸೆಂಬರ್ ತ್ರೈಮಾಸಿಕದಲ್ಲಿ ಒಳಹರಿವು ಶೇ 18ರಷ್ಟು ಹೆಚ್ಚಾಗಿದ್ದು, ಒಟ್ಟು ₹91,175 ಕೋಟಿಗೆ ತಲುಪಿದೆ.

ಕರ್ನಾಟಕದಲ್ಲಿ ಕುಸಿತ: ರಾಜ್ಯಗಳವಾರು ಎಫ್‌ಡಿಐ ಆಕರ್ಷಿಸುವಲ್ಲಿ ಮಹಾರಾಷ್ಟ್ರವು ಅಗ್ರಸ್ಥಾನದಲ್ಲಿದೆ. ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ₹1 ಲಕ್ಷ ಕೋಟಿ ಹರಿವು ಬಂದಿದೆ. 2022-23ನೇ ಸಾಲಿನಡಿ ಇದೇ ಅವಧಿಯಲ್ಲಿ ₹89,211 ಕೋಟಿ ಎಫ್‌ಡಿಐ ಬಂದಿತ್ತು.

ಕರ್ನಾಟಕವು ಬಂಡವಾಳ ಆಕರ್ಷಿಸುವುದರಲ್ಲಿ ಹಿಂದೆ ಬಿದ್ದಿದೆ. ಏಪ್ರಿಲ್-ಡಿಸೆಂಬರ್ ನಡುವೆ ಕರ್ನಾಟಕಕ್ಕೆ ₹29,847 ಕೋಟಿಯಷ್ಟು ಎಫ್‌ಡಿಐ ಹರಿದು ಬಂದಿದೆ. 2022ರ ಇದೇ ಅವಧಿಯಲ್ಲಿ ₹72,712 ಕೋಟಿ ಹರಿದು ಬಂದಿತ್ತು. ಈ ಪಟ್ಟಿಯಲ್ಲಿ ನವದೆಹಲಿ, ತಮಿಳುನಾಡು, ಪಶ್ಚಿಮ ಬಂಗಾಳ, ರಾಜಸ್ಥಾನ ಮತ್ತು ಹರಿಯಾಣ ಕೂಡ ಸೇರಿವೆ. ಈ ರಾಜ್ಯಗಳಿಗೆ ಹೋಲಿಸಿದರೆ ಗುಜರಾತ್, ತೆಲಂಗಾಣ ಮತ್ತು ಜಾರ್ಖಂಡ್‌ನಲ್ಲಿ ಎಫ್‌ಡಿಐ ಒಳಹರಿವು ಹೆಚ್ಚಿದೆ.

2023-24ನೇ ಹಣಕಾಸು ವರ್ಷ: 3ನೇ ತ್ರೈಮಾಸಿಕದಲ್ಲಿ ಶೇ 8.4ರಷ್ಟು ದಾಖಲು

ಜಿಡಿಪಿ: ಶೇ 7.6ರಷ್ಟು ಪ್ರಗತಿ ನಿರೀಕ್ಷೆ

ನವದೆಹಲಿ (ಪಿಟಿಐ): 2023-24ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ) ಶೇ 8.4ರಷ್ಟು ದಾಖಲಾಗಿದೆ.

ಆರ್ಥಿಕ ತಜ್ಞರು, ಹಣಕಾಸು ಸಂಸ್ಥೆಗಳು, ಕ್ರೆಡಿಟ್ ರೇಟಿಂಗ್ ಸಂಸ್ಥೆಗಳು ಅಂದಾಜಿಸಿದ್ದ ಲೆಕ್ಕಾಚಾರವನ್ನು ಮೀರಿ ಜಿಗಿತ ಕಂಡಿದೆ.

ಕಳೆದ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಪ್ರಗತಿಯು ಶೇ 4.3 ರಷ್ಟು ದಾಖಲಾಗಿತ್ತು. ತಯಾರಿಕಾ ವಲಯ, ಗಣಿಗಾರಿಕೆ ಮತ್ತು ನಿರ್ಮಾಣ ವಲಯವು ಸಕಾರಾತ್ಮಕ ಬೆಳವಣಿಗೆ ಕಂಡಿರುವುದೇ ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಏರಿಕೆಗೆ ಕಾರಣವಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಇಲಾಖೆಯು (ಎನ್‌ಎಸ್‌ಒ) ಗುರುವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

ಜಿಡಿಪಿ ಬೆಳವಣಿಗೆ ದಾಖಲು (ಶೇಕಡಾವಾರು)

ಅಲ್ಲದೆ, 2023-24ರ ಹಣಕಾಸು ವರ್ಷದಲ್ಲಿ ಜಿಡಿಪಿಯು ಶೇ 7.3ರಷ್ಟು ಪ್ರಗತಿ ಕಾಣಲಿದೆ ಎಂದು ಜನವರಿಯಲ್ಲಿ ಬಿಡುಗಡೆಗೊಂಡಿದ್ದ ಎನ್‌ಎಸ್‌ಒ ವರದಿಯಲ್ಲಿ ಅಂದಾಜಿಸಲಾಗಿತ್ತು. ಈಗಿನ ವರದಿಯಲ್ಲಿ ಇದನ್ನು ಪರಿಷ್ಕರಿಸಿದ್ದು, ಶೇ7.6ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಹೇಳಿದೆ.

ಕಳೆದ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಶೇ 4.8ರಷ್ಟು ಬೆಳವಣಿಗೆ ಕಂಡಿದ್ದ, ತಯಾರಿಕಾ ವಲಯವು ಈ ಅವಧಿಯಲ್ಲಿ ಶೇ 11.5ರಷ್ಟು ಬೆಳವಣಿಗೆ ದಾಖಲಿಸಿದೆ. ಗಣಿಗಾರಿಕೆಯು ಶೇ 1.4ರಿಂದ ಶೇ 7.5ರಷ್ಟು ಬೆಳವಣಿಗೆ ಕಂಡಿದೆ. ನಿರ್ಮಾಣ ವಲಯವು ಶೇ 9.5ರಷ್ಟು ಪ್ರಗತಿ ಸಾಧಿಸಿದೆ.

ಆದರೆ, ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 5.2ರಷ್ಟು ಬೆಳವಣಿಗೆ ಕಂಡಿದ್ದ ಕೃಷಿ ವಲಯವು, ಶೇ 0.8ರಷ್ಟು ಇಳಿಕೆ ದಾಖಲಿಸಿದೆ. ಉಳಿದಂತೆ ವಿದ್ಯುತ್, ಅನಿಲ, ನೀರು ಪೂರೈಕೆ ಸೇರಿದಂತೆ ಇತರೆ ಸೇವಾ ವಲಯಗಳು ಶೇ 8.7ರಿಂದ ಶೇ 9ರಷ್ಟು ಬೆಳವಣಿಗೆ ದಾಖಲಿಸಿವೆ.

2022-23ರಲ್ಲಿ ₹269.50 ಲಕ್ಷ ಕೋಟಿ ಇದ್ದ ಜಿಡಿಪಿ ಗಾತ್ರವು 2023-24ರಲ್ಲಿ ₹293.90 ಕೋಟಿಗೆ ತಲುಪಲಿದೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಆರ್ಥಿಕತೆಯ ಗಾತ್ರವು ಶೇ 9.1ರಷ್ಟು ಏರಿಕೆಯಾಗಲಿದೆ ಎಂದು ವರದಿ ತಿಳಿಸಿದೆ.

ಸೌರ ಫಲಕ ಅಳವಡಿಕೆ: ಪ್ರತಿ ಕುಟುಂಬಕ್ಕೆ ₹78 ಸಾವಿರ ನೆರವು

ಪಿಎಂ ಸೂರ್ಯ ಘರ್‌ಗೆ ಸಂಪುಟ ಅಸ್ತು

ನವದೆಹಲಿ (ಪಿಟಿಐ): ದೇಶದಲ್ಲಿ ಸೌರ ವಿದ್ಯುತ್ ಬಳಕೆಗೆ ಉತ್ತೇಜನ ನೀಡಲು ಆರಂಭಿಸಿರುವ ₹75,021 ಕೋಟಿ ಮೊತ್ತದ 'ಪಿಎಂ ಸೂರ್ಯ ಘರ್: ಮುಫ್ತ್ ಬಿಜ್ಲಿ ಯೋಜನೆ'ಗೆ ಗುರುವಾರ ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ.

ಸಭೆಯ ಬಳಿಕ ಮಾತನಾಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, 'ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಯೋಜನೆಗೆ ಅನುಮೋದನೆ ಸಿಕ್ಕಿದೆ. ಇದರಡಿ ಒಂದು ಕೋಟಿ ಮನೆಗಳಿಗೆ ಪ್ರತಿ ತಿಂಗಳು ತಲಾ 300 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಸುವ ಗುರಿ ಹೊಂದಲಾಗಿದೆ' ಎಂದು ಮಾಹಿತಿ ನೀಡಿದರು.

ಫೆಬ್ರುವರಿ 13ರಂದು ಯೋಜನೆಗೆ ಚಾಲನೆ ನೀಡಲಾಗಿದೆ. ಮನೆಯ ತಾರಸಿ ಮೇಲೆ ಸೌರ ವಿದ್ಯುತ್ ಫಲಕ ಅಳವಡಿಸಿಕೊಳ್ಳಲು ಮುಂದಾಗುವ ಪ್ರತಿ ಕುಟುಂಬಕ್ಕೆ ಯೋಜನೆಯಡಿ ಸಬ್ಸಿಡಿ ದೊರೆಯಲಿದೆ.

2 ಕಿಲೋವಾಟ್‌ವರೆಗಿನ ಉಪಕರಣ ಅಳವಡಿಸಿಕೊಳ್ಳುವ ಪ್ರತಿ ಮನೆಯ ಯೋಜನಾ ವೆಚ್ಚದ ಶೇ 60ರಷ್ಟು ಹಣವನ್ನು ಕೇಂದ್ರವೇ ಭರಿಸಲಿದೆ. ಅಲ್ಲದೆ, 2ರಿಂದ 3 ಕಿಲೋವಾಟ್ ಅಳವಡಿಕೊಳ್ಳಲು ಮುಂದಾಗುವ ಫಲಾನುಭವಿಗಳಿಗೆ ಶೇ 40ರಷ್ಟು ಹಣ ನೀಡಲಿದೆ. 3 ಕಿಲೋವಾಟ್‌ವರೆಗಷ್ಟೇ ಆರ್ಥಿಕ ನೆರವು ಸಿಗಲಿದೆ. 1 ಕಿಲೋವಾಟ್‌ಗೆ ₹30 ಸಾವಿರ, 2 ಕಿಲೋ ವಾಟ್‌ಗೆ ₹60 ಸಾವಿರ ಹಾಗೂ 3 ಕಿಲೋವಾಟ್ ಸಾಮರ್ಥ್ಯದ ಸೌರ ಫಲಕ ಅಳವಡಿಸಿಕೊಂಡರೆ ₹78 ಸಾವಿರ ಸಬ್ಸಿಡಿ ಸಿಗಲಿದೆ.

ರಸಗೊಬ್ಬರ ಸಬ್ಸಿಡಿಗೆ ₹24 ಸಾವಿರ ಕೋಟಿ

ನವದೆಹಲಿ (ಪಿಟಿಐ): 2024-25ನೇ ಸಾಲಿನ ಖಾರೀಫ್ ಋತುವಿಗೆ (ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ವರೆಗೆ) ಫಾಸ್ಫೇಟ್ ಮತ್ತು ಪೊಟ್ಯಾಷಿಯಂ (ಪಿ ಆ್ಯಂಡ್ ಕೆ) ರಸಗೊಬ್ಬರಗಳಿಗೆ ₹24,240 ಕೋಟಿ ಸಬ್ಸಿಡಿಗೆ ಮಂಜೂರಾತಿ ನೀಡಲು ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಡಿಎಪಿ ₹1,350ಕ್ಕೆ (50 ಕೆ.ಜಿ ಚೀಲ) ದೊರೆಯಲಿದೆ.

ಇದರ ಹೊರತಾಗಿ ಇತರೆ ರಸಗೊಬ್ಬರಗಳ ಚಿಲ್ಲರೆ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಪ್ರತಿ ಕೆ.ಜಿ ನೈಟ್ರೋಜನ್‌ಗೆ ₹47.02, ಫಾಸ್ಫರಸ್ ₹28.72, ಪೊಟ್ಯಾಷ್ ₹2.38 ಹಾಗೂ ಸಲ್ಫರ್‌ಗೆ ₹1.89 ಸಬ್ಸಿಡಿ ನೀಡಲಾಗಿದೆ. 50 ಕೆ.ಜಿ ತೂಕದ ಪ್ರತಿ ಚೀಲ ಎಂಒಪಿ (ಮ್ಯೂರೇಟ್ ಆಫ್ ಪೊಟ್ಯಾಷ್) ₹1,670, ಎನ್‌ಪಿಕೆ ₹1,470ಕ್ಕೆ ದೊರೆಯಲಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಏರ್ ಇಂಡಿಯಾಗೆ ₹30 ಲಕ್ಷ ದಂಡ

ನವದೆಹಲಿ: ಎಂಬತ್ತು ವರ್ಷದ ಹಿರಿಯ ನಾಗರಿಕರೊಬ್ಬರಿಗೆ ಸಕಾಲದಲ್ಲಿ ವ್ಹೀಲ್‌ಚೇರ್ ಒದಗಿಸಲು ನಿರ್ಲಕ್ಷ್ಯ ವಹಿಸಿದ ಆರೋಪದ ಮೇರೆಗೆ ಏರ್ ಇಂಡಿಯಾ ವಿಮಾನಯಾನ ಕಂಪನಿಗೆ, ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ₹30 ಲಕ್ಷ ದಂಡ ವಿಧಿಸಿದೆ.

ಮುಂಬೈ ನಿಲ್ದಾಣದಲ್ಲಿ ಫೆಬ್ರುವರಿ 12ರಂದು ವಿಮಾನದಿಂದ ಕೆಳಗಿಳಿದು ಟರ್ಮಿನಲ್‌ನತ್ತ ನಡೆದುಕೊಂಡು ಬರುತ್ತಿದ್ದ ವೇಳೆ ಹಿರಿಯ ನಾಗರಿಕರು ಕುಸಿದು ಬಿದ್ದು ಮೃತಪಟ್ಟಿದ್ದರು ಎಂದು ಡಿಜಿಸಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಪ್ರಕರಣದ ಬಗ್ಗೆ ವಿವರಣೆ ಕೇಳಿ ಮಹಾ ನಿರ್ದೇಶನಾಲ ಯವು, ಏರ್ ಇಂಡಿಯಾಕ್ಕೆ ಷೋಕಾಸ್ ನೋಟಿಸ್ ನೀಡಿತ್ತು. 'ಮೃತರ ಪತ್ನಿಗೂ ವ್ಹೀಲ್‌ಚೇರ್ ನೀಡಲಾಗಿತ್ತು. ಮತ್ತೊಂದು ವ್ಹೀಲ್‌ಚೇರ್ ವ್ಯವಸ್ಥೆ ಮಾಡುವುದಾಗಿ ಅವರಿಗೆ ತಿಳಿಸಲಾಗಿತ್ತು. ಇದನ್ನು ತಿರಸ್ಕರಿಸಿದ್ದ ಅವರು ನಡೆದುಕೊಂಡೇ ಹೋಗುವುದಾಗಿ ತಿಳಿಸಿದ್ದರು' ಎಂದು ಏರ್ ಇಂಡಿಯಾವು ಉತ್ತರಿಸಿತ್ತು.

ಪ್ಯಾಲೆಸ್ಟೀನ್: ಸತ್ತವರ ಸಂಖ್ಯೆ 30 ಸಾವಿರ

ರಫಾ/ಗಾಜಾ ಪಟ್ಟಿ (ಎಎಫ್‌ಪಿ/ಎಪಿ): ಅಕ್ಟೋಬರ್‌ನಲ್ಲಿ ಪ್ರಾರಂಭವಾದ ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದಲ್ಲಿ ಹತರಾದ ಪ್ಯಾಲೆಸ್ಟೀನ್ ಜನರ ಸಂಖ್ಯೆಯು 30 ಸಾವಿರ ಗಡಿ ದಾಟಿದೆ ಎಂದು ಗಾಜಾ ಆರೋಗ್ಯ ಸಚಿವಾಲಯವು ಗುರುವಾರ ತಿಳಿಸಿದೆ.

ಹಮಾಸ್ ನಡೆಸಿದ ದಾಳಿಗೆ ಪ್ರತಿಯಾಗಿ ಇಸ್ರೇಲ್ ಸೇನೆಯು ಆರಂಭಿಸಿದ ದಾಳಿಯ ಮೊದಲ ಗುರಿ ಆಗಿದ್ದು ಗಾಜಾ ನಗರ ಹಾಗೂ ಗಾಜಾ ಪಟ್ಟಿಯ ಉತ್ತರ ಭಾಗ. ಈ ಪ್ರದೇಶದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿ ಉಂಟಾಗಿದೆ, ಇದು ಗಾಜಾ ಪಟ್ಟಿಯ ಇತರ ಪ್ರದೇಶಗಳ ಜೊತೆಗಿನ ಸಂಪರ್ಕವನ್ನು ಬಹುತೇಕ ಕಡಿದುಕೊಂಡಿದೆ.

ಅಪೌಷ್ಟಿಕತೆ, ನಿರ್ಜಲೀಕರಣ ಹಾಗೂ ಆಹಾರ ಕೊರತೆಯ ಕಾರಣದಿಂದಾಗಿ ಗಾಜಾ ನಗರದ ಅಲ್-ಶಿಫಾ ಆಸ್ಪತ್ರೆಯಲ್ಲಿ ಮಕ್ಕಳು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ. ಇಂತಹ ಸಾವುಗಳು ಇನ್ನಷ್ಟು ಆಗುವುದನ್ನು ತಡೆಯಲು ಅಂತರ ರಾಷ್ಟ್ರೀಯ ಸಂಘಟನೆಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ಸಚಿವಾಲಯದ ವಕ್ತಾರ ಅಶ್ರಫ್ ಅಲ್-ಕುದ್ರಾ ಮನವಿ ಮಾಡಿದ್ದಾರೆ.

ಕ್ಲಾಸಿಫೈಡ್ಸ್
PROPERTY CORNER

45426sq/ft Warehouse Ready to move in 18th/km South Bangalore 560083. Contact Yashwant Reddy on +91 93439 51111

WANTED 5 ACRES LAND FOR LEASE
An International School Requires 5 acres land on lease / built to suit
Locations:
1) Whitefield-Hosakote Main Road (Kadugodi)
2) Budigere Road (Main Road only)
Please send location and details on
7892685409
ROUNAQH

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING
Commerical
Sarjapur Road
COMMERCIAL20000 SFT,SUITABLE For Complex Near Wipro Kodathi RS 10500/-sft Buyers Contact; 8884501767
House
Hoysala Nagar
FOR SALE: Corner House Centrally located. 62'x40' Horamavu, HoysalaNagar ward #25, Bangalore-43. Contact:- 9886712092/ 9901080152.

Flat
Mangaluru
SALE: 2BHK 1210 sqft Furnished Flat, Urwa Store, Ashoknagar Road, Mangalore; Chetan's Consultancy 7795615015, 8073709592

JOB OPPORTUNITIES
Accounts & Finance
WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085
Part-Time Jobs
TOP MNC Com. Licensed By Central Govt. Retired/ VRS Persons 2nd Career Opportunity Age Above 45 Years 35000/- To 40000/- 7019215243/ 9886641282

BUSINESS
Business to Business
Business
WANTED BUSINESS Partners Saree Business Contact: 8892501007/ 9606701007

Business Offers
Finance
NRI'S INVESTMENT And Finance Available On Low Interest Against Properties,Land& Building,Sites,Flats, Converted&, Agriculture Lands Call:7204995189

PUBLIC NOTICE
KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.
TENDER NOTICE
Quotations are invited from reputed Suppliers for the following works.
1. Regarding Renewal of Microsoft Cloud campus agreement for the year 2024-25 for Vemana Institute of Technology.
2. Purchase of Library Books Vemana Institute of Physiotherapy
3. Supply of Uniform to RJS IMS, RJS PU & DBM RJS Schools- approx.. 1650 Students.
4. Regarding supply and installation of 6 stop SS 304 MRI 8 passengers lift to Marasuru Nurse Hostel building.
Submit your sealed quotations with in 7 days from the date of this advertisement to General Secretary, KRJS.
More details : www.reddyjanasangha.org or Contact : 9972885413
General Secretary

PERSONAL
Change of Name
CHANGE OF NAME
I, USMANSHA MAKANADAR, Residing at # 235, Sukruth Residency Near Yellamma Devi Temple, Kammasandra, Electronic City Post, Anekal Taluk, Bangalore- 560100. do hereby solemnly declare that, in my passport My Name Wrongly mentioned as USMANSHA SHAH USENSHA MAKANADAR (Old Name). Here I am declare that My Correct Name is USMANSHA MAKANADAR and taking sworn before Notary Chanchala Lakshmi, Bengaluru.

I, KAVYA. S alias S. KAVYA alias KAVYA SREEDHAR R/a, FF4, Dhanush Palace, Vijaya Bank layout, Bilekahalli, Bannerghatta Road, Bangalore -560076 I hereby declare that above said names belongs to me only vide affidavit dated 20/02/24 before notary Dharani. P Bangalore.

I, PRAVEEN KUMAR PRAKASH CHAND TUKLIYA, resident of 293, 8th Cross, 8th Main, Near Balambika Temple, Shastrinagar, Banashankari, Bangalore-560050 have changed my name to PRAVEEN PRAKASH CHAND vide affidiavit dated 26/02/2024 sworn before H.Sridhar Rao, Bangalore

CHANGE OF NAME
I, GEETHA LIZY PAUL W/o Late. S. Paul Raj Kumar R/a No. 86, 1st cross, Near Sarakki Gate, Gangadhara Nagar, J.P.Nagar, Bangalore South, Bangalore- 560078 declare that GEETHA and GEETHA LIZY PAUL both names are one and the same person, i.e. myself only. And declare that my daughter Name is HEPHZIBAH IDA PAUL. P. vide affidavit dated: 01.12.2023 sworn before Notary G. Dakshahini, Bangalore.

I, ANIL SHANKAR GOPINATHAN NAIR resident at Apartment No.704, (A Wing) 7th Floor, Sankhya Heights, Udupi-576104 have changed my name to ANIL SHANKAR vide affidavit dated 29/02/2024 sworn before notary Jalandhara, Bangalore

I VANDANA Venuprakash have changed my name to Vandana C.V. vide affidavit dated 27/02/2024, in front of the Notary B.S. Hemanth Kumar, Bangalore.

I, KUPPUMANI MAHADEVAN, have changed to New name KUPPUMANI M M, residing at No-203, Block-2, Wing-B, ARK Serene County, Channasandra, Kadugudi post, Bangalore-560067, affidavit dated 28/02/2024 before notary Veena J., Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
Classifieds More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9886213331 | +91 9901641752
+91 9731810277 | 080- 45557163/164

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

LOOKING FOR a CNC Operator-Minimum 1 year experience of running any CNC machine such as CNC router, bridge saw, etc. Additionally, knowledge of G-code and usage of AutoCad Dxf files is preferred. Please WhatsApp CV on 9110417014 email: recruitmentalkara@gmail.com

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಬೇಕಾಗಿದ್ದಾರೆ. ಊಟ ವಸತಿವಿದೆ 13,000 - 17,000. 8951315839, 9141634619

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000-57,000. ಮೊದಲು ಬಂದವರಿಗೆ ಆದ್ಯತೆ. 8861041526, 9945791526

Multiple Vacancy
REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ
Travel
ಕಾಶಿ ದೆಹಲಿ ಆಗ್ರಾ,ಮಥುರ ಅಲಹಾಬಾದ್ ಅಯೋಧ್ಯ,ಗಯಾ ಬುದ್ಧಗಯಾ 27.03.2024 10 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು. 9448294477

19.03.2024 11.04.2024 ಕಾಶಿ ಅಯೋಧ್ಯಾ ನೇಪಾಳ ಪೋಕ್ರ,ಮುಕ್ತಿನಾಥ. 11.04.2024 28.06.2024 ಕಾಶ್ಮೀರ್,ಗುಲ್ಮಾರ್ಗ್ ವೈಷ್ಣೋದೇವಿ ವಾಘಬಾರ್ಡರ್ ಅಮರನಾಥ್. 28.04.2024 ಸೋಮನಾಥ್ ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ. ಮಹಾಕಾಳೇಶ್ವರ. 11.05.2024 24.05.2024 08.06.2024 ಚಾರ್‌ಧಾಮ್ ಸಮೇತ ಪ್ರವಾಸ. ಸಂಪರ್ಕಿಸಿ. ವಿಷ್ಣು ಟ್ರಾವಲ್‌ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 9686708171

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
Out-Station
ಜಮೀನು ಮಾರಾಟಕ್ಕಿದೆ. ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು. ವಿರುಪಾಕ್ಷಿಪುರ ಹೋಬಳಿ, ಅವ್ವೇರಹಳ್ಳಿ ಗ್ರಾಮದಲ್ಲಿ ಹೊಲ 1 ಎಕರೆ, 17 ಗುಂಟೆ, ನೀರಾವರಿ ಗದ್ದೆ 3 ಎಕರೆ ಇದೆ. ಸಂಪರ್ಕಿಸಿ: 9742801409, 9880509555

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9731810277 | 080- 45557163/164

ಹಿಮಾಚಲ ಪ್ರದೇಶ: ಮುಖ್ಯಮಂತ್ರಿಯಾಗಿ ಸುಖ್ವಿಂದರ್ ಸಿಂಗ್ ಮುಂದುವರಿಕೆ ● ಸಮನ್ವಯಕ್ಕೆ ಸಮಿತಿ ರಚನೆ

6 ಶಾಸಕರು ಅನರ್ಹ: ಬಿಕ್ಕಟ್ಟು ಶಮನ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣಕಾಸು ಮಸೂದೆಗೆ ಮತ ಹಾಕದೆ ಪಕ್ಷದ ವಿಪ್ ಉಲ್ಲಂಘಿಸಿದ ಕಾರಣಕ್ಕೆ ಹಿಮಾಚಲ ಪ್ರದೇಶದ ಕಾಂಗ್ರೆಸ್‌ನ ಆರು ಶಾಸಕರನ್ನು ಗುರುವಾರ ಅನರ್ಹಗೊಳಿಸಲಾಗಿದೆ. ಮಿಂಚಿನ ವೇಗದಲ್ಲಿ ಕಾಂಗ್ರೆಸ್ ಪಕ್ಷವು ಕೈಗೊಂಡ ಕಠಿಣ ಕ್ರಮ ಹಾಗೂ ಶಾಸಕರ ರಾಜಿ ಸಂಧಾನದಿಂದಾಗಿ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ನೇತೃತ್ವದ ಸರ್ಕಾರಕ್ಕೆ ಎದುರಾಗಿದ್ದ ಬಿಕ್ಕಟ್ಟು ಸದ್ಯ ದೂರವಾಗಿದೆ.

ಅನರ್ಹಗೊಂಡ ಈ ಆರು ಶಾಸಕರು ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತ ಚಲಾಯಿಸಿ, ಕಾಂಗ್ರೆಸ್ ಅಭ್ಯರ್ಥಿಯ ಸೋಲಿಗೂ ಕಾರಣರಾಗಿದ್ದರು.

ಸರ್ಕಾರ ಹಾಗೂ ಪಕ್ಷದ ನಡುವೆ ಸಮನ್ವಯಕ್ಕಾಗಿ ಹಿಮಾಚಲ ಪ್ರದೇಶ ಕಾಂಗ್ರೆಸ್ ಅಧ್ಯಕ್ಷೆ ಪ್ರತಿಭಾ ಸಿಂಗ್, ಮುಖ್ಯಮಂತ್ರಿ ಸುಖು, ಉಪಮುಖ್ಯಮಂತ್ರಿ ಮುಕೇಶ್ ಅಗ್ನಿಹೋತ್ರಿ ಹಾಗೂ ಮೂವರು ಸದಸ್ಯರನ್ನೊಳಗೊಂಡ ಸಮನ್ವಯ ಸಮಿತಿ ರಚಿಸಲು ಕಾಂಗ್ರೆಸ್ ನಿರ್ಧರಿಸಿದೆ.

ಕೇಂದ್ರದ ವೀಕ್ಷಕರಾದ ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಭೂಪಿಂದರ್ ಸಿಂಗ್ ಹೂಡಾ ಹಾಗೂ ಭೂಪೇಶ್ ಬಘೇಲ್ ಅವರು ಪಕ್ಷದ ಶಾಸಕರ ಜತೆಗೆ ಸಮಾಲೋಚನೆ ನಡೆಸಿದರು ಹಾಗೂ ಅವರ ಅಹವಾಲುಗಳನ್ನು ಆಲಿಸಿದರು. ಈ ವೇಳೆ, ಸುಖು ಕಾರ್ಯಶೈಲಿ ಬಗ್ಗೆ ಹಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕರ ಬಂಡಾಯದ 'ಸೂತ್ರಧಾರ'ರಾದ ಲೋಕೋಪಯೋಗಿ ಸಚಿವ ವಿಕ್ರಮಾದಿತ್ಯ ಸಿಂಗ್ ಹಾಗೂ ಪ್ರತಿಭಾ ಸಿಂಗ್ ಅವರು ಕೇಂದ್ರದ ವೀಕ್ಷಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚಿಸಿದರು. ಸದ್ಯಕ್ಕೆ ಸುಖು ಅವರು ಮುಖ್ಯಮಂತ್ರಿಯಾಗಿ ಮುಂದುವರಿಯುವ ಬಗ್ಗೆ ಬಹುತೇಕ ಶಾಸಕರು ಸಹಮತ ವ್ಯಕ್ತಪಡಿಸಿದರು. ಕೇಂದ್ರದ ವೀಕ್ಷಕರು ಹೈಕಮಾಂಡ್‌ಗೆ ವರದಿ ಸಲ್ಲಿಸಲಿದ್ದಾರೆ. ಲೋಕಸಭಾ ಚುನಾವಣೆ ಮುಗಿಯುವವರೆಗೆ ಸುಖು ಮುಖ್ಯಮಂತ್ರಿಯಾಗಿ ಮುಂದುವರಿಯುವ ಸಂಭವ ಇದೆ.

ಪ್ರತಿಭಾ ಸಿಂಗ್ ಹಾಗೂ ಸುಖು ಸಮ್ಮುಖದಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಶಿವಕುಮಾರ್, 'ಪಕ್ಷದ ಶಾಸಕರು ಹಾಗೂ ಹಿರಿಯ ಮುಖಂಡರ ಜತೆಗೆ ಮತ್ತೊಂದು ಸುತ್ತಿನ ಮಾತುಕತೆ ನಡೆಸಲಾಗುತ್ತದೆ. ಪಕ್ಷದ ಎಲ್ಲ ಶಾಸಕರು ಮತ್ತು ಮುಖಂಡರು ಒಟ್ಟಾಗಿ ಪಕ್ಷ ಮತ್ತು ಸರ್ಕಾರವನ್ನು ಉಳಿಸಲು ಕೆಲಸ ಮಾಡಲಿದ್ದಾರೆ' ಎಂದರು.

ಕೇಂದ್ರದ ವೀಕ್ಷಕರ ಜತೆಗೆ ಚರ್ಚಿಸಿದ ಬಳಿಕ ಸುಖು ಅವರು ಶಿಮ್ಲಾದ ತಮ್ಮ ಅಧಿಕೃತ ನಿವಾಸದಲ್ಲಿ ಗುರುವಾರ ಬೆಳಿಗ್ಗೆ ಶಾಸಕರೊಂದಿಗೆ ಉಪಾಹಾರ ಸಭೆ ನಡೆಸಿ ಒಗ್ಗಟ್ಟಿನ ಸಂದೇಶ ರವಾನಿಸುವ ಪ್ರಯತ್ನ ಮಾಡಿದರು. ಈ ಸಭೆಗೆ ಭಿನ್ನಮತೀಯ ಶಾಸಕರು ಗೈರುಹಾಜರಾದರು. ಕೇಂದ್ರದ ವೀಕ್ಷಕರು ಬುಧವಾರ ರಾತ್ರಿಯೇ ಸಚಿವ ವಿಕ್ರಮಾದಿತ್ಯ ಅವರನ್ನು ಸಮಾಧಾನಪಡಿಸುವಲ್ಲಿ ಯಶಸ್ವಿಯಾಗಿದ್ದರು. ರಾಜೀನಾಮೆ ಹಿಂಪಡೆಯಲು ಅವರು ಒಪ್ಪಿದ್ದರು.

ರಾಜ್ಯಸಭಾ ಚುನಾವಣೆಯಲ್ಲಿ 'ಹೈಕಮಾಂಡ್'ನ ಅಭ್ಯರ್ಥಿ ಅಭಿಷೇಕ್ ಮನು ಸಿಂಘ್ವಿ ಸೋಲಿಗೆ ಕಾರಣರಾದ ಆರು ಶಾಸಕರ ವಿರುದ್ಧ ಪಕ್ಷವು ಕಠಿಣವಾಗಿ ವರ್ತಿಸಿತು. ಹಣಕಾಸು ಮಸೂದೆಗೆ ಸಂಬಂಧಿಸಿದ ಮತದಾನದಲ್ಲಿ ಪಾಲ್ಗೊಳ್ಳದೆ ವಿಪ್ ಉಲ್ಲಂಘಿಸಿದ ಕಾರಣಕ್ಕೆ ಆರು ಶಾಸಕರನ್ನು ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹಗೊಳಿಸಲಾಗಿದೆ ಎಂದು ವಿಧಾನಸಭಾಧ್ಯಕ್ಷ ಕುಲದೀಪ್ ಸಿಂಗ್ ಪಠಾನಿಯಾ ಪ್ರಕಟಿಸಿದರು.

ಸಭಾಧ್ಯಕ್ಷರ ಆದೇಶ ಪ್ರಶ್ನಿಸಿ ಅನರ್ಹರು ಕೋರ್ಟ್ ಮೊರೆಹೋಗುವ ಸಾಧ್ಯತೆ ಇದೆ. ಆದರೆ, ಸರ್ಕಾರವನ್ನು ಉರುಳಿಸಲು ಬಿಜೆಪಿ ನಡೆಸುತ್ತಿರುವ ಪ್ರಯತ್ನಗಳ ವಿರುದ್ಧ ಹೋರಾಡಲು ಪಕ್ಷಕ್ಕೆ ಸಮಯ ಸಿಕ್ಕಂತಾಗಿದೆ ಎಂಬುದು 'ಕೈ' ನಾಯಕರ ವಾದವಾಗಿದೆ.

ಕಾಂಗ್ರೆಸ್‌ನ ಆರು ಶಾಸಕರು ಹಾಗೂ ಮೂವರು ಪಕ್ಷೇತರ ಶಾಸಕರು ಮನು ಸಿಂಘ್ವಿ ವಿರುದ್ಧ ಮತ ಚಲಾಯಿಸಿದ ಬಳಿಕ ಕಾಂಗ್ರೆಸ್ ಸರ್ಕಾರವು ಬಹುಮತ ಕಳೆದುಕೊಂಡಿದೆ ಎಂದು ಬಿಜೆಪಿ ಆರೋಪಿಸಿತ್ತು. 'ಕೈ' ಪಾಳಯದ ಇತ್ತೀಚಿನ ರಾಜಕೀಯ ತಂತ್ರವು ಪಕ್ಷದ ಶಾಸಕರಿಗೆ ಬಲವಾದ ಸಂದೇಶ ರವಾನಿಸಿದೆ. ಜತೆಗೆ, ಬಂಡಾಯ ಶಾಸಕರ ಅನರ್ಹಗೊಳಿಸಿದ್ದರಿಂದ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆ 62ಕ್ಕೆ ಕುಸಿದಿದೆ. ಕಾಂಗ್ರೆಸ್ ಬಳಿ ಈಗ ಸರಳ ಬಹುಮತಕ್ಕೆ ಬೇಕಿರುವ ಸದಸ್ಯರ ಸಂಖ್ಯೆ ಇದೆ. ಇದರಿಂದಾಗಿ, 'ಕೈ' ಸರ್ಕಾರ ಸದ್ಯಕ್ಕೆ ಅಪಾಯದಿಂದ ಪಾರಾಗಿದೆ.

ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸುಖು, ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಛತ್ತೀಸಗಢ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಹರಿಯಾಣ ಮಾಜಿ ಮುಖ್ಯಮಂತ್ರಿ ಭೂಪಿಂದ್ ಸಿಂಗ್ ಹೂಡಾ, ಹಿಮಾಚಲ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪ್ರತಿಭಾ ಸಿಂಗ್ ಮತ್ತು ಕಾಂಗ್ರೆಸ್‌ನ ಇತರ ನಾಯಕರು ಶಿಮ್ಲಾದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದರು —ಪಿಟಿಐ ಚಿತ್ರ

'ಚಾಣಕ್ಯ' ತಂತ್ರ ವಿಫಲ: ಜೈರಾಮ್

'ನಾವು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಲು ಬಯಸುತ್ತೇವೆ. ಪ್ರಧಾನಿ ಹಾಗೂ 'ಚಾಣಕ್ಯ' ಎಂದು ಹೇಳಿಸಿಕೊಳ್ಳುವವರು ಹಿಮಾಚಲ ಪ್ರದೇಶದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಕಾಂಗ್ರೆಸ್ ನಾಯಕತ್ವದ ಮಧ್ಯಪ್ರವೇಶ ಹಾಗೂ ನಮ್ಮ ವೀಕ್ಷಕರ ತ್ವರಿತಗತಿಯ ಕ್ರಮಗಳಿಂದಾಗಿ ಅಲ್ಲಿನ ಪರಿಸ್ಥಿತಿ ಸಂಪೂರ್ಣವಾಗಿ ನಮ್ಮ ಹಿಡಿತದಲ್ಲಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತಿಳಿಸಿದರು.

ಚುನಾವಣೆ ಮೇಲೆ ಪರಿಣಾಮ: ಪ್ರತಿಭಾ

'ಶಾಸಕರು ಆತಂಕ ವ್ಯಕ್ತಪಡಿಸುವುದು ಸಹಜ. ಇತ್ತೀಚಿನ ಬೆಳವಣಿಗೆಗಳಿಂದಾಗಿ ಲೋಕಸಭಾ ಚುನಾವಣೆ ಮೇಲೆ ಖಂಡಿತ ಪರಿಣಾಮ ಬೀರಬಹುದು' ಎಂದು ಹಿಮಾಚಲ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪ್ರತಿಭಾ ಸಿಂಗ್ ಹೇಳಿದರು. 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಒಂದು ವರ್ಷದ ಮೇಲಾಗಿದೆ. ಆದರೆ, ಶಾಸಕರ ಅಹವಾಲುಗಳನ್ನು ಕೇಳದೆ ಇದ್ದಾಗ ಅಸಮಾಧಾನಗೊಳ್ಳುವುದು ಸಹಜ. ಅವರನ್ನು ಕೂರಿಸಿ ಮಾತನಾಡಿಸಿ ಪರಿಹಾರ ಕಂಡುಕೊಂಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದು ಹೇಳಿದರು.



'ಆಪರೇಷನ್ ಕಮಲ' ವಿಫಲ– ಪ್ರಿಯಾಂಕಾ ಮಹತ್ವದ ಪಾತ್ರ

ಪ್ರಿಯಾಂಕಾ ಗಾಂಧಿ

ನವದೆಹಲಿ(ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಬಿಜೆಪಿಯ 'ಆಪರೇಷನ್ ಕಮಲ' ಪ್ರಯತ್ನವನ್ನು ವಿಫಲಗೊಳಿಸಿ, ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ನೇತೃತ್ವದ ಸರ್ಕಾರವನ್ನು ರಕ್ಷಿಸುವಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಹತ್ವದ ಪಾತ್ರ ವಹಿಸಿದ್ದರು ಎಂದು ಮೂಲಗಳು ಗುರುವಾರ ತಿಳಿಸಿವೆ.

ಪ್ರಿಯಾಂಕಾ ಅವರು, ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸುಖು ಹಾಗೂ ಇತರ ನಾಯಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಶಾಸಕರ ಬಂಡಾಯ ಶಮನ ಮಾಡುವ ಜೊತೆಗೆ ಪಕ್ಷ ನೇತೃತ್ವದ ಸರ್ಕಾರ ಗಟ್ಟಿಯಾಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ತಿಳಿಸಿವೆ.

'ಆಪರೇಷನ್ ಕಮಲ'ದ ಸುಳಿವು ಸಿಗುತ್ತಿದ್ದಂತೆಯೇ ಚುರುಕಾದ ಪ್ರಿಯಾಂಕಾ ಅವರು, ಹಿರಿಯ ನಾಯಕರಾದ ಭೂಪಿಂದರ್ ಸಿಂಗ್ ಹೂಡಾ, ಡಿ.ಕೆ.ಶಿವಕುಮಾರ್ ಹಾಗೂ ಭೂಪೇಶ್ ಬಘೇಲ್ ಅವರನ್ನು ವೀಕ್ಷಕರನ್ನಾಗಿ ನಿಯೋಜಿಸಿ, ಬಿಕ್ಕಟ್ಟು ಬಗೆಹರಿಯುವಂತೆ ನೋಡಿಕೊಂಡರು' ಎಂದೂ ಮೂಲಗಳು ಹೇಳಿವೆ.

ಸಿಂಘ್ವಿ ಸೋಲಿನ ಹೊಣೆ ಹೊತ್ತ ಸುಖು: ಶಿವಕುಮಾರ್

ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ಅಭಿಷೇಕ್ ಮನು ಸಿಂಘ್ವಿ ಅವರ ಸೋಲಿನ ಹೊಣೆಯನ್ನು ಸುಖ್ವಿಂದರ್ ಸಿಂಗ್ ಸುಖು ಹೊತ್ತುಕೊಂಡಿದ್ದಾರೆ ಎಂದು ಪಕ್ಷದ ಕೇಂದ್ರ ವೀಕ್ಷಕ ಡಿ.ಕೆ. ಶಿವಕುಮಾರ್ ಹೇಳಿದರು.

'ಕೇಂದ್ರ ವೀಕ್ಷಕರು ಎಲ್ಲ ಶಾಸಕರೊಂದಿಗೆ ವೈಯಕ್ತಿಕವಾಗಿ ಮಾತನಾಡಿದ್ದೇವೆ. ನಾವು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಯವರೊಂದಿಗೆ ಸಮಾಲೋಚಿಸಿದ್ದೇವೆ. ಅವರೆಲ್ಲರ ಭಿನ್ನಾಭಿಪ್ರಾಯಗಳು ಬಗೆಹರಿದಿವೆ. ಅವರು ಜತೆಗೂಡಿ ಕೆಲಸ ಮಾಡುತ್ತಾರೆ. ಪಕ್ಷವು ಐದು ವರ್ಷಗಳ ಅಧಿಕಾರಾವಧಿ ಪೂರೈಸಲಿದೆ' ಎಂದು ಅವರು ತಿಳಿಸಿದರು.

ಪ್ರತಿಭಟನೆನಿರತ ರೈತ ಸಾವು ಕೊಲೆ ಪ್ರಕರಣ ದಾಖಲು

ಚಂಡೀಗಢ (ಪಿಟಿಐ): ಹರಿಯಾಣದ ಖನೌರಿ ಗಡಿಯಲ್ಲಿ ಪ್ರತಿಭಟನೆ ನಿರತ ರೈತರು ಮತ್ತು ಭದ್ರತಾ ಸಿಬ್ಬಂದಿ ನಡುವಿನ ಘರ್ಷಣೆಯಲ್ಲಿ ಮೃತಪಟ್ಟಿದ್ದ ರೈತ ಶುಭಕರಣ್ ಸಿಂಗ್ ಸಾವಿನ ಬಗ್ಗೆ ಏಳು ದಿನಗಳ ಬಳಿಕ ಕೊಲೆ ಪ್ರಕರಣ ದಾಖಲಾಗಿದೆ.

'ದೆಹಲಿ ಚಲೋ' ಮೆರವಣಿಗೆ ವೇಳೆ ಖಾನೌರಿ ಗಡಿಯಲ್ಲಿ ಫೆಬ್ರುವರಿ 21ರಂದು ನಡೆದಿದ್ದ ಘರ್ಷಣೆಯಲ್ಲಿ ಬಟಿಂಡಾದ ರೈತ ಶುಭಕರಣ್ (21) ಸಾವಿಗೀಡಾಗಿದ್ದು, 12 ಮಂದಿ ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದರು.

ಶುಭಕರಣ್ ತಂದೆಯ ದೂರು ಆಧರಿಸಿ ಪಟಿಯಾಲಾದ ಪತ್ರಾನ್ ಠಾಣೆಯಲ್ಲಿ ಅಪರಿಚಿತ ವ್ಯಕ್ತಿಯ ವಿರುದ್ಧ ಬುಧವಾರ ಎಫ್‌ಐಆರ್ ದಾಖಲಿಸಲಾಗಿದೆ.

ಕೃತ್ಯ ನಡೆದ ಸ್ಥಳ ಹರಿಯಾಣದ ಜಿಂದ್ ಜಿಲ್ಲೆಯ ಗರ್ಹಿ ಎಂದು ಉಲ್ಲೇಖಿಸಲಾಗಿದೆ. ಮರಣೋತ್ತರ ಪರೀಕ್ಷೆಗೆ ಮುನ್ನ ಎಫ್‌ಐಆರ್ ದಾಖಲಿಸಲು ರೈತ ಮುಖಂಡರು ಪಟ್ಟು ಹಿಡಿದಿದ್ದರಿಂದ ಪಟಿಯಾಲಾದ ರಾಜೇಂದ್ರ ಆಸ್ಪತ್ರೆ ಶವಾಗಾರದಲ್ಲಿ ಶವ ಇರಿಸಲಾಗಿತ್ತು. ಎಫ್‌ಐಆರ್ ದಾಖಲಿಸಿದ ಬಳಿಕ ಬುಧವಾರ ರಾತ್ರಿಯೇ ಮರಣೋತ್ತರ ಪರೀಕ್ಷೆ ನಡೆಸಿ ಶವ ಹಸ್ತಾಂತರಿಸಲಾಯಿತು.

ಅಂತ್ಯಕ್ರಿಯೆ: ರೈತನ ಶವವನ್ನು ಗುರುವಾರ ಅವರ ಹುಟ್ಟೂರು ಬಟಿಂಡಾ ಜಿಲ್ಲೆಯ ಬಲ್ಲೋಹ್ ಗ್ರಾಮಕ್ಕೆ ಒಯ್ದು ಅಂತ್ಯಕ್ರಿಯೆ ನಡೆಸಲಾಯಿತು.

ಪ್ರತಿಭಟನೆ ಮುಂದುವರಿಕೆ: ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ರಕ್ಷಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆಯು ಮುಂದುವರಿಯಲಿದೆ ಎಂದು ರೈತ ಮುಖಂಡರು ಪ್ರಕಟಿಸಿದ್ದಾರೆ.

'ವೀಸಾ, ಪಾಸ್‌ಪೋರ್ಟ್ ರದ್ದತಿಗೆ ಮನವಿ'

ನವದೆಹಲಿ: ರೈತರ ಪ್ರತಿಭಟನೆ ವೇಳೆ ಹಿಂಸಾಚಾರದಲ್ಲಿ ತೊಡಗಿದ್ದ ಹಾಗೂ ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಮಾಡಿರುವವರ ವೀಸಾ ಹಾಗೂ ಪಾಸ್‌ಪೋರ್ಟ್‌ಗಳನ್ನು ರದ್ದುಗೊಳಿಸುವಂತೆ ಕೋರಲು ಹರಿಯಾಣ ಪೊಲೀಸರು ನಿರ್ಧರಿಸಿದ್ದಾರೆ.

'ಸಿ.ಸಿ. ಟಿ.ವಿ ಕ್ಯಾಮೆರಾ ಹಾಗೂ ಡ್ರೋನ್ ಕ್ಯಾಮೆರಾಗಳ ನೆರವಿನಿಂದ ಈ ರೈತರನ್ನು ಗುರುತಿಸಲಾಗಿದ್ದು, ಅವರ ವೀಸಾ ಮತ್ತು ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ವಿದೇಶಾಂಗ ಸಚಿವಾಲಯ ಮತ್ತು ಸಂಬಂಧಿಸಿದ ರಾಯಭಾರ ಕಚೇರಿಗಳಿಗೆ ಕೋರಲಾಗುವುದು' ಎಂದು ಅಂಬಾಲಾ ಡಿಎಸ್‌ಪಿ ತಿಳಿಸಿದ್ದಾರೆ.

ಸಿಬಿಐಗೆ ಲಿಖಿತ ಪ್ರತಿಕ್ರಿಯೆ ಸಲ್ಲಿಸಿದ ಅಖಿಲೇಶ್

ಲಖನೌ (ಪಿಟಿಐ): ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಿಬಿಐ ನೀಡಿದ್ದ ಸಮನ್ಸ್‌ಗೆ ಲಿಖಿತ ಪ್ರತಿಕ್ರಿಯೆ ಸಲ್ಲಿಸಿರುವುದಾಗಿ ಸಮಾಜವಾದಿ ಪಕ್ಷದ ಅಧ್ಯಕ್ಷ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರು ಗುರುವಾರ ತಿಳಿಸಿದ್ದಾರೆ.

ಬಿಜೆಪಿಯ ಘಟಕದಂತೆ ಸಿಬಿಐ ಕಾರ್ಯ ನಿರ್ವಹಿಸುತ್ತಿದೆ ಎಂದು ವಾಗ್ದಾಳಿ ನಡೆಸಿದ ಅವರು, ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಜನರು ಕೇಂದ್ರದ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಇದಕ್ಕೂ ಮುನ್ನ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ ಅವರು, 'ಬಿಜೆಪಿಗೆ ಎಸ್‌ಪಿಯೇ ಪ್ರಮುಖ ಗುರಿ ಆಗಿದೆ. 2019ರ ಲೋಕಸಭಾ ಚುನಾವಣೆ ವೇಳೆ ಕೆಲ ವಿಷಯಗಳಿಗೆ ಸಂಬಂಧಿಸಿದಂತೆ ನನಗೆ ನೋಟಿಸ್ ಬಂದಿತ್ತು. ಈಗ ಮತ್ತೆ ಚುನಾವಣೆ ಸಮೀಪಿಸುತ್ತಿರುವುದರಿಂದ ಇನ್ನೊಮ್ಮೆ ನೋಟಿಸ್ ಬಂದಿದೆ' ಎಂದಿದ್ದರು.

'ಚುನಾವಣೆ ಬಂದಾಗ ನೋಟಿಸ್ ಬರುತ್ತದೆ ಎಂಬುದು ನನಗೆ ಗೊತ್ತು. ಹೀಗಾಗಿ ಆತಂಕ ಏಕೆ? 10 ವರ್ಷಗಳಲ್ಲಿ ನೀವು (ಬಿಜೆಪಿ) ಸಾಕಷ್ಟು ಕೆಲಸಗಳನ್ನು ಮಾಡಿದ್ದರೆ, ಏಕೆ ಹತಾಶರಾಗಿದ್ದೀರಿ' ಎಂದು ಅವರು ಪ್ರಶ್ನಿಸಿದ್ದರು.

2019ರಲ್ಲಿ ಅಖಿಲೇಶ್ ವಿರುದ್ಧ ಅಕ್ರಮ ಗಣಿಗಾರಿಕೆ ಪ್ರಕರಣ ದಾಖಲಾಗಿತ್ತು.

ಬಾಂಬ್ ಸ್ಫೋಟ ಪ್ರಕರಣ ತುಂಡಾ ದೋಷಮುಕ್ತ

ಪ್ರಜಾವಾಣಿ ವಾರ್ತೆ

ಅಬ್ದುಲ್ ಕರೀಮ್ ತುಂಡಾ

ಜೈಪುರ: 1993ರಲ್ಲಿ ದೇಶದ ವಿವಿಧೆಡೆ ನಡೆದ ಸರಣಿ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಅಬ್ದುಲ್ ಕರೀಮ್ ಅಲಿಯಾಸ್ ತುಂಡಾನನ್ನು ರಾಜಸ್ಥಾನದ ಅಜ್ಮೇರ್‌ನ ಟಾಡಾ ನ್ಯಾಯಾಲಯವು ಗುರುವಾರ ದೋಷಮುಕ್ತಗೊಳಿಸಿದೆ.

ಸಾಕ್ಷ್ಯಾಧಾರಗಳ ಕೊರತೆಯಿಂದ ಈತನನ್ನು ನ್ಯಾಯಾಲಯವು ದೋಷಮುಕ್ತಗೊಳಿಸಿದೆ.

ಇತರ ಅಪರಾಧಿಗಳಾದ ಇರ್ಫಾನ್ ಮತ್ತು ಹಮಿದುದ್ದೀನ್‌ಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

1993 ಡಿಸೆಂಬರ್ 6ರಂದು ಲಖನೌ, ಕಾನ್ಪುರ, ಹೈದರಾಬಾದ್, ಸೂರತ್ ಮತ್ತು ಮುಂಬೈ ನಗರಗಳಲ್ಲಿ ದುಷ್ಕರ್ಮಿಗಳು ಸರಣಿ ಬಾಂಬ್ ಸ್ಫೋಟ ನಡೆಸಿದ್ದರು. ಬಾಬ್ರಿ ಮಸೀದಿ ಧ್ವಂಸಗೊಂಡು ಒಂದು ವರ್ಷ ಪೂರ್ಣಗೊಂಡ ದಿನದಂದು ಈ ಸ್ಫೋಟಗಳು ನಡೆದಿದ್ದವು.

ಈ ಸಂಬಂಧ ಕೋಟಾ, ವಲ್ಸದ್, ಕಾನ್ಪುರ, ಅಲಹಾಬಾದ್ ಮತ್ತು ಮಲ್ಕಾ ಗಿರಿಯಲ್ಲಿ ಪ್ರಕರಣಗಳು ದಾಖಲಾಗಿದ್ದವು. ಬಳಿಕ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಲಾಗಿತ್ತು. ಅನಂತರ ಭಯೋತ್ಪಾದನೆ ಹಾಗೂ ವಿಧ್ವಂಸಕ ಕೃತ್ಯ ತಡೆ ಕಾಯ್ದೆಯ (ಟಾಡಾ) ಅನ್ವಯವೂ ಪ್ರಕರಣಗಳು ದಾಖಲಾಗಿದ್ದವು.

ಭೂಗತ ಪಾತಕಿ ದಾವೂದ್ ಇಬ್ರಾಹಿಂ ಆಪ್ತನಾಗಿದ್ದ ಅಬ್ದುಲ್ ಕರೀಮ್ ತುಂಡಾನನ್ನು 2013ರಲ್ಲಿ ಉತ್ತರಾಖಂಡದಲ್ಲಿ ಬಂಧಿಸಲಾಗಿತ್ತು.

'ರಷ್ಯಾ ಸೇನೆಯಲ್ಲಿರುವ ಭಾರತೀಯರ ಕರೆತರಲು ಯತ್ನ'

ನವದೆಹಲಿ(ಪಿಟಿಐ): ರಷ್ಯಾ ಸೇನೆಯಲ್ಲಿ ಸಹಾಯಕ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿರುವ 20 ಭಾರತೀಯರನ್ನು ಆದಷ್ಟು ಶೀಘ್ರ ವಾಪಸು ಕರೆದುಕೊಂಡು ಬರಲು ಸರ್ವ ಪ್ರಯತ್ನ ನಡೆಸಲಾಗುತ್ತಿದೆ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಹೇಳಿದೆ.

'20 ಭಾರತೀಯರು ರಷ್ಯಾ ಸೇನೆಯಲ್ಲಿ ಸಹಾಯಕರಾಗಿ ಇಲ್ಲವೇ ಸಹಾಯಕ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬ ಮಾಹಿತಿ ಇದೆ. ಇವರು ಮಾಸ್ಕೊದಲ್ಲಿರುವ ಭಾರತದ ರಾಯಭಾರ ಕಚೇರಿಯನ್ನು ಸಂಪರ್ಕಿಸಿದ್ದರು' ಎಂದು ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಭಾರತೀಯರು ರಷ್ಯಾದ ವಿವಿಧ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಸುರಕ್ಷಿತವಾಗಿ ಸ್ವದೇಶಕ್ಕೆ ವಾಪಸಾಗುವುದನ್ನು ಖಾತ್ರಿ ಪಡಿಸುವುದಕ್ಕಾಗಿ ರಾಯಭಾರ ಕಚೇರಿಯು ರಷ್ಯಾ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ' ಎಂದಿದ್ದಾರೆ.

3 ಮಕ್ಕಳಿದ್ದವರಿಗೆ ಸರ್ಕಾರಿ ನೌಕರಿ ಇಲ್ಲ: ನಿಯಮಕ್ಕೆ 'ಸುಪ್ರೀಂ' ಅಸ್ತು

ನವದೆಹಲಿ (ಪಿಟಿಐ): ಸರ್ಕಾರಿ ಉದ್ಯೋಗ ಬಯಸುವವರು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವಂತೆ ಇಲ್ಲ ಎಂದು ರಾಜಸ್ಥಾನ ಸರ್ಕಾರ ರೂಪಿಸಿರುವ ನಿಯಮವು ತಾರತಮ್ಯಕ್ಕೆ ಎಡೆಮಾಡಿಕೊಡುವುದಿಲ್ಲ, ನಿಯಮವು ಸಂವಿಧಾನಕ್ಕೆ ವಿರುದ್ಧವಾಗಿಯೂ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ರಾಜಸ್ಥಾನ ಹಲವು ಸೇವೆಗಳ (ತಿದ್ದುಪಡಿ) ನಿಯಮಗಳು – 2001'ರ ಅನ್ವಯ, ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರು ಸರ್ಕಾರಿ ಉದ್ಯೋಗಕ್ಕೆ ಅನರ್ಹರು. ನಿಯಮವನ್ನು ಪ್ರಶ್ನಿಸಿ ನಿವೃತ್ತ ಯೋಧ ರಾಮ್‌ಜಿ ಲಾಲ್ ಜಾಟ್ ಎನ್ನುವವರು ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

2002ರ ಜೂನ್ 1 ಹಾಗೂ ಅದರ ನಂತರ ಇಬ್ಬರಿಗಿಂತ ಹೆಚ್ಚಿನ ಮಕ್ಕಳನ್ನು ಹೊಂದಿರುವವರು ಪೊಲೀಸ್ ನೌಕರಿಗೆ ಅರ್ಹರಲ್ಲ ಎಂದು ರಾಜಸ್ಥಾನ ಪೊಲೀಸ್ ಅಧೀನ ಸೇವಾ ನಿಯಮ – 1989ರ ನಿಯಮ 24(4) ಕೂಡ ತಾರತಮ್ಯಕ್ಕೆ ಎಡೆಮಾಡಿಕೊಡುವುದಿಲ್ಲ ಎಂದು ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠವು ಹೇಳಿದೆ.

ನಿಯಮಗಳ ಕಾರಣದಿಂದಾಗಿ ಪೊಲೀಸ್ ನೌಕರಿ ಸಿಗದೆ ಇದ್ದಾಗ ಜಾಟ್ ಅವರು ರಾಜಸ್ಥಾನ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅವರ ಅರ್ಜಿಯನ್ನು ಹೈಕೋರ್ಟ್ ಪುರಸ್ಕರಿಸಿರಲಿಲ್ಲ. ಹೈಕೋರ್ಟ್ ತಾಳಿದ ನಿಲುವಿನಲ್ಲಿ ಮಧ್ಯಪ್ರವೇಶ ಮಾಡಬೇಕಾದ ಅಗತ್ಯ ಕಂಡುಬಂದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇ.ಡಿ ಅಧಿಕಾರಿಗಳ ಮೇಲೆ ದಾಳಿ ಪ್ರಕರಣ: ಪಕ್ಷದಿಂದ ಆರು ವರ್ಷ ಅಮಾನತು ಮಾಡಿದ ಮಮತಾ

ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಬಂಧನ

ಕೋಲ್ಕತ್ತ/ ಬಸೀರ್‌ಹಾತ್ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ದಾಳಿ ಪ್ರಕರಣದ ಆರೋಪಿ, ಟಿಎಂಸಿಯ ಪ್ರಭಾವಿ ನಾಯಕ ಶಹಜಹಾನ್ ಶೇಖ್ ಅವರನ್ನು ಗುರುವಾರ ಬೆಳಿಗ್ಗೆ ಬಂಧಿಸಲಾಗಿದೆ. ಈ ಬೆಳವಣಿಗೆಯ ಬೆನ್ನಲ್ಲೇ ಪಕ್ಷವು ಅವರನ್ನು ಆರು ವರ್ಷಗಳ ಕಾಲ ಅಮಾನತು ಮಾಡಿದೆ.

ಪಶ್ಚಿಮ ಬಂಗಾಳದ ಸಂದೇಶ್ ಖಾಲಿಯಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಮತ್ತು ಗ್ರಾಮಸ್ಥರ ಭೂಮಿ ಕಸಿದಿರುವ ಆರೋಪವೂ ಶಹಜಹಾನ್ ಮೇಲಿದೆ. ಅವರ ಬಂಧನಕ್ಕೆ ಆಗ್ರಹಿಸಿ ಸಂದೇಶ್ ಖಾಲಿಯಲ್ಲಿ ನಡೆದಿದ್ದ ಪ್ರತಿಭಟನೆ ಹಿಂಸೆಗೆ ತಿರುಗಿತ್ತು. ಈ ವಿವಾದವು ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಕೋಲಾಹಲ ಸೃಷ್ಟಿಸಿತ್ತು.

'ಉತ್ತರ 24 ಪರಗಣ ಜಿಲ್ಲೆಯ ಮೀನಾಖಾನ್ ಠಾಣೆ ವ್ಯಾಪ್ತಿಯ ಬಾಮನ್ ಪುಕುರ್ ಎಂಬಲ್ಲಿನ ಮನೆಯೊಂದರಲ್ಲಿ ಅವರನ್ನು ಬಂಧಿಸಲಾಗಿದೆ. ಶಹಜಹಾನ್, ಕೆಲವು ಸಹಚರರೊಂದಿಗೆ ಅಲ್ಲಿ ಅಡಗಿಕೊಂಡಿದ್ದರು' ಎಂದು ಎಡಿಜಿಪಿ (ದಕ್ಷಿಣ ಬಂಗಾಳ) ಸುಪ್ರತಿಮ್ ಸರ್ಕಾರ್ ತಿಳಿಸಿದರು. ಈ ಪ್ರದೇಶವು ಸಂದೇಶ್‌ಖಾಲಿಯಿಂದ ಸುಮಾರು 30 ಕಿ.ಮೀ. ದೂರದಲ್ಲಿದೆ.

ಬಸೀರ್‌ಹಾತ್ ನ್ಯಾಯಾಲಯವು ಅವರನ್ನು 10 ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಿದ್ದು, ವಿಚಾರಣೆಗಾಗಿ ಕೋಲ್ಕತ್ತದಲ್ಲಿರುವ ಪೊಲೀಸ್ ಕೇಂದ್ರ ಕಚೇರಿಗೆ ಕರೆದೊಯ್ಯಲಾಗಿದೆ. ಈ ಪ್ರಕರಣದ ತನಿಖೆಯನ್ನು ಸಿಐಡಿ ಕೈಗೆತ್ತಿಕೊಂಡಿದೆ.

ಇ.ಡಿ ಅಧಿಕಾರಿಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ನಝತ್ ಠಾಣೆಯಲ್ಲಿ ದಾಖಲಾಗಿರುವ ಎರಡು ಪ್ರಕರಣಗಳಲ್ಲಿ ಶಹಜಹಾನ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಪಡಿತರ ಹಗರಣ ಪ್ರಕರಣದ ಆರೋಪಿಯಾಗಿರುವ ಶಹಜಹಾನ್ ಮನೆಯಲ್ಲಿ ಶೋಧ ನಡೆಸಲು ಬಂದಿದ್ದ ಇ.ಡಿ ಅಧಿಕಾರಿಗಳ ಮೇಲೆ ಜನವರಿ 5 ರಂದು ಗುಂಪೊಂದು ದಾಳಿ ನಡೆಸಿತ್ತು. ಈ ಘಟನೆಯ ಬೆನ್ನಲ್ಲೇ ಅವರು ತಲೆಮರೆಸಿಕೊಂಡಿದ್ದರು.

ಶಹಜಹಾನ್ ಅವರನ್ನು ಸಿಬಿಐ, ಜಾರಿ ನಿರ್ದೇಶನಾಲಯ (ಇ.ಡಿ) ಅಥವಾ ರಾಜ್ಯ ಪೊಲೀಸರು ಬಂಧಿಸಬಹುದು ಎಂದು ಕಲ್ಕತ್ತ ಹೈಕೋರ್ಟ್ ಬುಧವಾರ ಹೇಳಿತ್ತು. ಇದಾದ 24 ಗಂಟೆಗಳಲ್ಲೇ ಬಂಧನ ನಡೆದಿದೆ. ಬಂಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಸಂದೇಶ್‌ಖಾಲಿಯಲ್ಲಿ ಸ್ಥಳೀಯರು ಸಿಹಿ ಹಂಚಿ ಸಂಭ್ರಮಿಸಿದರು.

ನಿಕಟವರ್ತಿ ಬಂಧನ: ಶಹಜಹಾನ್ ನಿಕಟವರ್ತಿ ಅಮೀರ್ ಗಾಝಿ ಎಂಬಾತನನ್ನು ಪಶ್ಚಿಮ ಬಂಗಾಳದ ಪೊಲೀಶರು ಒಡಿಶಾದ ರೂರ್ಕೆಲಾದಲ್ಲಿ ಬಂಧಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ತನಿಖೆ ಕೈಗೆತ್ತಿಕೊಂಡ ಸಿಐಡಿ
- 55 ದಿನಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ
- ಜ. 5ರಂದು ಅಧಿಕಾರಿಗಳ ಮೇಲೆ ದಾಳಿ ನಡೆದಿತ್ತು

ಟಿಎಂಸಿ ಮುಖಂಡ ಶಹಜಹಾನ್ ಅವರನ್ನು ನ್ಯಾಯಾಲಯಕ್ಕೆ ಕರೆತರಲಾಯಿತು —ಪಿಟಿಐ ಚಿತ್ರ

ಭ್ರಷ್ಟಾಚಾರ ಆರೋಪ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವ ನಿಮ್ಮ ನಾಯಕರನ್ನು ಅಮಾನತು ಮಾಡುವಂತೆ ನಾವು ಬಿಜೆಪಿಗೆ ಸವಾಲು ಹಾಕುತ್ತೇವೆ

ಡೆರೆಕ್ ಒಬ್ರಯಾನ್, ಟಿಎಂಸಿ ವಕ್ತಾರ

ಇದು ಬಂಧನವೇ? ಸಿ.ಎಂ ಮಮತಾ ಅವರಿಗೆ ಭದ್ರತೆ ಒದಗಿಸುವಂತೆ ಬಂಗಾಳ ಪೊಲೀಸರು, ಶಹಜಹಾನ್ ಅವರಿಗೂ ಭದ್ರತೆ ಒದಗಿಸುತ್ತಿದ್ದಾರೆ

ಅಮಿತ್ ಮಾಳವೀಯ, ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ

ಪೂರ್ವಯೋಜಿತ: ಬಿಜೆಪಿ ಟೀಕೆ

ಶಹಜಹಾನ್ ಅವರನ್ನು ಬಂಧಿಸಬಹುದು ಎಂದು ನ್ಯಾಯಾಲಯ ಹೇಳಿದ ಕೂಡಲೇ ಬಂಧಿಸಲಾಗಿದೆ ಎಂದು ಟಿಎಂಸಿ ಹೇಳಿದೆ. ಆದರೆ ಬಿಜೆಪಿಯು 'ಇದು ಪೂರ್ವಯೋಜಿತ' ಎಂದು ಟೀಕಿಸಿದೆ.

'ಕಾನೂನಿನ ತೊಡಕು ಇದ್ದ ಕಾರಣ ಅವರ ಬಂಧನ ತಡವಾಗಿತ್ತು. ಆದರೆ ಬಂಧನಕ್ಕೆ ಯಾವುದೇ ತಡೆ ನೀಡಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದ ಬೆನ್ನಲ್ಲೇ ಬಂಧನ ನಡೆದಿದೆ' ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಹೇಳಿದರು.

'ಶಹಜಹಾನ್ ಬಂಧನವು ಟಿಎಂಸಿ ಮತ್ತು ಬಂಗಾಳ ಪೊಲೀಸರು ನಡೆಸಿರುವ ನಾಟಕದ ಒಂದು ಭಾಗವಷ್ಟೆ. ಇದು ಪೂರ್ವಯೋಜಿತ ಕೆಲಸ. ಬಿಜೆಪಿ ನಡೆಸಿದ ನಿರಂತರ ಪ್ರತಿಭಟನೆಯಿಂದಾಗಿ ಅವರನ್ನು ಬಂಧಿಸಲಾಗಿದೆ' ಎಂದು ಬಂಗಾಳ ಬಿಜೆಪಿ ಘಟಕದ ಅಧ್ಯಕ್ಷ ಸುಕಾಂತ ಮಜುಮ್ದಾರ್ ಪ್ರತಿಕ್ರಿಯಿಸಿದ್ದಾರೆ. 'ಸಿಬಿಐ ಮತ್ತು ಇ.ಡಿಯಿಂದ ರಕ್ಷಣೆ ನೀಡುವ ಉದ್ದೇಶದಿಂದ ಶಹಜಹಾನ್ ಅವರ ಬಂಧನ ನಡೆದಿದೆ. ಬಂಗಾಳ ಪೊಲೀಸರ ಅಸಹಕಾರದಿಂದಾಗಿ ಇ.ಡಿ ಅಧಿಕಾರಿಗಳಿಗೆ ಅವರನ್ನು ಇಷ್ಟು ದಿನ ಬಂಧಿಸಲು ಸಾಧ್ಯವಾಗಲಿಲ್ಲ' ಎಂದರು.

ಕೆಳಹಂತದ ನ್ಯಾಯಾಲಯಗಳಿಗೆ ಸುಪ್ರೀಂ ಕೋರ್ಟ್ ಕಿವಿಮಾತು

ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ: ಕೋರ್ಟ್‌ಗಳಿಗೆ ಎಚ್ಚರಿಕೆ ಬೇಕು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮದುವೆಯಾದ ಏಳು ವರ್ಷಗಳೊಳಗೆ ಮಹಿಳೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ಇರುವ ಕಾನೂನುಗಳನ್ನು ಸರಿಯಾಗಿ ಅನ್ವಯಿಸುವ ವಿಚಾರದಲ್ಲಿ ಕೋರ್ಟ್‌ಗಳು ಬಹಳ ಜಾಗರೂಕರಾಗಿ ಇರಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ವಿಭಾಗೀಯ ಪೀಠವು, ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಪ್ರಚೋದನೆ ನೀಡಿದ್ದ ದೋಷದಿಂದ ನರೇಶ್ ಕುಮಾರ್ ಎನ್ನುವವರನ್ನು ಮುಕ್ತಗೊಳಿಸಿದೆ. ನರೇಶ್ ಅವರ ವಿವಾಹವು 1992ರ ಮೇ ತಿಂಗಳಲ್ಲಿ ಆಗಿತ್ತು. ಅವರ ಪತ್ನಿ 1993ರ ನವೆಂಬರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

'ಮದುವೆಯ ನಂತರ ನರೇಶ್ ಹಾಗೂ ಅವರ ಪಾಲಕರು, ರೇಷನ್ ಅಂಗಡಿ ಆರಂಭಿಸಲು ಹಣ ತಂದುಕೊಡುವಂತೆ ಪತ್ನಿಯನ್ನು ಒತ್ತಾಯಿಸುತ್ತಿದ್ದರು' ಎಂದು ಪ್ರಾಸಿಕ್ಯೂಷನ್ ವಕೀಲರು ದೂರಿದ್ದರು. ಪತಿ ನೀಡುತ್ತಿದ್ದ ಕಿರುಕುಳ ತಾಳಲಾರದೆ ಪತ್ನಿ ಆತ್ಮಹತ್ಯೆ ಮಾಡಿಕೊಂಡರು ಎಂದು ಪ್ರಾಸಿಕ್ಯೂಷನ್ ಹೇಳಿತ್ತು.

ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ನರೇಶ್ ಅವರನ್ನು ತಪ್ಪಿತಸ್ಥ ಎಂದು ಸಾರಿತ್ತು. ಇದನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಎತ್ತಿಹಿಡಿದಿತ್ತು. 'ವಾಣಿಜ್ಯ ವಹಿವಾಟು ಆರಂಭಿಸಲು ಪತ್ನಿಯಿಂದ ಅಥವಾ ಆಕೆಯ ಹೆತ್ತವರಿಂದ ಹಣ ಕೇಳಿದ್ದೇ ಕ್ರೌರ್ಯ ಅಥವಾ ಕಿರುಕುಳ ಆಗುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಪೀಠವು ಹೇಳಿದೆ.

ನರೇಶ್ ಅವರ ಕಷ್ಟಗಳು 1993ರಲ್ಲಿ ಶುರುವಾದವು. ಅವು 2024ರಲ್ಲಿ ಕೊನೆಗೊಂಡಿವೆ. ಅಂದರೆ ಅವರು ಸರಿಸುಮಾರು ಮೂವತ್ತು ವರ್ಷ ಕಷ್ಟ ಅನುಭವಿಸಿದ್ದಾರೆ. ದೇಶದ ಕ್ರಿಮಿನಲ್ ಅಪರಾಧ ನ್ಯಾಯ ವ್ಯವಸ್ಥೆಯೇ ಒಂದು ಶಿಕ್ಷೆಯಾಗಿ ಪರಿಣಮಿಸಿದೆ ಎಂದು ಪೀಠವು ಖೇದ ವ್ಯಕ್ತಪಡಿಸಿದೆ.

'ಈ ಪ್ರಕರಣದಲ್ಲಿ ಆಗಿರುವುದು ಇದೇ. ನರೇಶ್ ಅವರನ್ನು ಶಿಕ್ಷೆಗೆ ಗುರಿಪಡಿಸಿದ್ದು ಕಾನೂನಿನ ಅಡಿಯಲ್ಲಿ ಸಿಂಧುವಲ್ಲ ಎಂಬ ತೀರ್ಮಾನಕ್ಕೆ ಬರಲು ಈ ನ್ಯಾಯಾಲಯಕ್ಕೆ 10 ನಿಮಿಷಗಳಿಗಿಂತ ಹೆಚ್ಚಿನ ಅವಧಿ ಬೇಕಾಗಲಿಲ್ಲ' ಎಂದು ಪೀಠವು ವಿವರಿಸಿದೆ.

ಮದುವೆಯಾದ ಏಳು ವರ್ಷಗಳ ಒಳಗೆ ಮಹಿಳೆ ಆತ್ಮಹತ್ಯೆ ಮಾಡಿಕೊಂಡರು ಎಂಬ ಒಂದೇ ಕಾರಣ ನೀಡಿ, ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ 113(ಎ) ಅಡಿಯಲ್ಲಿ, ಆತ್ಮಹತ್ಯೆಗೆ ಪತಿ ಅಥವಾ ಅವರ ಸಂಬಂಧಿಕರು ಕಾರಣ ಎಂಬ ಪೂರ್ವನಿರ್ಧಾರಕ್ಕೆ ಬರುವುದು ಸರಿಯಲ್ಲ ಎಂದು ಪೀಠವು ಹೇಳಿದೆ.

'ಆಕೆ ಕ್ರೌರ್ಯಕ್ಕೆ ಗುರಿಯಾಗಿದ್ದಳೇ ಎಂಬುದಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಗಳನ್ನು ಪರಿಶೀಲಿಸುವಾಗ ನ್ಯಾಯಾಲಯವು ಬಹಳ ಎಚ್ಚರಿಕೆ ವಹಿಸಬೇಕು. ಆತ್ಮಹತ್ಯೆ ಮಾಡಿಕೊಂಡವಳು ಸಮಾಜದಲ್ಲಿ ತೀರಾ ಸಹಜವಾಗಿರುವ ಭಿನ್ನಾಭಿಪ್ರಾಯಗಳಿಗೆ, ಸಂಘರ್ಷಗಳಿಗೆ, ಸಿಡುಕುಗಳಿಗೆ ಅತಿಯಾದ ಸಂವೇದನೆ ಬೆಳೆಸಿಕೊಂಡಿದ್ದರೆ, ಅಂತಹ ಪರಿಸ್ಥಿತಿಯು ಅಂಥದ್ದೇ ಪರಿಸರದಲ್ಲಿ ಇರುವ ಬೇರೊಬ್ಬರಲ್ಲಿ ಆತ್ಮಹತ್ಯೆಗೆ ಪ್ರಚೋದನೆ ನೀಡುವುದಿಲ್ಲ ಎಂದಾದರೆ, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಎದುರಿಸುತ್ತಿರುವ ವ್ಯಕ್ತಿಯು ಅಪರಾಧಿ ಎಂದು ಘೋಷಿಸಲು ಕೋರ್ಟ್‌ನ ಆತ್ಮಸಾಕ್ಷಿಯು ಒಪ್ಪುವುದಿಲ್ಲ' ಎಂದು ಪೀಠವು ವಿವರಿಸಿದೆ.

'ಆರೋಪಿಯು ಕಿರುಕುಳ ನೀಡುತ್ತಿದ್ದ ಎಂಬುದೊಂದೇ, ಆತ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾನೆ ಎಂದು ತೀರ್ಮಾನಿಸಲು ಆಧಾರ ಆಗುವುದಿಲ್ಲ. ಸಂತ್ರಸ್ತ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳಲು ನೇರವಾದ ಅಥವಾ ಸಕ್ರಿಯವಾದ ಪಾತ್ರ ಅಲ್ಲಿರಬೇಕಾಗುತ್ತದೆ' ಎಂದು ಅದು ಹೇಳಿದೆ.

ಸಂತ್ರಸ್ತೆಯು ಮದುವೆಯಾದ ಏಳು ವರ್ಷಗಳಿಗೂ ಮೊದಲೇ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ, ಆರೋಪಿಯು ಹೊಸ ವಹಿವಾಟು ಆರಂಭಿಸಲು ತಂದೆ–ತಾಯಿಯಿಂದ ಹಣ ತಂದುಕೊಡುವಂತೆ ಪತ್ನಿಗೆ ಒತ್ತಾಯಿಸುತ್ತಿದ್ದ ಮತ್ತು ಸಂತ್ರಸ್ತೆಯು ಯಾವಾಗಲೂ ಚಿಂತಾಕ್ರಾಂತಳಾಗಿ ಇರುತ್ತಿದ್ದಳು ಎಂಬ ಮೂರು ಅಂಶಗಳಿಂದ ಮಾತ್ರ ಹೈಕೋರ್ಟ್ ಹಾಗೂ ವಿಚಾರಣಾ ನ್ಯಾಯಾಲಯವು ಈ ಪ್ರಕರಣದಲ್ಲಿ ಪ್ರಭಾವಿತವಾಗಿವೆ ಎಂದು ಸುಪ್ರೀಂ ಕೋರ್ಟ್‌ನ ಪೀಠವು ಹೇಳಿದೆ.

ತಡೆಯಾಜ್ಞೆ ತೆರವು: 2018ರ ತೀರ್ಪು ಅನೂರ್ಜಿತ

ನವದೆಹಲಿ (ಪಿಟಿಐ): ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಳಹಂತದ ನ್ಯಾಯಾಲಯಗಳು ಅಥವಾ ಹೈಕೋರ್ಟ್ ನೀಡುವ ತಡೆಯಾಜ್ಞೆಯು ಆರು ತಿಂಗಳ ನಂತರದಲ್ಲಿ ತಾನಾಗಿಯೇ ತೆರವಾಗುತ್ತದೆ ಎಂದು ಭಾವಿಸಬಾರದು ಎಂಬ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ನೀಡಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಎ.ಎಸ್. ಓಕ, ಜೆ.ಬಿ. ಪಾರ್ದೀವಾಲಾ, ಪಂಕಜ್ ಮಿತ್ತಲ್ ಮತ್ತು ಮನೋಜ್ ಮಿಶ್ರಾ ಅವರು ಇದ್ದ ಸಂವಿಧಾನ ಪೀಠವು, 'ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳು ಪ್ರಕರಣಗಳ ಇತ್ಯರ್ಥಕ್ಕೆ ಕೆಳಹಂತದ ನ್ಯಾಯಾಲಯಗಳಿಗೆ ಸಾಮಾನ್ಯ ಸಂದರ್ಭಗಳಲ್ಲಿ ಕಾಲಮಿತಿ ನಿಗದಿ ಮಾಡಬಾರದು' ಎಂದು ಹೇಳಿದೆ.

'ಅಸಾಮಾನ್ಯ ಸಂದರ್ಭಗಳಲ್ಲಿ ಮಾತ್ರವೇ ಪ್ರಕರಣಗಳ ಇತ್ಯರ್ಥಕ್ಕೆ ಕಾಲಮಿತಿ ನಿಗದಿ ಮಾಡಬಹುದು. ಪ್ರಕರಣಗಳನ್ನು ಇತ್ಯರ್ಥಪಡಿಸುವಾಗ ಯಾವುದಕ್ಕೆ ಆದ್ಯತೆ ನೀಡಬೇಕು ಎಂಬುದನ್ನು ಸಂಬಂಧಪಟ್ಟ ನ್ಯಾಯಾಲಯಗಳ ವಿವೇಚನೆಗೆ ಬಿಡುವುದು ಒಳ್ಳೆಯದು' ಎಂದು ಸಂವಿಧಾನ ಪೀಠವು ಹೇಳಿದೆ. ನ್ಯಾಯಪೀಠದಲ್ಲಿ ಇದ್ದ ಓಕ ಮತ್ತು ಮಿಶ್ರಾ ಅವರು ಸಹಮತದ ಎರಡು ಪ್ರತ್ಯೇಕ ತೀರ್ಪುಗಳನ್ನು ಬರೆದಿದ್ದಾರೆ.

2018ರ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳ ಪೀಠವು, ಹೈಕೋರ್ಟ್‌ಗಳು ಸೇರಿದಂತೆ ನ್ಯಾಯಾಲಯಗಳು ನೀಡುವ ಮಧ್ಯಂತರ ತಡೆಯಾಜ್ಞೆಗಳನ್ನು ನಿರ್ದಿಷ್ಟವಾಗಿ ವಿಸ್ತರಿಸುವ ಆದೇಶ ಇಲ್ಲದೆ ಇದ್ದ ಸಂದರ್ಭಗಳಲ್ಲಿ ಅವು ತಾವಾಗಿಯೇ ತೆರವಾಗುತ್ತವೆ ಎಂದು ಹೇಳಿತ್ತು. ಅಂದರೆ, ಆರು ತಿಂಗಳ ನಂತರದಲ್ಲಿ ಯಾವುದೇ ವಿಚಾರಣೆ ಅಥವಾ ಕಾನೂನು ಪ್ರಕ್ರಿಯೆಗೆ ತಡೆ ಇರುವುದಿಲ್ಲ ಎಂದು ಹೇಳಿತ್ತು. ಆದರೆ, ಸುಪ್ರೀಂ ಕೋರ್ಟ್ ನೀಡಿದ್ದ ತಡೆಯಾಜ್ಞೆಗಳಿಗೆ ಈ ಮಾತು ಅನ್ವಯ ಆಗುವುದಿಲ್ಲ ಎಂದು ಪೀಠವು ಸ್ಪಷ್ಟನೆ ನೀಡಿತ್ತು.

2018ರ ಪ್ರಕರಣದಲ್ಲಿನ ತೀರ್ಪನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ಎಂದು ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಓಕ ಅವರು ಹೇಳಿದರು.

ಪ್ರೊ ಕಬಡ್ಡಿ ಫೈನಲ್ ಇಂದು: ಚೊಚ್ಚಲ ಪ್ರಶಸ್ತಿಯ ನಿರೀಕ್ಷೆಯಲ್ಲಿ ಇತ್ತಂಡಗಳು

ಪುಣೇರಿಗೆ ಹರಿಯಾಣ ಸವಾಲು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯ ಫೈನಲ್ ಸೆಣಸಾಟಕ್ಕೆ ಹೈದರಾಬಾದ್ ಗಚ್ಚಿಬೌಲಿ ಕ್ರೀಡಾ ಸಂಕೀರ್ಣದಲ್ಲಿ ವೇದಿಕೆ ಸಿದ್ಧವಾಗಿದೆ. ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸಿರುವ ಪುಣೇರಿ ಪಲ್ಟನ್ ಮತ್ತು ಮೊದಲ ಸಲ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿರುವ ಹರಿಯಾಣ ಸ್ಟೀಲರ್ಸ್ ಕಿರೀಟಕ್ಕಾಗಿ ಶುಕ್ರವಾರ ಪೈಪೋಟಿ ನಡೆಸಲಿವೆ.

ಟೂರ್ನಿಯುದ್ದಕ್ಕೂ ಅಮೋಘ ಆಟವಾಡಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದ, ಅಸ್ಲಂ ಇನಾಮದಾರ ಸಾರಥ್ಯದ ತಂಡವು ಸೆಮಿಫೈನಲ್‌ಗೆ ನೇರಪ್ರವೇಶ ಮಾಡಿತ್ತು. ನಾಲ್ಕರ ಘಟ್ಟದ ಪಂದ್ಯದಲ್ಲಿ 37–21 ರಿಂದ ಸುಲಭವಾಗಿ ಪಟ್ನಾ ಪೈರೇಟ್ಸ್ ತಂಡವನ್ನು ಹಿಮ್ಮೆಟ್ಟಿಸಿರುವ ಪಲ್ಟನ್ ತಂಡವು ಅಧಿಕಾರಯುತವಾಗಿ ಫೈನಲ್ ಪ್ರವೇಶಿಸಿದೆ. ಕಳೆದ ಎರಡೂ ಆವೃತ್ತಿಗಳಲ್ಲಿ ರನ್ನರ್ ಅಪ್ ಸ್ಥಾನ ಪಡೆದಿರುವ ಪುಣೇರಿ, ಈ ಬಾರಿ ಚೊಚ್ಚಲ ಕಿರೀಟ ಧರಿಸಲು ಒಂದು ಹೆಜ್ಜೆ ದೂರದಲ್ಲಿದೆ.

ಉತ್ತಮ ಲಯದಲ್ಲಿರುವ ಇರಾನ್‌ನ ಆಲ್‌ರೌಂಡ್ ಆಟಗಾರ ಮೊಹಮ್ಮದ್ ರೇಜಾ ಶಾಡ್ಲೂಯಿ, ರೇಡರ್‌ಗಳಾದ ಮೋಹಿತ್ ಗೋಯತ್ ಮತ್ತು ಪಂಕಜ್ ಮೋಹಿತೆ ಅವರು ಪುಣೇರಿ ತಂಡದ ಪ್ರಮುಖ ಅಸ್ತ್ರವಾಗಿದ್ದಾರೆ. ಇವರ ಅಮೋಘ ಆಟದ ಬಲದಿಂದಾಗಿ ತಂಡವು ನೇರ ಸೆಮಿಫೈನಲ್ ಅರ್ಹತೆ ಪಡೆದಿತ್ತು. ಫೈನಲ್ ಪಂದ್ಯದಲ್ಲೂ ಈ ಆಟಗಾರರು ಮಿಂಚುವ ವಿಶ್ವಾಸದಲ್ಲಿದ್ದಾರೆ.

‘ಈ ಬಾರಿ ನಮ್ಮ ತಂಡವು ಸಮತೋಲನದಿಂದ ಕೂಡಿದೆ. ಹೀಗಾಗಿ, ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗಿದೆ. ದಾಳಿ ಮತ್ತು ರಕ್ಷಣೆಯಲ್ಲಿ ನಮ್ಮ ಆಟಗಾರರು ಸ್ಥಿರ ಪ್ರದರ್ಶನ ನೀಡಿದ್ದರಿಂದ ಇಷ್ಟು ಮುಂದೆ ಬರಲು ಸಾಧ್ಯವಾಗಿದೆ. ಹರಿಯಾಣ ಸ್ಟೀಲರ್ಸ್ ಪ್ರಬಲ ತಂಡವಾಗಿದ್ದು, ಉತ್ತಮ ಪೈಪೋಟಿ ನಿರೀಕ್ಷೆಯಿದೆ. ಈ ಬಾರಿ ಟ್ರೋಫಿ ಗೆಲ್ಲಲು ಶಕ್ತಿಮೀರಿ ಪ್ರಯತ್ನಿಸುತ್ತೇವೆ’ ಎಂದು ಪಲ್ಟನ್‌ನ ನಾಯಕ ಅಸ್ಲಾಂ ಪ್ರತಿಕ್ರಿಯಿಸಿದ್ದಾರೆ.

ಲೀಗ್ ಹಂತದ ಪಂದ್ಯಗಳಲ್ಲಿ ಸ್ಫೂರ್ತಿಯುತ ಪ್ರದರ್ಶನ ನೀಡಿ, ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನದೊಂದಿಗೆ ಪ್ಲೇ ಆಫ್‌ಗೆ ಅರ್ಹತೆ ಪಡೆದಿದ್ದ ಹರಿಯಾಣ ಸ್ಟೀಲರ್ಸ್ ಇದೇ ಮೊದಲ ಬಾರಿಗೆ ಪ್ರಶಸ್ತಿ ಸುತ್ತು ಪ್ರವೇಶಿಸಿದೆ. ಪ್ಲೇ ಆಫ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು 42–25ರಿಂದ ಸಲಭವಾಗಿ ಮಣಿಸಿ ಸೆಮಿಫೈನಲ್ ಪ್ರವೇಶಿಸಿದ್ದ ಜೈದೀಪ್ ದಹಿಯಾ ನಾಯಕತ್ವದ ಹರಿಯಾಣ ತಂಡವು ಅಲ್ಲಿ ಹಾಲಿ ಚಾಂಪಿಯನ್ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡವನ್ನು 31–27ರಿಂದ ಮಣಿಸಿ ಫೈನಲ್ ಪ್ರವೇಶಿಸಿದೆ.

‘ಫೈನಲ್ ಎದುರಾಳಿ ಪುಣೇರಿ ಬಲಿಷ್ಠವಾದ ತಂಡ. ಲೀಗ್ ಹಂತದ ಪಂದ್ಯಗಳಲ್ಲಿ ನಾವು ಅವರನ್ನು ಸೋಲಿಸಿದ್ದೇವೆ, ಅವರು ನಮ್ಮನ್ನು ಸೋಲಿಸಿದ್ದಾರೆ. ಫೈನಲ್‌ನಲ್ಲಿ ಮತ್ತೆ ನಾವು ಮುಖಾಮುಖಿಯಾಗುತ್ತಿದ್ದು, ನಮ್ಮ ತಂಡ ಉತ್ತಮ ಪ್ರದರ್ಶನ ನೀಡಲು ಪ್ರಯತ್ನಿಸುತ್ತದೆ. ಮೊದಲ ಬಾರಿ ಟ್ರೋಫಿ ಜಯಿಸಲು ನಮ್ಮ ತಂಡ ಸಾಂಘಿಕ ಹೋರಾಟ ನಡೆಸಲಿದೆ’ ಎಂದು ಜೈದೀಪ್ ಹೇಳಿದ್ದಾರೆ.

(ಮಾಹಿತಿ: ಪ್ರೊ ಕಬಡ್ಡಿ ವೆಬ್‌ಸೈಟ್)

ಪ್ರೊ ಕಬಡ್ಡಿ ಟ್ರೋಫಿಯೊಂದಿಗೆ ಪುಣೇರಿ ಪಲ್ಟನ್‌ದ ನಾಯಕ ಅಸ್ಲಂ ಇನಾಮದಾರ ಮತ್ತು ಹರಿಯಾಣ ತಂಡದ ನಾಯಕ ಜೈದೀಪ್ ದಹಿಯಾ

ಇಂದಿನ ಪಂದ್ಯ

ಪುಣೇರಿ ಪಲ್ಟನ್– ಹರಿಯಾಣ ಸ್ಟೀಲರ್ಸ್ (ರಾತ್ರಿ 8)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಧರ್ಮಶಾಲಾ ಟೆಸ್ಟ್‌ಗೆ ಮರಳಿದ ಬೂಮ್ರಾ

ಮಾರ್ಚ್ 7ರಿಂದ ಅಂತಿಮ ಟೆಸ್ಟ್: ಶಸ್ತ್ರಚಿಕಿತ್ಸೆಗಾಗಿ ಲಂಡನ್‌ಗೆ ತೆರಳಿದ ರಾಹುಲ್

ನವದೆಹಲಿ (ಪಿಟಿಐ): ಅನುಭವಿ ಬ್ಯಾಟರ್ ಕೆ.ಎಲ್. ರಾಹುಲ್ ಅವರು ಧರ್ಮಶಾಲಾದಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಸರಣಿಯ ಕೊನೆಯ ಮತ್ತು ಐದನೇ ಟೆಸ್ಟ್‌ಗೆ ಅಲಭ್ಯರಾಗಿದ್ದಾರೆ. ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ತಂಡಕ್ಕೆ ಮರಳಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಗುರುವಾರ ತಂಡವನ್ನು ಪ್ರಕಟಿಸಿದೆ.

ಕನ್ನಡಿಗ ರಾಹುಲ್ ಅವರು ತೊಡೆಯ ಸ್ನಾಯುವಿನ ಗಾಯಕ್ಕೆ ಶಸ್ತ್ರಚಿಕಿತ್ಸೆ ಪಡೆಯಲು ಲಂಡನ್‌ಗೆ ತೆರಳಿದ್ದಾರೆ. ಕಳೆದ ತಿಂಗಳು ಇಂಗ್ಲೆಂಡ್ ಎದುರು ಸರಣಿ ಆರಂಭವಾಗುವ ಮುನ್ನ ಫಿಟ್‌ನೆಸ್ ಪರೀಕ್ಷೆಗೊಳಗಾಗಿದ್ದ ರಾಹುಲ್ ಸಂಪೂರ್ಣ ಚೇತರಿಸಿಕೊಂಡಿರಲಿಲ್ಲ. ಅದ್ದರಿಂದ ಅವರನ್ನು ಆಯ್ಕೆಗೆ ಪರಿಗಣಿಸಿರಲಿಲ್ಲ. ರಾಜ್‌ಕೋಟ್‌ನಲ್ಲಿ ನಡೆದ ಮೂರನೇ ಪಂದ್ಯಕ್ಕೂ ಮುನ್ನ ಅವರು ಶೇ 90ರಷ್ಟು ಫಿಟ್ ಆಗಿದ್ದರು.

‘ರಾಹುಲ್ ಅವರು ಧರ್ಮಶಾಲಾ ಟೆಸ್ಟ್‌ನಲ್ಲಿ ಆಡುವುದಿಲ್ಲ. ಅವರ ಶಸ್ತ್ರಚಿಕಿತ್ಸೆ ಮಾಡುತ್ತಿರುವ ಲಂಡನ್‌ನ ವೈದ್ಯರೊಂದಿಗೆ ನಮ್ಮ ಮಂಡಳಿಯ ವೈದ್ಯಕೀಯ ತಂಡವು ನಿರಂತರ ಸಂಪರ್ಕದಲ್ಲಿದೆ. ರಾಹುಲ್ ಅವರ ಆರೋಗ್ಯ ಮಾಹಿತಿಯನ್ನು ಪಡೆದುಕೊಳ್ಳುತ್ತಿದೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಬೂಮ್ರಾ ಅವರು ನಾಲ್ಕನೇ ಟೆಸ್ಟ್‌ನಲ್ಲಿ ಆಡಿರಲಿಲ್ಲ. ಕಾರ್ಯಬಾಹುಳ್ಯ ನಿರ್ವಹಣೆ ನಿಯಮದ ಅನುಸಾರ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಮಾರ್ಚ್ 7ರಂದು ಆರಂಭವಾಗುವ ಟೆಸ್ಟ್ ಪಂದ್ಯದಲ್ಲಿ ಅವರು ಆಡುವು ಖಚಿತವಾಗಿದೆ.

ರಾಹುಲ್ ಅನುಪಸ್ಥಿತಿಯಿಂದಾಗಿ ರಜತ್ ಪಾಟೀದಾರ್ ಅವರು ತಂಡದಲ್ಲಿ ಮುಂದುವರಿಯುವುದು ಬಹುತೇಕ ಖಚಿತವಾಗಿದೆ. ಆದರೆ ಅವರಿಗೆ ಆಡುವ ಹನ್ನೊಂದರಲ್ಲಿ ಸ್ಥಾನ ಸಿಗುವುದು ಖಚಿತವಿಲ್ಲ.

ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರು ರಾಷ್ಟ್ರೀಯ ತಂಡದಿಂದ ತಮ್ಮ ತವರು ತಂಡ ತಮಿಳುನಾಡಿಗೆ ಮರಳಿದ್ದಾರೆ. ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಅವರು ಆಡಲಿದ್ದಾರೆ.

‘ಇದೇ 2ರಿಂದ ತಮಿಳುನಾಡು ತಂಡವು ಮುಂಬೈ ವಿರುದ್ಧ ಆಡಲಿರುವ ರಣಜಿ ಸೆಮಿಫೈನಲ್‌ನಲ್ಲಿ ಆಡುವರು. ಆ ಪಂದ್ಯ ಮುಗಿದ ಮೇಲೆ ಧರ್ಮಶಾಲಾಕ್ಕೆ ಬಂದು ರಾಷ್ಟ್ರೀಯ ತಂಡ ಸೇರಿಕೊಳ್ಳುವರು’ ಎಂದು ಬಿಸಿಸಿಐ ತಿಳಿಸಿದೆ.

ಭಾರತ ತಂಡದ ಜಸ್‌ಪ್ರೀತ್ ಬೂಮ್ರಾ

ಭಾರತ ತಂಡ ಹೀಗಿದೆ

ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ಧ್ರುವ ಜುರೇಲ್ (ವಿಕೆಟ್‌ಕೀಪರ್), ಕೆ.ಎಸ್. ಭರತ್ (ವಿಕೆಟ್‌ಕೀಪರ್), ದೇವದತ್ತ ಪಡಿಕ್ಕಲ್, ಆರ್. ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಆಕಾಶ್ ದೀಪ್.

‘ಹಾರ್ದಿಕ್ ಅಂತಹ ಆಟಗಾರರಿಗೂ ನಿಯಮ ಅನ್ವಯಿಸಲಿ’

ನವದೆಹಲಿ(ಪಿಟಿಐ): ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ಅವರು ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡದ ಕಾರಣಕ್ಕೆ ಅವರನ್ನು ಕೇಂದ್ರ ಗುತ್ತಿಗೆಯಿಂದ ಕೈಬಿಡಲಾಗಿದೆ. ಆದರೆ ಹಾರ್ದಿಕ್ ಪಾಂಡ್ಯ ಅವರಿಗೆ ರಿಯಾಯಿತಿ ನೀಡಿರುವುದು ಯಾಕೆ. ನಿಯಮ ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯಿಸಬೇಕಲ್ಲವೇ ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ಇರ್ಫಾನ್ ಪಠಾಣ್ ಪ್ರಶ್ನಿಸಿದ್ದಾರೆ.

ರಾಷ್ಟ್ರೀಯ ತಂಡದಲ್ಲಿ ಆಡದಿರುವಾಗ ಆಟಗಾರರು ದೇಶಿ ಟೂರ್ನಿಗಳಲ್ಲಿ ತಮ್ಮ ತವರು ರಾಜ್ಯಗಳ ತಂಡದಲ್ಲಿ ಆಡಬೇಕೆಂಬ ನಿಯಮ ಪಾಲಿಸದ ಕಾರಣ ಇಶಾನ್ ಮತ್ತು ಶ್ರೇಯಸ್ ಅವರನ್ನು ಬುಧವಾರ ಕೇಂದ್ರಿಯ ಗುತ್ತಿಗೆಯಿಂದ ಕೈಬಿಡಲಾಗಿತ್ತು. ಆದರೆ, ಪಾಂಡ್ಯ ಅವರು 2018ರಿಂದ ಇಲ್ಲಿಯವರೆಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಆಡಿಲ್ಲ. ಆದರೂ ಅವರನ್ನು ಎ ಗ್ರೇಡ್‌ನಲ್ಲಿ ಉಳಿಸಲಾಗಿದೆ.

‘ಹಾರ್ದಿಕ್ ಅವರಂತಹ ಆಟಗಾರರು ಕೆಂಪು ಚೆಂಡಿನ ಕ್ರಿಕೆಟ್ ಆಡಲು ಇಷ್ಟಪಡದಿದ್ದರೆ, ಅವರು ಅಥವಾ ಅವರಂತಹವರು ಶ್ವೇತವರ್ಣದ ಚೆಂಡಿನ ಮಾದರಿ ಕ್ರಿಕೆಟ್‌ನಲ್ಲಿ ಆಡಬಹುದೇ. ಅದರೂ ಅವರು ರಾಷ್ಟ್ರೀಯ ತಂಡದಲ್ಲಿ ಇರದ ಸಂದರ್ಭದಲ್ಲಿ’ ಎಂದು ಇರ್ಫಾನ್ ಎಕ್ಸ್‌ನಲ್ಲಿ ಹಾಕಿರುವ ಪೋಸ್ಟ್‌ನಲ್ಲಿ ಬಿಸಿಸಿಐ ನಿರ್ಧಾರವನ್ನು ಪ್ರಶ್ನಿಸಿದ್ದಾರೆ.

‘ಒಂದೊಮ್ಮೆ ಈ ನಿಯಮ ಎಲ್ಲರಿಗೂ ಸರಿಸಮನಾಗಿ ಅನ್ವಯವಾಗದಿದ್ದರೆ, ಭಾರತದ ಕ್ರಿಕೆಟ್ ರಂಗವು ನಿರೀಕ್ಷಿತ ಗುರಿಯನ್ನು ಸಾಧಿಸುವುದಿಲ್ಲ’ ಎಂದೂ ಅವರು ಉಲ್ಲೇಖಿಸಿದ್ದಾರೆ.

ಡಿಸೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿದ್ದ ಭಾರತ ತಂಡದಲ್ಲಿ ಇಶಾನ್ ಇದ್ದರು. ಆದರೆ, ಅವರು ವೈಯಕ್ತಿಕ ಕಾರಣಗಳಿಂದಾಗ ಪ್ರವಾಸದಿಂದ ಅರ್ಧದಲ್ಲಿಯೇ ಭಾರತಕ್ಕೆ ಮರಳಿದ್ದರು. ಆದರೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ತಮ್ಮ ತವರು ಜಾರ್ಖಂಡ್ ರಾಜ್ಯ ಪರ ಆಡಲಿಲ್ಲ. ಬಿಸಿಸಿಐ ಸೂಚನೆ ನೀಡಿದರೂ ಪಾಲಿಸಲಿಲ್ಲ. ಆದರೆ ಅವರು ಸದ್ಯ ನಡೆಯುತ್ತಿರುವ ಡಿವೈ ಪಾಟೀಲ ಟಿ20 ಟೂರ್ನಿಯಲ್ಲಿ ಆಡುತ್ತಿದ್ದಾರೆ. ಐಪಿಎಲ್ ಟೂರ್ನಿ ಸಿದ್ಧತೆ ನಡೆಸುತ್ತಿದ್ದಾರೆ.

ಶ್ರೇಯಸ್ ಅವರು ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್‌ನಲ್ಲಿ ತೊಡೆಯ ಸ್ನಾಯುವಿನ ಗಾಯದಿಂದಾಗಿ ತಂಡದಿಂದ ಹೊರನಡೆದಿದ್ದರು. ಇದೇ 2ರಿಂದ ಆರಂಭವಾಗಲಿರುವ ರಣಜಿ ಟೂರ್ನಿ ಸೆಮಿಫೈನಲ್‌ನಲ್ಲ ಅವರು ಮುಂಬೈ ತಂಡದಲ್ಲಿ ಆಡಲಿದ್ದಾರೆ. ಮಾರ್ಚ್ 22ರಿಂದ ಆರಂಭವಾಗಲಿರುವ ಐಪಿಎಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಅವರು ಕಣಕ್ಕಿಳಿಯುವರು.

‘ಇಶಾನ್ ಮತ್ತು ಶ್ರೇಯಸ್ ಅವರಿಬ್ಬರೂ ಪ್ರತಿಭಾವಂತ ಆಟಗಾರರು. ಅವರು ಮತ್ತಷ್ಟು ಬಲದೊಂದಿಗೆ ಕಣಕ್ಕೆ ಮರಳುವ ವಿಶ್ವಾಸವಿದೆ’ ಎಂದೂ ಇರ್ಫಾನ್ ಅಭಿಪ್ರಾಯಪಟ್ಟಿದ್ದಾರೆ.

ಬಲವಂತದಿಂದ ಅಸಾಧ್ಯ: ‘ಕ್ರಿಕೆಟಿಗನೊಬ್ಬ ದೇಶೀಯ ಪಂದ್ಯಗಳನ್ನು ಆಡಲು ಬಯಸದಿದ್ದರೆ ಬಲವಂತವಾಗಿ ಏನೂ ಮಾಡಲು ಆಗುವುದಿಲ್ಲ’ ಎಂದು ಕ್ರಿಕೆಟಿಗ ವೃದ್ಧಿಮಾನ್ ಸಹಾ ಹೇಳಿದ್ದಾರೆ.

‘ಇದು ಬಿಸಿಸಿಐ ಮತ್ತು ಸಂಬಂಧಪಟ್ಟ ಆಟಗಾರರ ವೈಯಕ್ತಿಕ ನಿರ್ಧಾರ. ಆದರೆ, ಆಟಗಾರ ಬೆಳೆಯಬೇಕೆಂದರೆ ದೇಶೀಯ ಕ್ರಿಕೆಟ್‌ನಲ್ಲಿ ಆಡಬೇಕು. ಅದನ್ನು ಒತ್ತಾಯಪೂರ್ವಕವಾಗಿ ಹೇರಲು ಆಗುವುದಿಲ್ಲ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಇರ್ಫಾನ್ ಪಠಾಣ್

ಡೆಲ್ಲಿ ಕ್ಯಾಪಿಟಲ್ಸ್‌ಗೆ ಮಣಿದ ಆರ್‌ಸಿಬಿ

ಕಾಪ್, ಯೊನಾಸನ್ ಆಲ್‌ರೌಂಡ್ ಆಟ • ನೆರವಿಗೆ ಬಾರದ ಸ್ಮೃತಿ ಅರ್ಧಶತಕ

• ನಾಗೇಶ್ ಶೆಣೈ

ಬೆಂಗಳೂರು: ಆರ್‌ಸಿಬಿ ತಂಡದ ಹ್ಯಾಟ್ರಿಕ್ ಗೆಲುವನ್ನು ನಿರೀಕ್ಷಿಸಿ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬಂದಿದ್ದ ದೊಡ್ಡ ಸಂಖ್ಯೆಯ ಅಭಿಮಾನಿಗಳಿಗೆ ನಿರಾಸೆಯಾಯಿತು. ಮರೈಝಾನ್ ಕಾಪ್ (32, 35ಕ್ಕೆ2) ಮತ್ತು ಜೆಸ್ ಯೊನಾಸನ್ (ಅಜೇಯ 36, 21ಕ್ಕೆ3) ಅವರ ಆಲ್‌ರೌಂಡ್ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಗುರುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೇಲೆ 25 ರನ್‌ಗಳಿಂದ ಅರ್ಹ ಜಯ ಪಡೆಯಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ 5 ವಿಕೆಟ್‌ಗೆ 194 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತು. ಇದು ಎರಡನೇ ಆವೃತ್ತಿಯ ಗರಿಷ್ಠ ಮೊತ್ತ. ಉತ್ತರವಾಗಿ ಬೆಂಗಳೂರು ತಂಡ 8.3 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 77 ರನ್ ಗಳಿಸಿ ಉತ್ತಮ ಆರಂಭ ಮಾಡಿತ್ತು. ನಾಯಕಿ ಸ್ಮೃತಿ ಮಂದಾನ (74, 43ಎ, 4x10, 6x3) ಮತ್ತು ಸೋಫಿ ಡಿವೈನ್ (23, 17 ಎಸೆತ) ಬಿರುಸಿನ ಆಟವಾಡಿದಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮ ಕಂಡುಬಂದಿತ್ತು.

ಉತ್ತಮವಾಗಿ ಆಡುತ್ತಿದ್ದ ಸ್ಮೃತಿ 12ನೇ ಓವರ್‌ನ ಕೊನೆಯ ಎಸೆತದಲ್ಲಿ ಮರೈಝಾನ್ ಕಾಪ್ ಅವರ ಬೌಲಿಂಗ್‌ನಲ್ಲಿ ಬೌಲ್ಡ್ ಆಗುವ ಮೂಲಕ ಆರ್‌ಸಿಬಿ ಹಿಡಿತ ಕಳೆದುಕೊಂಡಿತು. ಆಗ ಮೊತ್ತ 2 ವಿಕೆಟ್‌ಗೆ 112. ತಲುಪಬೇಕಾದ ಗುರಿ ದೊಡ್ಡದಿದ್ದು, ಡೆಲ್ಲಿ ಬೌಲರ್‌ಗಳು ಹಿಡಿತ ಸಾಧಿಸಿದರು. ನಂತರ ಸಬ್ಬಿನೇನಿ ಮೇಘನಾ (36, 31 ಎಸೆತ) ಬಿಟ್ಟರೆ ಯಾರೂ 20ರ ಗಡಿದಾಟಲಿಲ್ಲ. ಆರ್‌ಸಿಬಿ 9 ವಿಕೆಟ್‌ಗೆ 169 ರನ್ ಗಳಿಸಲಷ್ಟೇ ಶಕ್ತವಾಯಿತು.

ಇದಕ್ಕೆ ಮೊದಲು ಡೆಲ್ಲಿ ಬ್ಯಾಟರ್‌ಗಳು ಅಮೋಘವಾಗಿ ಆಡಿದರು. ಭಾರತ ತಂಡದ ಆರಂಭ ಆಟಗಾರ್ತಿಯೂ ಆಗಿರುವ ಶೆಫಾಲಿ ವರ್ಮಾ (50, 31ಎ, 4x3, 6x4), ಅಲೈಸ್ ಕ್ಯಾಪ್ಸಿ (46, 33ಎ, 4x4, 6x2) ಅವರು ಉತ್ತಮ ಆರಂಭ ನೀಡಿದರೆ, ಕೊನೆಯಲ್ಲಿ ಮರೈಝಾನ್ ಕಾಪ್ (32, 16ಎ, 4x2, 6x2) ಮತ್ತು ಜೆಸ್ ಯೊನಾಸನ್ (ಅಜೇಯ 36, 16ಎ, 4x4, 6x2) ಅವರು ಮಿಂಚಿನ ಬ್ಯಾಟಿಂಗ್ ಪ್ರದರ್ಶಿಸಿ ಮೊತ್ತವನ್ನು 200ರ ಸನಿಹ ತಲುಪಿಸಿದರು.

ಮೊದಲ ಓವರ್‌ನಲ್ಲೇ, ರೇಣುಕಾ ಸಿಂಗ್ ಬೌಲಿಂಗ್‌ನಲ್ಲಿ ಕವರ್ಸ್‌ನಲ್ಲಿ ಶ್ರೇಯಾಂಕಾ ಪಾಟೀಲ ಅವರಿಂದ ಜೀವದಾನ ಪಡೆದಿದ್ದ ಶೆಫಾಲಿ ವರ್ಮಾ ಅದನ್ನು ಸಮರ್ಥವಾಗಿಯೇ ಬಳಸಿಕೊಂಡರು. ಆರಂಭ ಆಟಗಾರ್ತಿ ಹಾಗೂ ನಾಯಕಿ ಮೆಗ್ ಲ್ಯಾನಿಂಗ್ (11) ನಿರ್ಗಮನದ ನಂತರ ಶೆಫಾಲಿ ಮತ್ತು ಅಲೈಸ್ ಕ್ಯಾಪ್ಸಿ ಆಟ ಮೇಳೈಸಿತು. ಬೌಂಡರಿ, ಸಿಕ್ಸರ್‌ಗಳು ನಿಯಮಿತವಾಗಿ ಬರತೊಡಗಿದವು. ಎರಡನೇ ವಿಕೆಟ್‌ಗೆ 42 ಎಸೆತಗಳಲ್ಲಿ 82 ರನ್‌ಗಳು ಹರಿದುಬಂದವು. ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಮೊದಲ ಓವರ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಎತ್ತಿದ ಶೆಫಾಲಿ ಅರ್ಧ ಶತಕ ಪೂರೈಸಿದರಲ್ಲದೇ, ಮೂರನೆಯದಕ್ಕೆ ಯತ್ನಿಸಿ ಲಾಂಗ್‌ಆನ್‌ನಲ್ಲಿ ಕ್ಯಾಚಿತ್ತರು. ನಂತರ ಮರೈಝಾನ್ ಮತ್ತು ಯೊನಾಸನ್ ಸಿಕ್ಸರ್, ಬೌಂಡರಿಗಳ ತಂಡದ ರನ್ ವೇಗ ಹೆಚ್ಚಿಸುತ್ತಾ ಹೋದರು.

ಎರಡನೇ ಗೆಲುವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ಅಗ್ರಸ್ಥಾನಕ್ಕೇರಿತು. ತಲಾ 2 ಗೆಲುವು, ಒಂದು ಸೋಲಿನೊಡನೆ ಆರ್‌ಸಿಬಿ ಮತ್ತು ಮುಂಬೈ ಇಂಡಿಯನ್ಸ್ ಕೂಡ ನಾಲ್ಕು ಪಾಯಿಂಟ್ಸ್ ಕಲೆಹಾಕಿದರೂ ಡೆಲ್ಲಿ ನಿವ್ವಳ ರನ್ ದರ ಹೆಚ್ಚಿದೆ.

ಸ್ಕೋರುಗಳು: ಡೆಲ್ಲಿ ಕ್ಯಾಪಿಟಲ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 194 (ಶೆಫಾಲಿ ವರ್ಮಾ 50, ಅಲೈಸ್ ಕ್ಯಾಪ್ಸಿ 46, ಮರೈಝಾನ್ ಕಾಪ್ 32, ಜೆಸ್ ಯೊನಾಸನ್ ಔಟಾಗದೇ 36; ಸೋಫಿ ಡಿವೈನ್ 23ಕ್ಕೆ2, ನಾದಿನ್ ಡಿ ಕ್ಲಾರ್ಕ್ 35ಕ್ಕೆ2); **ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರು:** 20 ಓವರುಗಳಲ್ಲಿ 9 ವಿಕೆಟ್‌ಗೆ 169 (ಸ್ಮೃತಿ ಮಂದಾನ 74, ಸೋಫಿ ಡಿವೈನ್ 23, ಸಬ್ಬಿನೇನಿ ಮೇಘನಾ 36; ಮರೈಝಾನ್ ಕಾಪ್ 35ಕ್ಕೆ2 ಜೆಸ್ ಯೊನಾಸನ್ 21ಕ್ಕೆ3, ಅರುಂಧತಿ ರೆಡ್ಡಿ 38ಕ್ಕೆ2). **ಪಂದ್ಯದ ಆಟಗಾರ್ತಿ:** ಮರೈಝಾನ್ ಕಾಪ್.

ಶುಕ್ರವಾರದ ಪಂದ್ಯ: ಯುಪಿ ವಾರಿಯರ್ಸ್– ಗುಜರಾತ್ ಜೈಂಟ್ಸ್ (ರಾತ್ರಿ 7.30)

ನೇರಪ್ರಸಾರ: ಸ್ಪೋರ್ಟ್ಸ್ 18

ಗೆಲುವಿನ ಸಂಭ್ರಮದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರ್ತಿಯರು

–ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಚೆಸ್: ಇರಾನ್ ಆಟಗಾರನಿಗೆ ಮಣಿದ ಪ್ರಜ್ಞಾನಂದ

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ, ಸಮಯದ ಒತ್ತಡದಲ್ಲಿ ತಪ್ಪೆಸಗಿದ ಪರಿಣಾಮ ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಇರಾನ್‌ನ ಆಟಗಾರ ಪರ್ಹಾಮ್ ಮಘಸೂಡ್ಲು ಅವರೆದುರು ಸೋಲನುಭವಿಸಬೇಕಾಯಿತು.

ಈ ಸೋಲಿನಿಂದಾಗಿ ಕ್ಲಾಸಿಕಲ್ ಮಾದರಿಯ ಚೆಸ್‌ನಲ್ಲಿ ಪ್ರಜ್ಞಾನಂದ ಅವರ 47 ಪಂದ್ಯಗಳ ಅಜೇಯ ಸರಣಿ ಗುರುವಾರ ಕಡಿತಗೊಂಡಿತು. ಲೈವ್ ರೇಟಿಂಗ್‌ನಲ್ಲಿ ಭಾರತದ ಆಟಗಾರರಲ್ಲಿ ಅವರು ಅಗ್ರ ಕ್ರಮಾಂಕವನ್ನೂ ಕಳೆದುಕೊಂಡರು. ಈ ಟೂರ್ನಿಯ ಪ್ರಚಾರ ರಾಯಭಾರಿಯೂ ಆಗಿರುವ ವಿಶ್ವನಾಥನ್ ಆನಂದ್ ಮತ್ತೆ ಆ ಸ್ಥಾನಕ್ಕೇರಿದರು.

ಭಾರತದ ಇನ್ನೊಬ್ಬ ಆಟಗಾರ ಡಿ.ಗುಕೇಶ್, ಕಪ್ಪು ಕಾಯಿಗಳಲ್ಲಿ ಸ್ಫೂರ್ತಿಯುತ ಪ್ರದರ್ಶನವಿತ್ತು ಝೆಕ್ ರಿಪಬ್ಲಿಕ್‌ನ ಎನ್ಗುಯೆನ್ ಥಾಯ್ ದೈ ವಾನ್ ಅವರನ್ನು 52 ನಡೆಗಳಲ್ಲಿ ಸೋಲಿಸಿದರು. 10 ಆಟಗಾರರ ರೌಂಡ್‌ರಾಬಿನ್ ಟೂರ್ನಿಯ ಇತರ ಮೂರು ಪಂದ್ಯಗಳು ‘ಡ್ರಾ’ ಆದವು.

ಇನ್ನೂ ಏಳು ಸುತ್ತುಗಳಿದ್ದು, ಮಘಸೂಡ್ಲು ಅವರು ಎರಡು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಗುಕೇಶ್ ಮತ್ತು ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರು (ತಲಾ 1.5) ಎರಡನೇ ಸ್ಥಾನದಲ್ಲಿದ್ದಾರೆ. ಉಜ್ಬೇಕ್ ಆಟಗಾರ ಎರಡನೇ ಸುತ್ತಿನಲ್ಲಿ ಭಾರತದ ವಿದಿತ್ ಗುಜರಾತಿ (1) ಜೊತೆ 35 ನಡೆಗಳ ನಂತರ ಪಾಯಿಂಟ್ ಹಂಚಿಕೊಂಡರು.

ಪ್ರಜ್ಞಾನಂದ, ವಿದಿತ್, ರುಮೇನಿಯಾದ ರಿಚರ್ಡ್ ರ್‍ಯಾಪೋರ್ಟ್, ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರಾ ಅವರು ತಲಾ ಒಂದು ಪಾಯಿಂಟ್ಸ್ ಪಡೆದಿದ್ದಾರೆ. ಜರ್ಮನಿಯ ವಿನ್ಸೆಂಟ್ ಕೀಮರ್ ಮತ್ತು ಪೋಲೆಂಡ್‌ನ ಮಾಥ್ಯುಸ್ ಬಾರ್ತೆಲ್ ತಲಾ 0.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಝೆಕ್ ರಿಪಬ್ಲಿಕ್‌ನ ದೈ ವಾನ್ ಇನ್ನೂ ಖಾತೆ ತೆರೆದಿಲ್ಲ.

ಕಪ್ಪು ಕಾಯಿಗಳಲ್ಲಿ ಆಡಿದ ಪ್ರಜ್ಞಾನಂದ ಪಂದ್ಯದ ಮಧ್ಯಮ ಹಂತದಲ್ಲಿ ಸ್ವಲ್ಪ ಉತ್ತಮ ಸ್ಥಿತಿಗೆ ಬಂದಂತೆ ಕಂಡರೂ ಅವರಿಗೆ ನಡೆಗಳನ್ನು ಇರಿಸಲು ಸಮಯ ಕಡಿಮೆಯಿತ್ತು. ಈ ಪರಿಸ್ಥಿತಿಯಲ್ಲಿ ಎದುರಾಳಿಯ ತಪ್ಪಿಗೆ ಕಾಯ್ದ ಮಘಸೂಡ್ಲು 38 ನಡೆಗಳಲ್ಲಿ ಪಂದ್ಯ ಗೆದ್ದರು.

ಇತರ ಪಂದ್ಯಗಳಲ್ಲಿ ಬಾರ್ತೆಲ್ ಮಾಥ್ಯೂಸ್, ರ್‍ಯಾಪೋರ್ಟ್ ಜೊತೆ ‘ಡ್ರಾ’ ಮಾಡಿಕೊಂಡರೆ, ಕೀಮರ್ ಮತ್ತು ನವಾರರ ನಡುವಣ ಪಂದ್ಯ ‘ಡ್ರಾ’ ಆಯಿತು.

ಚಾಲೆಂಜರ್ಸ್ ವಿಭಾಗದಲ್ಲಿ ಆರ್.ವೈಶಾಲಿ, ಟರ್ಕಿಯ ಇಡಿಝ್ ಗುರೆಲ್ ಎದುರು ಸೋಲನುಭವಿಸಿದರು. ಇದು ಅವರಿಗೆ ಟೂರ್ನಿಯಲ್ಲಿ ಎರಡನೇ ಸೋಲು.



ಆರ್‌.ಪ್ರಜ್ಞಾನಂದ

ಡೋಪಿಂಗ್: ಪಾಲ್ ಪೊಗ್ಬಾಗೆ ನಿಷೇಧ

ರೋಮ್ (ಎಎಫ್‌ಪಿ): ಫ್ರಾನ್ಸ್ ದೇಶದ ಫುಟ್‌ಬಾಲ್ ತಾರೆ ಪಾಲ್ ಪೊಗ್ಬಾ ಅವರಿಗೆ ಉದ್ದೀಪನ ಮದ್ದು ಸೇವನೆ ಪ್ರಕರಣದಲ್ಲಿ ನಾಲ್ಕು ವರ್ಷ ನಿಷೇಧ ಹಾಕಲಾಗಿದೆ. ಇಟಲಿಯ ಆ್ಯಂಟಿ ಡೋಪಿಂಗ್ ಟ್ರಿಬ್ಯುನಲ್ ಗುರುವಾರ ಈ ಶಿಕ್ಷೆ ಪ್ರಕಟಿಸಿತು.

ಹೋದ ವರ್ಷದ ಆಗಸ್ಟ್‌ನಲ್ಲಿ ಯುವೆಂಟಸ್ ಕ್ಲಬ್‌ನಲ್ಲಿ ಆಡಿದ್ದ ಪಾಲ್ ಅವರನ್ನು ಉದ್ದೀಪನ ಮದ್ದು ಸೇವನೆ ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರು ನಿಷೇಧಿತ ಟೆಸ್ಟೊಸ್ಟಿರಾನ್ ಸೇವನೆ ಮಾಡಿದ್ದು ಸಾಬೀತಾಗಿತ್ತು. ಸೆಪ್ಟೆಂಬರ್‌ನಲ್ಲಿ ಅವರನ್ನು ತಾತ್ಕಾಲಿಕ ಅಮಾನತು ಮಾಡಲಾಗಿತ್ತು.

‘ಟ್ರಿಬ್ಯುನಲ್‌ನಲ್ಲಿಂದ ಅಧಿಸೂಚನೆಯನ್ನು ಇಂದು ಬೆಳಿಗ್ಗೆ ಸ್ವೀಕರಿಸಿದ್ದೇವೆ’ ಎಂದು ಪಾಲ್ ಅವರ ವಕ್ತಾರ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಯೂಕಿ– ರಾಬಿನ್ ಜೋಡಿ ಸೆಮಿಗೆ

ದುಬೈ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಮತ್ತು ಅವರ ಡಚ್ ಜತೆಗಾರ ರಾಬಿನ್ ಹಸ್ಸೆ ಅವರು ದುಬೈ ಟೆನಿಸ್ ಟೂರ್ನಿಯರ ಪುರುಷರ ಡಬಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಯೂಕಿ– ರಾಬಿನ್ ಜೋಡಿಯು 6-4, 7-6 (1)ರಿಂದ ಮೂರನೇ ಶ್ರೇಯಾಂಕದ ಜೇಮಿ ಮರ್ರೆ ಮತ್ತು ಮೈಕೆಲ್ ವೀನಸ್ ಅವರಿಗೆ ಆಘಾತ ನೀಡಿತು. ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ರೋಹನ್ ಬೋಪಣ್ಣ (ಭಾರತ) ಮತ್ತು ಮ್ಯಾಥ್ಯೂ ಎಬ್ಡೆನ್ (ಆಸ್ಟ್ರೇಲಿಯಾ) ಜೋಡಿಯು 6–3, 3–6, 8–10ರಿಂದ ಉರುಗ್ವೆಯ ಏರಿಯಲ್ ಬೆಹರ್ ಮತ್ತು ಜೆಕ್ ಗಣರಾಜ್ಯದ ಆ್ಯಡಂ ಪಾವ್ಲಾಸೆಕ್ ಅವರಿಗೆ ಮಣಿಯಿತು.

ಟ್ರೀಸಾ– ಗಾಯತ್ರಿ ಜೋಡಿ ಮುನ್ನಡೆ

ಮುಲ್ಹೀಮ್ ಅನ್ ಡೆರ್ ರುರ್ (ಜರ್ಮನಿ), (ಪಿಟಿಐ): ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಜರ್ಮನ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಭಾರತದ ಆಟಗಾರ್ತಿಯರು 21-10, 21-11 ನೇರ ಗೇಮ್‌ಗಳಿಂದ ಜೆಕ್ ಗಣರಾಜ್ಯದ ಸೋನಾ ಹೊರಿಂಕೋವಾ ಮತ್ತು ಕಟೆರಿನಾ ಜುಜಾಕೋವಾ ಅವರನ್ನು ಮಣಿಸಿದರು.

ವಾರಿಯರ್ಸ್‌ಗೆ ಜಯ

ಬೆಂಗಳೂರು: ಕವಿಯರಸನ್ ಅವರ ಆಟದ ಬಲದಿಂದ ಬೆಂಗಳೂರು ವಾರಿಯರ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ‘ಬಿ’ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 3–1ರಿಂದ ತಿಲಕ್ ಮೆಮೋರಿಯಲ್ ಎಫ್‌ಸಿ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಎಜಿಒಆರ್‌ಸಿ ಎಫ್‌ಸಿ ತಂಡವು ಆದಾಯ ತೆರಿಗೆ ತಂಡದೊಂದಿಗೆ ಗೋಲುರಹಿತವಾಗಿ ಡ್ರಾ ಸಾಧಿಸಿತು.

ಸಮಗ್ರ ತನಿಖೆ: ಬಂಗಾಳ ಕ್ರಿಕೆಟ್ ಸಂಸ್ಥೆ ಭರವಸೆ

ಕೋಲ್ಕತ್ತ ಲೀಗ್‌ನಲ್ಲಿ ಫಿಕ್ಸಿಂಗ್: ಆರೋಪ

ಕೋಲ್ಕತ್ತ (ಪಿಟಿಐ): ಬಂಗಾಳ ಕ್ರಿಕೆಟ್ ಸಂಸ್ಥೆಯ ಪ್ರಥಮ ಡಿವಿಷನ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪಂದ್ಯ ಫಿಕ್ಸಿಂಗ್ ನಡೆದಿದೆ ಎಂದು ವಿಕೆಟ್‌ಕೀಪರ್ -ಬ್ಯಾಟರ್ ಶ್ರೀವತ್ಸ ಗೋಸ್ವಾಮಿ ಆರೋಪಿಸಿದ್ದಾರೆ.

2008ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ ಭಾರತ ತಂಡದಲ್ಲಿ ಗೋಸ್ವಾಮಿ ಆಡಿದ್ದರು.

ಲೀಗ್‌ನಲ್ಲಿ ಮೊಹಮ್ಮಡನ್ ಸ್ಪೋರ್ಟಿಂಗ್ ಮತ್ತು ಟೌನ್ ಕ್ಲಬ್ ತಂಡಗಳ ನಡುವಣ ಪಂದ್ಯದ ವಿಡಿಯೊ ಕ್ಲಿಪ್‌ಗಳನ್ನು ಗೋಸ್ವಾಮಿ ತಮ್ಮ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮೊಹಮ್ಮಡನ್ ಸ್ಪೋರ್ಟಿಂಗ್ ಬ್ಯಾಟರ್‌ಗಳು ಉದ್ದೇಶಪೂರ್ವಕವಾಗಿ ಔಟ್ ಆಗುತ್ತಿರುವಂತೆ ಕಾಣುತ್ತಿದೆ. ಟೌನ್ ಕ್ಲಬ್‌ಗೆ ಏಳು ಅಂಕಗಳನ್ನು ಬಿಟ್ಟುಕೊಡುವ ದುರುದ್ದೇಶ ಅದರದ್ದಾಗಿರುವಂತೆ ಅನುಮಾನವಾಗಿದೆ ಎಂದು ಗೋಸ್ವಾಮಿ ಆರೋಪಿಸಿದ್ಧಾರೆ.

‘ಇದು ಕೋಲ್ಕತ್ತ ಕ್ಲಬ್ ಕ್ರಿಕೆಟ್‌ನಲ್ಲಿ ಇದು ಸೂಪರ್ ಡಿವಿಷನ್ ಕ್ರಿಕೆಟ್ ಪಂದ್ಯವಾಗಿದೆ. ಈ ಎರಡೂ ದೊಡ್ಡ ತಂಡಗಳು ಆಡಿವೆ. ತಮಗೇನಾದರೂ ಇಲ್ಲಿ ಏನು ನಡೆಯುತ್ತಿದೆ ಎಂದು ಹೊಳೆಯುತ್ತಿದೆಯೇ’ ಎಂದು ಗೋಸ್ವಾಮಿ ತಮ್ಮ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಟೌನ್ ಕ್ಲಬ್ ತಂಡವು ಭಾರತ ತಂಡದ ಮಾಜಿ ಮ್ಯಾನೇಜರ್ ದೇವವ್ರತ್ ದಾಸ್ ಅವರದ್ದು.ಸದ್ಯ ಅವರು ಬಂಗಾಳ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿಯಾಗಿದ್ದಾರೆ. ಅವರು ಹಾಕಿರುವ ಮೊದಲ ವಿಡಿಯೊದಲ್ಲಿ ಬಲಗೈ ಬ್ಯಾಟರ್ ಒಬ್ಬರು ಸ್ಟಂಪ್‌ಗೆ ನೇರವಾಗಿ ಬಂದ ಎಸೆತವನ್ನು ಆಡದೇ ಬಿಟ್ಟರು. ಕ್ಲೀನ್‌ಬೌಲ್ಡ್ ಆಗಿ ಹೊರನಡೆದರು. ಎರಡನೇ ವಿಡಿಯೊದಲ್ಲಿ ಎಡಗೈ ಬ್ಯಾಟರ್ ವೈಡ್ ಎಸೆತವನ್ನು ಆಡಲು ಕ್ರೀಸ್‌ನಿಂದ ಮುಂದೆ ಬಂದು ಬೀಟ್ ಆಗುತ್ತಾರೆ. ಕೀಪರ್ ಸ್ಟಂಪಿಂಗ್ ಮಾಡುತ್ತಾರೆ. ಈ ಕುರಿತು ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಿದಾಗ ದೇವವ್ರತ ದಾಸ್ ಅವರು ಲಭ್ಯರಾಗಲಿಲ್ಲ.

‘ಮಾ.2ರಂದು ಟೂರ್ನಿ ಕಮಿಟಿಯ ಸಭೆ ಕರೆದಿದ್ದೇವೆ. ಈ ವಿಷಯವನ್ನು ಚರ್ಚಿಸಿ ಪರಿಶೀಲಿಸಲಾಗುವುದು. ಅಂಪೈರ್‌ಗಳಿಂದ ವರದಿ ತರಿಸಿ ನೋಡುತ್ತೇವೆ’ ಎಂದು ಸಿಎಬಿ ಅಧ್ಯಕ್ಷ ಸ್ನೇಹಾಶಿಶ್ ಗಂಗೂಲಿ ಪ್ರತಿಕ್ರಿಯಿಸಿದ್ದಾರೆ.

ಡಬ್ಲ್ಯುಎಫ್‌ಐ ಆಯ್ಕೆ ಟ್ರಯಲ್ಸ್: ಬಜರಂಗ್ ವಿರೋಧ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಇದೇ 10 ಮತ್ತು 11ರಂದು ಆಯೋಜಿಸಿರುವ ರಾಷ್ಟ್ರೀಯ ತಂಡಕ್ಕಾಗಿ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ ಹೇಳಿದ್ದಾರೆ.

ಆಯ್ಕೆ ಪ್ರಕ್ರಿಯೆ ನಡೆಸದಂತೆ ದೆಹಲಿ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಬಜರಂಗ್, ವಿನೇಶಾ ಫೋಗಾಟ್, ಸಾಕ್ಷಿ ಮಲಿಕ್ ಮತ್ತು ಸತ್ಯವ್ರತ್ ಕಡಿಯಾನ್ ಅವರು ಸೇರಿ ಜಂಟಿಯಾಗಿ ನ್ಯಾಯಾಲಯಲ್ಲಿ ಅರ್ಜಿ ಸಲ್ಲಿಸಿದ್ದಾರೆಂದು ಮೂಲಗಳು ತಿಳಿಸಿವೆ. ಆದರೆ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವ ಕುರಿತು ಬಜರಂಗ್ ಖಚಿತಪಡಿಸಿಲ್ಲ.

ಕಿರ್ಗಿಸ್ತಾನದಲ್ಲಿ ನಡೆಯಲಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್ ಒಲಿಂಪಿಕ್ ಕ್ವಾಲಿಫೈಯರ್ ನಲ್ಲಿ ಆಡುವ ತಂಡವನ್ನು ಡಬ್ಲ್ಯುಎಫ್‌ಐ ಆಯ್ಕೆ ಟ್ರಯಲ್ಸ್ ಮೂಲಕ ನಿರ್ಧರಿಸಲಾಗುವುದು. ಆದರೆ, ಸದ್ಯ ಬಜರಂಗ್ ಅವರು ರಷ್ಯಾದಲ್ಲಿದ್ದಾರೆ.

‘ನಾನು ಟ್ರಯಲ್ಸ್‌ನಲ್ಲಿ ಭಾಗವಹಿಸದಿದ್ದರೆ ತರಬೇತಿಗಾಗಿ ವ್ಯಯಿಸಿದ ₹ 30 ಲಕ್ಷ ವ್ಯರ್ಥವಾಗಬಹುದು. ಆದರೆ ಅಮಾನತುಗೊಂಡಿರುವ ಡಬ್ಲ್ಯುಎಫ್‌ಐ ಟ್ರಯಲ್ಸ್ ಆಯೋಜಿಸುತ್ತಿರುವುದು ಯಾಕೆ? ಸರ್ಕಾರ ಯಾಕೆ ಮೌನವಾಗಿದೆ? ಅಡ್‌ಹಾಕ್ ಸಮಿತಿಯು ಟ್ರಯಲ್ಸ್ ಆಯೋಜನೆ ಮಾಡಿದ್ದರೆ ನಾವು ಸ್ಪರ್ಧಿಸುತ್ತಿದ್ದೆವು’ ಎಂದು ಬಜರಂಗ್ ಹೇಳಿದ್ದಾರೆ.

ಬಜರಂಗ್ ಪೂನಿಯಾ

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ‘ಎ’ ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದ ಯುನೈಟೆಡ್ ಎಫ್‌ಸಿ ಕೊಡಗು ತಂಡಕ್ಕೆ ಫುಟ್‌ಬಾಲ್ ಮಾಜಿ ಆಟಗಾರ್ತಿ ಚಿತ್ರಾ ಗಂಗಾಧರ್ ಟ್ರೋಫಿಯನ್ನು ಹಸ್ತಾಂತರಿಸಿದರು. ಕೆಎಸ್‌ಎಫ್‌ಎ ಪ್ರಧಾನ ಕಾರ್ಯದರ್ಶಿ ಎಂ. ಕುಮಾರ್, ಉಪ ಪ್ರಧಾನ ಕಾರ್ಯದರ್ಶಿ ಅಸ್ಲಾಂ ಖಾನ್, ಖಜಾಂಚಿ ಬಿ.ಕೆ. ಮುನಿರಾಜು ಇದ್ದರು. ಪಾಸ್ ಎಫ್‌ಸಿ ತಂಡವು ರನ್ನರ್ ಅಪ್ ಸ್ಥಾನ ಪಡೆಯಿತು.

ರೊನಾಲ್ಡೊ ಅಮಾನತು

ರಿಯಾದ್ (ಎಎಫ್‌ಪಿ): ಕಳೆದ ವಾರದ ಕೊನೆಯಲ್ಲಿ ನಡೆದ ಲೀಗ್ ಪಂದ್ಯದ ವೇಳೆ ಅಂಕಣದಲ್ಲಿ ‘ಪ್ರಚೋದನಗೆ ಕಾರಣವಾಗುವ ಸನ್ನೆ ಪ್ರದರ್ಶಿಸಿದ್ದಕ್ಕೆ’ ಕ್ರಿಸ್ಟಿಯಾನೊ ರೊನಾಲ್ಡೊ ಅವರಿಗೆ ಸೌದಿ ಅರೇಬಿಯಾ ಫುಟ್‌ಬಾಲ್ ಫೆಡರೇಷನ್ ಒಂದು ಪಂದ್ಯಕ್ಕೆ ಅಮಾನತು ಮಾಡಿದೆ. ಇದರ ಜೊತೆಗೆ ₹6.63 ಲಕ್ಷ ದಂಡ ವಿಧಿಸಿದೆ.

ಅಲ್ ನಾಸರ್ ತಂಡದ ನಾಯಕರೂ ಆಗಿರುವ ರೊನಾಲ್ಡೊ ತೋರಿದ ಸನ್ನೆಯು ನಿಯಮದ ಉಲ್ಲಂಘನೆಯಾಗಿದ್ದು, ಪಂದ್ಯದ ವೇಳೆ ಪ್ರೇಕ್ಷಕರ ಪ್ರಚೋದನೆಗೆ ಕಾರಣವಾಗುತ್ತದೆ ಎಂದು ಫೆಡರೇಷನ್ ತಿಳಿಸಿದೆ. ಈ ನಿರ್ಧಾರದ ವಿರುದ್ಧ ಮೇಲ್ಮನವಿ ಸಲ್ಲಿಸುವಂತಿಲ್ಲ.

ಸಂತೋಷ್ ಟ್ರೋಫಿ: ರೈಲ್ವೇಸ್‌ಗೆ ಮಣಿದ ಕರ್ನಾಟಕ

ಯುಪಿಯ (ಅರುಣಾಚಲ ಪ್ರದೇಶ), (ಪಿಟಿಐ): ರೈಲ್ವೇಸ್ ತಂಡವು ಸಂತೋಷ್ ಟ್ರೋಫಿ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ‘ಬಿ’ ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡವನ್ನು 1–0 ಗೋಲಿನಿಂದ ಸೋಲಿಸಿತು. ಗುರುವಾರ ನಡೆದ ಪಂದ್ಯದ ಏಕೈಕ ಗೋಲನ್ನು ಸುಬ್ರತಾ ಮುರ್ಮು 53ನೇ ನಿಮಿಷ ಗಳಿಸಿದರು.

ಈ ಸೋಲಿನಿಂದ ಕರ್ನಾಟಕದ ಕ್ವಾರ್ಟರ್‌ಫೈನಲ್ ಆಸೆ ಕ್ಷೀಣವಾಯಿತು. ತಂಡ ಆಡಿರುವ ನಾಲ್ಕು ಪಂದ್ಯಗಳಿಂದ ಎರಡು ಪಾಯಿಂಟ್‌ಗಳನ್ನು ಮಾತ್ರ ಗಳಿಸಿದೆ. ಇನ್ನೊಂದೆಡೆ ರೈಲ್ವೇಸ್ ತಂಡ ನಾಲ್ಕು ಪಂದ್ಯಗಳಿಂದ ಏಳು ಪಾಯಿಂಟ್ಸ್ ಕಲೆಹಾಕಿದ್ದು ಎಂಟರ ಘಟ್ಟಕ್ಕೇರುವ ಅವಕಾಶ ಉಜ್ವಲಗೊಳಿಸಿದೆ. ಮಿಜೋರಾಮ್ ಎದುರು ಕೊನೆಯ ಪಂದ್ಯ ‘ಡ್ರಾ’ ಆದರೂ ರೈಲ್ವೇಸ್ ದಾರಿ ಸುಗಮವಾಗಲಿದೆ.

ಮಣಿಪುರ ತಂಡ ದಿನ ಎರಡನೇ ಪಂದ್ಯದಲ್ಲಿ 4–1 ಗೋಲುಗಳಿಂದ ಮಿಜೋರಾಮ್ ತಂಡವನ್ನು ಸೋಲಿಸಿ ಕ್ವಾರ್ಟರ್‌ಫೈನಲ್ ಸ್ಥಾನ ಖಚಿತಪಡಿಸಿಕೊಂಡಿತು. ಫಿಲಾಂ ಸನತೊಯಿ ಮೈಥೇಯಿ (35, 90ನೇ ನಿಮಿಷ), ಲೀಮಾಜಮ್ ಸಂಗಕರ್ ಸಿಂಗ್ (8ನೇ) ಮತ್ತು ಸಬ್‌ಸ್ಟಿಟ್ಯೂಟ್ ಪೆಬಾಮ್ ರೆನೆಡಿ ಸಿಂಗ್ (56ನೇ ನಿಮಿಷ) ಮಣಿಪುರ ಪರ ಗೋಲು ಗಳಿಸಿದರು. ಮಿಜೋರಾಮ್ ಪರ ಮಲ್ಸಾಮ್‌ಜುವಾಲಾ ತ್ಲಾಂಗ್ಟೆ (84ನೇ ನಿಮಿಷ) ಸೋಲಿನ ಅಂತರ ಕಡಿಮೆ ಮಾಡಿದರು.

ಮಣಿಪುರ ಬಿ ಗುಂಪಿನಲ್ಲಿ 4 ಪಂದ್ಯಗಳಿಂದ 10 ಪಾಯಿಂಟ್ಸ್ ಸಂಗ್ರಹಿಸಿದ್ದು, ಅಗ್ರಸ್ಥಾನದಲ್ಲಿದೆ.